ಪರಾಮರ್ಶೆಗಳು

ಸುಬ್ರಾವ್ ಕೃಷ್ಣ ಹೆಗಡೆ

ಪರಮಹಂಸಗಾನ

ಪ್ರತಿಜ್ಞಾ ಪೂರ್ತಿ

(ಪೌರಾಣಿಕ ನಾಟಕ)

ಸುಬ್ರಾವ್ ಕೃಷ್ಣ ಹೆಗಡೆ,
ಕಾನಗೋಡ್ ಶಿರ್ಶಿ.

ಅಂತರಂಗ ಕಾರ್ಯಾಲಯ, ಉಡುಪಿ

1—00

ಮುದ್ರಕರು:

ಕೆ. ಹೊನ್ನಯ್ಯ ಶೆಟ್ಟಿ,
ನವಯುಗ ಪ್ರೆಸ್,
ಉಡುಪಿ

ವಿಕ್ರಯಾಧಿಕಾರಿಗಳು:
ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ.

ಅರಿಕೆ

ವಿಶ್ವಸಾಹಿತ್ಯಗಳಲ್ಲಿಯೇ 'ಮಹಾಭಾರತ'ಕ್ಕೆ ಒಂದು ಗಣ್ಯ ಸ್ಥಾನ ಇದೆ ಎಂಬುದನ್ನು ಪಾಶ್ಚಾತ್ಯ ವಿಮರ್ಶಕರೂ ಮುಕ್ತಕಂಠದಿಂದ ಹೇಳಿದ್ದಾರೆ. ಈ ಶ್ರೇಷ್ಠ ಗ್ರಂಥದ ಅಂಗೋಪಾಂಗಗಳು ಪ್ರಪಂಚದ ಭಾಷೆಗಳಲ್ಲಿ ಗದ್ಯ-ಪದ್ಯ-ನಾಟಕ ಮುಂತಾದ ವಿವಿಧ ರೂಪಗಳಿಂದ ಮನೋಹರವಾಗಿ ಬೆಳಗುತ್ತಲಿವೆ. ಇಷ್ಟೇ ಅಲ್ಲ ಒಂದೊಂದು ಭಾಷೆಯಲ್ಲಿಯೇ ಹಲವು ರೀತಿಯಿಂದ ಪ್ರಕಾಶಿಸುತ್ತಿವೆ. ಹೀಗೆ ಪ್ರಕಾಶಿಸುತ್ತಿರುವ ಭಾರತದ ಕೆಲ ಗ್ರಂಥಗಳ ಕೊನೆಯ ಭಾಗದ ಸನ್ನಿವೇಶಗಳನ್ನಾಯ್ದು ಈ ನಾಟಕ ರೂಪುಗೊಂಡಿದೆ. ಹೆಚ್ಚಾಗಿ ವಿದ್ಯಾರ್ಥಿಗಳನ್ನುದ್ದೇಶಿಸಿ ಅದಷ್ಟು ಸರಳ ಶೈಲಿಯಿಂದ ಬರೆಯಲು ಯತ್ನಿಸಲಾಗಿದೆ. ಭಾರತೀಯ ಪುರಾಣ ಸಂಸ್ಕೃತಿಯ ಆದರ್ಶ—ಅಭಿಮಾನ—ಸ್ಥೈರ್ಯ—ವೀರತನ—ಸತ್ಯ—ನೀತಿ—ಐಕ್ಯತೆ ಮುಂತಾದ ಹಲವು ಶಾಖೋಪಶಾಖೆಗಳು ಭವಿಷ್ಯಭಾರತ ನಿರ್ಮಾಪಕರಾದ ಇಂದಿನ ವಿದ್ಯಾರ್ಥಿ ವರ್ಗದ ನಾಡಿ ನಾಡಿಗಳಲ್ಲಿ ಪ್ರವಹಿಸುವಂತಾಗಲಿ. ಆಗಲೇ ಇಂಥ ಕೃತಿಗಳ ಉದ್ದೇಶ ಸಾಫಲ್ಯ.

ಅರ್ಪಣೆ

ಈ ಪುಸ್ತಕವನ್ನು
ಅತ್ಯಲ್ಪ ಕಾಲದಲ್ಲಿ ತೀವ್ರ ಪ್ರಗತಿಗೊಳ್ಳುತ್ತಲಿದ್ದ
ಕಾನಗೋಡ—ಯಡಳ್ಳಿ ಮಾಧ್ಯಮಿಕ ಶಾಲೆಯ
ಮಕ್ಕಳ ಕಲಾಕೂಟದ ಪರವಾಗಿ ಈ
ಪ್ರಾಂತದ ಇತರ ಎಲ್ಲ ಕಲಾಕೂಟ
ಗಳಿಗೆ ಆತ್ಮಾದರದಿಂದ
ಸಮರ್ಪಿಸಲಾಗಿದೆ.

ಪ್ರತಿಜ್ಞಾ ಪೂರ್ತಿ

(ಕುರುಕ್ಷೇತ್ರದ ಪಾರ್ಶ್ವಭೂಮಿ, ಆಚಾರ್ಯ ಸಂಜಯನ ಪ್ರವೇಶ)

ಸಂಜಯ—(ತನ್ನೊಳಗೆ ಸುತ್ತಲೂ ನಿರೀಕ್ಷಿಸಿ ಕಂಪಿಸುತ್ತ) ಪವಿತ್ರವಾದ ಕುರುಕ್ಷೇತ್ರವು ಎಷ್ಟು ಭೀಕರವಾಗಿ ಕಾಣುತ್ತಿದೆ. ಶಾಂತ-ಸುಂದರವಾದ ತಪೋಭೂಮಿಯು ಎದೆ ನಡುಗಿಸುವ ರುದ್ರಭೂಮಿಯಾಗಿದೆ ಅಂತೂ ಯುದ್ಧದ ಹೆಸರಿನಲ್ಲಿ ಕೌರವ ಕುಲವು ಧ್ವಂಸಗೊಂಡಿತು. ಇನ್ನುಳಿದವನು ಒಬ್ಬಂಟಿಗನಾದ ಕೌರವ, ಆದರೂ ಅವನ ದರ್ಪ-ಅಭಿಮಾನ-ದೃಢತೆಗಳು ಕೊಂಚವೂ ಕುಗ್ಗಲಿಲ್ಲವಲ್ಲ. ಪಾಂಡವರೊಡನೆ ಹೋರಾಡುವ ವೀರಶ್ರೀಯು ಆತನ ಶರೀರದಿಂದ ಈಗಲೂ ಹೊರಚಿಮ್ಮುತ್ತಿದೆ. (ಅಸಹ್ಯವಾಗಿ ಮುಂದೆನೋಡುತ್ತ ಒಮ್ಮೆಲೆ ನಿಂತು) ಇದೇನು! ಶ್ವಸನೇಂದ್ರಿಯದ ರೋಮ ರೋಮಗಳನ್ನೂ ಸೀಳಿಬಿಡುವ ದುರ್ಗಂಧ ಕೋಟಿ ಕೋಟಿ ನರದೇಹಗಳು ರಣಭೂಮಿಯಲ್ಲಿ ನಾರುತ್ತಲಿವೆ. ಸುಂದರ ಸುಕುಮಾರ ದೇಹಗಳೂ ವಿರೂಪಗೊಂಡು ಎದೆ ನಡುಗಿಸುತ್ತಿವೆ. ಎಂಥಮಹಾತ್ಮರು-ಶೂರರು-ಧೀಮಂತರು ಈ ಯುದ್ಧದ ದಳ್ಳುರಿಯಲ್ಲಿ ದಗ್ಧವಾದರು! ಅಯ್ಯೋ ಈ ಯುದ್ಧದಿಂದ ಪ್ರಪಂಚವೇ ಶೂನ್ಯವಾಗಿ ಕಾಣುತ್ತಿದೆಯಲ್ಲ ದೇವಾ! ನೋಡಲಾರೆ! ಈ ಯುದ್ಧಭೂಮಿಯನ್ನು (ಹಾಯ್ ಎಂದು ಕಣ್ಮುಚ್ಚುವನು)

(ಸಾತ್ಯಕಿಯ ಪ್ರವೇಶ)

ಸಾತ್ಯಕಿ— ನಿಲ್ಲು, ಸಂಜಯ! ಅಂಜುತ್ತ ಸಾಗುತ್ತಿರುವ ಈ ನಟನೆ ನನ್ನೆದುರಿಗೆ ನಡೆಯಲಾರದು. ಎಲ್ಲಿರುವನು ಆ ದುರುಳ ದುರ್ಯೋಧನನು ಹೇಳು.

ಸಂಜಯ—(ಕಂಪಿತ ಸ್ವರದಿಂದ) ಸಾತ್ಯಕಿ! ಅದೇಕೆ ಅಷ್ಟು ಕಠೋರತೆ. ಕೌರವೇಂದ್ರನನ್ನು ಹುಡುಕಿ ಹುಡುಕಿ ಕೊನೆಗೂ ಕಾಣದೆ ನಿರಾಶೆಗೊಂಡು ಹೋಗುತ್ತಿರುವೆನು.

ಸಾತ್ಯಕಿ—ಎಲ್ಲಿಗೆ ಹೋಗುವದು. ಸುಳ್ಳುಹೇಳುತ್ತಿರುವೆ- ಈ ಸಾತ್ಯಕಿಯ ಮುಂದೆ ಸುಳ್ಳುಅಲ್ಲವೇ!

ಸಂಜಯ – ಇಲ್ಲ ಸಾತ್ಯಕೀ! ಸತ್ಯವೇ ಸರಿ. ಕೌರವನು ಎಷ್ಟು ಹುಡುಕಿದರೂ ಕಾಣಲಿಲ್ಲ. ಧೃತರಾಷ್ಟ್ರನಿಗೆ ಈ ಸುದ್ದಿಯನ್ನು ತಿಳಿಸಲು ಚಿಂತಾತುರನಾಗಿ ಹೊರಟಿರುವೆ ನಿನ್ನೆದುರು ಸುಳ್ಳು ಸಾಧ್ಯವೇ?

ಸಾತ್ಯಕಿ—(ಕೋಪದಿಂದ ಮಾರ್ಗವನ್ನು ಪ್ರತಿಬಂಧಿಸಿ) ಏನು ವಂಚಕಿ! ವಿವೇಕಾಂಧ ಕೌರವನೊಡನೆ ಮನಸ್ವೀ ಮಾತನಾಡಿ ಜನ್ಮಾಂಧ ಧೃತರಾಷ್ಟ್ರನಿಗೆಲ್ಲವನ್ನು ಅರುಹಲು ಹೊರಟು ನನಗೆ ಸುಳ್ಳನ್ನು ನಂಬಿಸುವೆಯಾ ಹೇಳು ಎಲ್ಲಿ ಅವಿತಿರುವನು ಹೇಳು

ಸಂಜಯ—(ಸ್ವಲ್ಪ ತಡವರಿಸುತ್ತ ನಿಶ್ಚಿತ ಸ್ವರದಿಂದ) ಇಲ್ಲ ಸಾತ್ಯಕಿ! ನಿಶ್ಚಿತವಾಗಿಯೂ ಕಂಡಿಲ್ಲ. ಸುಮ್ಮನೆ ಅಷ್ಟೊಂದು ಬಿರುಸು ಏಕೆ?

ಸಾತ್ಯಕಿ— (ಸಂತಪ್ತನಾಗಿ ಖಡ್ಗವನ್ನು ಸೆಳೆದು) ವಂಚಕತನವು ನಿನ್ನಲ್ಲಿಯೂ ಬೇರೂರಿತು. ಪರಮವಂಚಕಿ ಕೌರವನ ಅನ್ನದ ಪ್ರಭಾವ. ಪಾಂಡವರ ಹಿತೈಷಿಯೆಂದು ನಟಿಸಿ ಕೌರವರಿಗೆ ಗುಟ್ಟನ್ನೆಲ್ಲ ಅರುಹುವ ಬೇಹುಗಾರ. ನಿನ್ನಂಥ ಹಿತಶತ್ರುಗಳಿಗೆ ಇದೋ ತಕ್ಕ ಪ್ರಾಯಶ್ಚಿತ್ತ. ಕೌರವರ ಹೆಣಗಳೊಂದಿಗೇ ಸೇರಬಹುದು. (ಎಂದು ಸಂಜಯನ ಜಂಡಿಕೆ ಹಿಡಿದು ಕೊಲ್ಲಲು ಖಡ್ಗವೆತ್ತುವನು ಕೃಪಾಶ್ವತ್ಥಾಮರ ಪ್ರವೇಶ)

ಅಶ್ವತ್ಥಾಮ—ಹಾಂ ತಡೆ ಸಾತ್ಯಕಿ! ನಿನ್ನ ಹೇಡಿತನದ ಪೌರುಷವನ್ನು ನಿರಸ್ತ್ರನಾದ ಈ ಬಡಪಾಯಿಯ ಮೇಲೆ ತೋರಿಸಬೇಡ ನಿಜವಾದ ವೀರರನ್ನು ಬಿಟ್ಟು ಸಾಧುಗಳ ಮೇಲೆ ಪರಾಕ್ರಮ ತೋರಿಸುವದಕ್ಕಿಂತ ಎಲ್ಲಿಯಾದರೂ ಹದ್ದು ಕಾಗೆಗಳನ್ನು ಹೊಡಿಯುತ್ತಿರುವದು ಮೇಲು (ಎಂದು ಸಾತ್ಯಕಿಯ ಕೈ ಹಿಡಿದು ಜಗ್ಗುವನು).

ಸಾತ್ಯಕಿ—(ಅಶ್ವತ್ಥಾಮನನ್ನು ದುರದುರ ನೋಡುತ್ತ) ಸಂಜಯನ ಗಾಳಿ ನಿನಗೆ ಬಂದಿದೆಯೇ ಗುರುಪುತ್ರ! ಸರಿದುನಿಲ್ಲು. ಬಡ ವಿಪ್ರರಿಗೆ ಕ್ಷಾತ್ರವೀರರ ರಣರಂಗದ ವಿಚಾರವೇಕೆ?

ಅಶ್ವತ್ಥಾಮ—(ವ್ಯಂಗವಾಗಿ) ನಿನ್ನಂಥವರ ಈ ವೀರತನವು ನನ್ನಂಥ ಬಡ ವಿಪ್ರನನ್ನೂ ನಾಚಿಸುತ್ತಿದೆ ಅದಕ್ಕಾಗಿ ವಿಚಾರಿಸ ಬೇಕಾಯಿತು. ಸಂಜಯನಂಥ ಸಾಧುಸಭ್ಯರನ್ನು ಖಡ್ಗ ಹಿರಿದು ಕೊಲ್ಲುವದೆಂದರೆ ಸಾಮಾನ್ಯವೇ! (ಕ್ರೋಧದಿಂದ) ಕೇಳು ಸಾತ್ಯಕಿ: ಸಂಪತ್ತು ಒಂದಲ್ಲ ಹಲವು ರೀತಿಯಲ್ಲಿದೆ. ವಿದ್ವತ್ತು-ಬುದ್ಧಿಶಕ್ತಿಗಳು ಅತ್ಯುಚ್ಚ ಸಂಪತ್ತುಗಳು. ಹೀಗಿರುವಾಗ ಚಂಚಲ ಗತಿಯ ದ್ರವ್ಯ ವೊಂದೇ ಮಹಾಸಂಪತ್ತೆಂದು ನಿನ್ನಂಥ ಗರ್ವಾಂಧರು ತಿಳಿದುದರಲ್ಲಿ ಆಶ್ಚರ್ಯವಿಲ್ಲ. ಬಡವಿಪ್ರನೆಂದು ಕೀಳುಗಳೆಯಲು ನಿನ್ನಲ್ಲೀಗ ಯಾರೂ ಭಿಕ್ಷೆಗಾಗಿ ಬಂದಿಲ್ಲ ಜೋಕೆಯಿಂದ ಮಾತನಾಡು ಸಾತ್ಯಕೀ!

ಸಾತ್ಯಕಿ ಅಶ್ವತ್ಥಾಮಾ ಬಡವಿಪ್ರನೆಂದುದು ನಿನ್ನ ಮಟ್ಟಿಗೆ ಒಳ್ಳೇ ಗೌರವಿಸಿ ಹೇಳಿದಂತಾಯಿತು. ಅದು ಬಾಯಿ ತಪ್ಪಿ ಹೇಳಿದ ಮಾತಲ್ಲ ತುತ್ತು ಕೂಳಿಗೆ ವಿದ್ಯವನ್ನು ಮಾರಿ ಎಂಥ ಹೇಯ ಕೃತ್ಯಕ್ಕೂ ಹಿಂಜರಿಯದ ನಿಮಗೆ ತಕ್ಕ ಕೀಳು ಶಬ್ದವು ಇನ್ನೂ ಸಿಗಲಿಲ್ಲ.

ಅಶ್ವತ್ಥಾಮ—(ಕ್ರೋಧದಿಂದ ಖಡ್ಗ ಸೆಳೆದು) ನಾವೇನು ಅನ್ನ ಕ್ಕಾಗಿ ಅಂಡಲೆಯುವವರೆಂದು ತಿಳಿದೆಯಾ! ಪರಮಘಾತಕಿ! ಸ್ವಾಮಿ ನಿಷ್ಠೆ-ಕರ್ತವ್ಯಗಳ ಯೋಗ್ಯತೆಯರಿಯದ ನಿನಗೆ ಈ ಖಡ್ಗದಿಂದಲೇ ಬುದ್ಧಿಗಲಿಸಬೇಕಾಯಿತು! (ಇಬ್ಬರೂ ಖಡ್ಗವೆತ್ತುವರು).

ಕೃಪ—(ಸುತ್ತಲೂ ನಿರೀಕ್ಷಿಸಿ) ಹೊತ್ತು ಇಳಿಮುಖವಾಯಿತು ಮುಂಚಿತವಾಗಿ ದ್ವೈಪಾಯನ ಸರೋವರವನ್ನು ಕಾಣಬೇಕಾಗಿದೆ. ಇವರು ಯುದ್ಧಕ್ಕೆ ನಿಂತರೆ ಕೌರವನನ್ನು ಕಾಣುವದು ಅಸಂಭವ. ಅಶ್ವತ್ಥಾಮನನ್ನು ಒಲ್ಲೈಸಿ ಉಪಾಯದಿಂದ ಈ ಸ್ಥಳವನ್ನು ದಾಟ ಬೇಕಾಗಿದೆ. (ಎಂದಾಲೋಚಿಸಿ ಅಶ್ವತ್ಥಾಮನನ್ನು ಕುರಿತು) ಇದೇನು ಅಶ್ವತ್ಥಾಮಾ! ಯಾರಿಗಾಗಿ ನಿಮ್ಮೊಳಗೆ ಯುದ್ಧ? ಕುರುಕುಲವು ನಿರ್ಮೂಲವಾಯಿತು; ಪಾಂಡವರೂ ಅದೃಶ್ಯರು. ಉದ್ದಾಮ ಸಾತ್ಯಕಿ ಯೊಡನೆ ಜಗಳವೇಕೆ? ಏಳು ನಾವು ನಮ್ಮ ಕಾರ್ಯಕ್ಕಾಗಿ ತೆರ ಳೋಣ. (ಎಂದು ಅಶ್ವತ್ಥಾಮನ ಕೈ ಹಿಡಿದುಕೊಂಡು ಹೋಗುವನು ಸಾತ್ಯಕಿ ಅವರನ್ನು ಕಡೆಗಣ್ಣಿನಿಂದ ನೋಡುತ್ತ ನಿಲ್ಲುವನು).

[ಪರದೆ ಬೀಳುವದು]

[ಸಾವಋನ್ನ ಅಡವಿಯು ಪ್ರದೇಶ. ದಾರಿಗುಂಟ ಕೃಪಾಶ್ವತ್ಥಾಮರು ಸಾಗುತ್ತಿರುವರು]

ಅಶ್ವತ್ಥಾಮ—ಮಾವಾ! ಎಂಥ ಸಂದರ್ಭವದು. ನಾವು ಬರದಿದ್ದರೆ ಆ ಉದ್ಧಟ ಸಾತ್ಯಕಿಯು ಬಡ ಸಂಜಯನನ್ನು ಕ್ರೂರವಾಗಿ ಕೊಲ್ಲುತ್ತಿದ್ದನು.

ಕೃಪ—ಈ ಭಯಂಕರ ಯುದ್ಧದ ಮೂಲಪುರುಷನೇ ಸಾತ್ಯಕಿಯು. ಅಶ್ವತ್ಥಾಮ! ವಿರಾಟನಗರಿಯಲ್ಲಿ ದ್ರುಪದ—ಬಲರಾಮ—ಶ್ರೀ ಕೃಷ್ಣ ಮುಂತಾದ ಬಂಧುಗಳೊಂದಿಗೆ ಸಾಗುತ್ತಿರುವ ಪಾಂಡವರ ಸಂಧಾನದ ಪ್ರಸ್ತಾಪವನ್ನು ಸುಟ್ಟು ಹಾಕಿದ ಉದ್ಧಟನೇ ಈ ಸಾತ್ಯಕಿಯು. ಆಗ ಇವನ ಗೊಂದಲವೇಳದಿದ್ದರೆ ಬಲದೇವನ ಮುಂದಾಳ್ತನದಲ್ಲಿ ಪಾಂಡವರು ದ್ಯೂತಪಣದ ನಿರ್ಣಯದಂತೆ ಅರ್ಧ ರಾಜ್ಯವನ್ನುವನ್ನು ಕೇಳುತ್ತಿರುವಾಗ ಕೌರವನು ನಿರುಪಾಯನಾಗಿ ಕೊಡಲು ಒಪ್ಪುತ್ತಿದ್ದನು. ಕ್ಷಾತ್ರಲೋಕಕ್ಕೆ ಕ್ಷೇಮಕರವಾದ ಅಂಥ ಸಂದರ್ಭವನ್ನು ಹಾಳುಗೆಡಿಸಿ ಕರಾಲಮೃತ್ಯು ಸ್ವರೂಪ ಕೊಟ್ಟವನು ಈ ದುಷ್ಟ ಸಾತ್ಯಕಿ! ಪಾಂಡವರು ನಿಜವಾಗಿ ನಿಷ್ಕಲಂಕರು.

ಅಶ್ವತ್ಥಾಮ—ಇಷ್ಟೇ ಅಲ್ಲ, ಸತ್ಯವಂತರು. (ನೆನಪಿಸಿ) ಮಾವಾ! ಬೇಗ ಕಾಲು ಹಾಕಿರಿ (ಮುಂದೆ ನೋಡಿ) ಅದೋ ದೂರದಲ್ಲಿ ದ್ವೈಪಾಯನ ಸರೋವರವು ಕಂಗೊಳಿಸುತ್ತಿದೆ. ಪೂರ್ತಿ ಸಾಯಂಕಾಲವಾಗುವದರೊಳಗೆ ಕೌರವೇಂದ್ರನಿಗೆ ಧೈರ್ಯ ಹೇಳಿ ಹೋಗೋಣ!

ಕೃಪ—(ಆಲಿಸಿ ಅಂಜಿಕೆಯಿಂದ) ಅದಾರದೋ ಹೆಜ್ಜೆಯ ಸಪ್ಪಳವಾಗುತ್ತಿದೆ. ಪಾಂಡವರ ಗೂಢಚಾರರಿರಬಹುದು, ಮೌನದಿಂದ ಮೆಲ್ಲನೆ ಸಾಗೋಣ.

ಕೃತವರ್ಮ—(ಪ್ರವೇಶಿಸಿ) ಹೌದು ಬೇಹುಗಾರರ ಭೀತಿಯಿದೆ. ಕೌರವೇಂದ್ರನ ವಿಶ್ರಾಂತಿಗೆ ಭಂಗ ಬರದಂತೆ ನಾವು ವರ್ತಿಸಬೇಕಾಗಿದೆ. ಪಾಂಡು ವೀರರಿಗೆ ಕೊಂಚ ಮಾತ್ರವೂ ತಿಳಿಯದಂತೆ ನಾವು ವ್ಯವ

ಹರಿಸಬೇಕೆಂದು ಸಂಜಯರು ಮತ್ತೊಮ್ಮೆ ಸೂಚಿಸಿದ್ದಾರೆ. ಆಚಾರ್ಯರೆ! ಸಂಜಯರು ಎಂಥ ಉಪಕಾರ ಮಾಡಿದರು.

ಅಶ್ವತ್ಥಾಮ— ಹೌದು; ಸಂಜಯರು ಕುರುರಾಜನ ನೆಲೆಯನ್ನು ತಿಳಿಸದಿದ್ದರೆ ಭಾರತಯುದ್ಧದ ವಿರಾಮವೆಂದೇ ತಿಳಿಯಬೇಕಿತ್ತು ಇನ್ನಾವ ಗುಡ್ಡಕಾಡುಗಳಲ್ಲಿ ಅಲೆಯಬೇಕಾಗುತಿತ್ತೋ ಏನೊ! ಅದೆಲ್ಲವೂ ತಪ್ಪಿ ನೇರವಾಗಿ ಕುರುರಾಜನನ್ನೇ ಕಾಣುವ ಸೌಭಾಗ್ಯವು ಸಂಜಯರಿಂದ ದೊರಕಿತು. ರಾಜನಿಷ್ಠೆಯಲ್ಲಿ ಸಂಜಯರು ನಮ್ಮಿಂತಲೂ ಒಂದು ಪಾಲು ಮಿಗಿಲು.

ಕೃತವರ್ಮ—ಇದು ನಿಜ. ಆಚಾರ್ಯರೇ ಸಾಮ್ರಾಜ್ಯ ಸಿಂಹಾಸನಕ್ಕಾಗಿ ರಕ್ತಸಮುದ್ರವೇ ಹರಿದರೂ ಸಾಕೆನಿಸಲಿಲ್ಲ. ಇನ್ನೂ ಕಣ್ಣೀರ ಕಾಲುವೆ ಕೊರೆಯಲು ಅಪ್ರತಿಮ ಕ್ಷಾತ್ರಪಿಂಡವು ಜಲಗರ್ಭದಲ್ಲಿ ವಿಶ್ರಮಿಸುತ್ತಿದೆ. ಇನ್ನೊಂದು ರಣರಂಗದ ನೂತನ ನಿರ್ಮಾಣ ಕಾರ್ಯವೇ ಉಳಿದಿದೆ.

ಕೃಪ—ಇದೋ ದ್ವೈಪಾಯನ ಸರೋವರವು ಸಮೀಪಿಸಿತು ಅಹಹ ಎಂಥ ದಿವ್ಯ ಸರೋವರವಿದು. ಯುದ್ಧ ಹಿಂಸೆಗಳಿಂದ ಕ್ಷೋಭೆಗೊಂಡ ಹೃದಯವನ್ನು ನೋಟಮಾತ್ರದಿಂದಲೇ ತಣಿಸುವ ಪ್ರಶಾಂತತೆ ಇದರಲ್ಲಿ ಅಡಕಗೊಂಡಿದೆ. ಹದಿನೆಂಟು ಅಕ್ಷೌಹಿಣೀ ಸೇನೆಯು ರಕ್ತಪ್ರವಾಹದಲ್ಲಿ ತೇಲಿಹೋದ ಅಪಾರ ದುಃಖವನ್ನು ಮರೆಸಿ ಕೌರವೇಂದ್ರನನ್ನು ವಿಶ್ರಾಂತಿಗೆ ಆಕರ್ಷಿಸುವ ಸೌಂದರ್ಯಶಕ್ತಿ ಇನ್ನಾವುದರಲ್ಲಿದೆ

ಅಶ್ವತ್ಥಾಮ—ಇಂಥರಮಣೀಯ ಪ್ರದೇಶದಲ್ಲಿ ನಮ್ಮರಾಜನು ವಿಶ್ರಮಿಸಿರುವದೂ ಒಂದು ಹೆಮ್ಮೆಯ ವಿಷಯವೇ ಸರಿ

ಕೃತವರ್ಮ—(ಭೂಮಿಯನ್ನು ನಿರೀಕ್ಷಿಸಿ) ಕುರುರಾಜನಪದ ಚಿಹ್ನೆಗಳು ಈ ತೀರ ಪ್ರದೇಶದಲ್ಲಿ ಅಲ್ಪಸ್ವಲ್ಪವಾಗಿ ಮೂಡಿವೆ

ಅಶ್ವತ್ಥಾಮ—(ಸರೋವರವನ್ನು ನೋಡಿ ಗೆಲುವಿನ ಮುಖದಿಂದ ರಾಜೇಂದ್ರ! ಸುಯೋಧನ! ಏಳು ಏಳು ಜಲಶಯನದಿಂದ ಮೇಲೆ ಬಾ. ಕ್ಷಾತ್ರತೇಜಸ್ವಿನ ಮೂರ್ತರೂಪನಾದ ನೀನು ಹತಾಶನಾಗಬೇಡ

ಅಸಂಖ್ಯ ನರದೇಹಗಳು ಭೀಕರ ರಕ್ತಪ್ರವಾಹದಲ್ಲಿ ತೇಲಿಹೋದರೂ ಕುರುಸಿಂಹಾಸನವು ನಿನ್ನನ್ನೇ ಕರೆಯುತ್ತಿರುವದು.

ದುರ್ಯೋಧನ—(ನೀರಿನಿಂದ ಮೇಲೆದ್ದು ಗಂಭೀರ ಸಂತೋಷ ಮುದ್ರೆಯಿಂದ) ಈ ವೀರವಾಣಿಯು ಯಾರದು! ಗುರುಪುತ್ರನದೇ! ಹೌದು. ಧನ್ಯಗುರುಪುತ್ರಾ! ಜಗತ್ತಿನಲ್ಲಿ ನಿನ್ನಂಥ ಸ್ವಾಮಿನಿಷ್ಠರಿಂದಲೇ ಸ್ವಾಮಿಶಬ್ದವು ಇನ್ನೂ ಜೀವಂತ ಪ್ರಶಂಶಿಸುತ್ತಿರುವದು. ಆದರೆ ಕುರು ಸಿಂಹಾಸನವು ನನ್ನನ್ನೇ ಆಹ್ವಾನಿಸುವದು ಸ್ವಪ್ನದ ಮಾತು ಗುರುಪುತ್ರ! ಒಮ್ಮೆ ಸತ್ಯವಾದರೂ ಕರ್ಣನಂಥ ಪ್ರಾಣಪದಕಗಳನ್ನೇ ಕಳದುಕೊಂಡ ನನಗೆ ಜಗತ್ತೇ ಶೂನ್ಯವಾಗಿ ಕಾಣುತ್ತಿದೆ. ಈಗ ನಾನು ಬಯಸು ವದು ಕ್ಷೇತ್ರವೀರರಿಗೊಪ್ಪುವ ಮಹೇಂದ್ರಪದದ-ವೀರಸ್ವರ್ಗ ಅದಕ್ಕಾಗಿ ನೂತನ ರಣರಂಗ ನಿರ್ಮಿಸುವದೊಂದೇ ನನ್ನ ಬಲವಾದ ಇಚ್ಛೆ. ಇನ್ನು ಪಾಂಡವರ ಬಲವೆಷ್ಟಿದೆ ಗುರುಪುತ್ರ!

ಅಶ್ವತ್ಥಾಮ—ಒಂದೇ ಒಂದು ನಿಮಿಷಾರ್ಧದ ಕೆಲಸವಿದೆ ಹಾಗಾದರೆ ಕೌರವೇಂದ್ರ! ಹತ್ತುಸಾವಿರ ಕಾಲಾಳು ಎರಡೇ ಸಾವಿರ ರಥಿಕರು-ಇನ್ನುಳಿದವರು ಅತ್ಯಲ್ಪ.

ಕೃತವರ್ಮ—ಅತ್ಯಲ್ಪವೆಂದರೆ ಐದು ಸಾವಿರ ಕುದುರೆ ಏಳು ನೂರು ಆನೆ. ರಾಜೇಂದ್ರ! ನಿನ್ನ ಭಯಂಕರ ಗದೆಯ ಒಂದೇ ಆವೃತ್ತಿಗೆ ಸಾಲುವಷ್ಟೇ ಪಾಂಡು ಸೈನ್ಯವಿದೆ. ತಡವೇಕೆ: ಗುರು ಪುತ್ರನಿಗೆ ಸೇನಾಧಿಪತ್ಯವಹಿಸು. ನಾವು ನಾಲ್ವರೇ ಪಾಂಡವರನ್ನು ನಿರ್ನಾಮಗೊಳಿಸೋಣ!

ಕೌರವ— ಸ್ವಾಮಿನಿಷ್ಠರೇ! ಇದೀಗ ನಾನು ಪರಮ ಧನ್ಯನು. ಇಂಥ ಸಮಯದಲ್ಲೂ ನಿಮ್ಮ ಸ್ವಾಮಿಭಕ್ತಿ ಯುದ್ಧೋತ್ಸಾಹಗಳನ್ನು ನೋಡಿ ನನಗೆ ರಾಜ್ಯ ಪ್ರಾಪ್ತಿಗಿಂತಲೂ ಹೆಚ್ಚಿನ ಆನಂದವಾಯಿತು.

ಅಶ್ವತ್ಥಾಮ—ರಾಜೇಂದ್ರ ರಕ್ತಾಚ್ಛಾದಿತವಾದ ಪಶ್ಚಿಮ ದಿಗಂತ ವನ್ನು ನೋಡು! ಭಾನುದೇವನು ಪಾಂಡವರು ಇನ್ನು ಅಸ್ತರೆಂದು ಆ ಕಡೆಗೇ ಹೋಗುತ್ತಿರುವನು. ಏಳು. ನಿನ್ನ ರಾಜ್ಯಪ್ರಾಪ್ತಿಯ ಆನಂದ ವನ್ನು ಮನಸ್ಸಿನಿಂದ ಕೃತಿಯಲ್ಲಿಳಿಸೋಣ. ನಿನ್ನದೊಂದು ಆಜ್ಞೆಯಾದ

ಮರುಕ್ಷಣವೇ ವಿಜಯಿಯೆಂದು ತಿಳಿ. ಈಗಲೇ ತಣಿಯಲಾಗಿದ್ದ ಕುರುಕ್ಷೇತ್ರದ ಭೀಷಣ ಸಮರಾಗ್ನಿಯನ್ನು ಅತಿ ನೂತನ ರೀತಿಯಿಂದ ಜ್ವಲಿಸುವಂತೆ ಮಾಡೋಣ. ನೀನು ಹೇಗೂ ದೀಕ್ಷಿತನಾದ ಕುರು ಸಮ್ರಾಟನಿರುವಿ. ನಾನು ಆಚಾರ್ಯ ಪುತ್ರನಿರುವೆನು.

ಕೌರವ—(ಹರ್ಷೋದ್ಗಾರದಿಂದ) ವೀರರೇ! ನಿಮ್ಮ ಸ್ವಾಮಿ ನಿಷ್ಠೆಯ ಪರಾಕಾಷ್ಠತೆಯು ಜಗತ್ತಿಗೇ ಪಾಠವಾಗುವಂತಿದೆ. ನಿಮ್ಮ ಅಚಲವಿಶ್ವಾಸವು-ವೀರತನವು ಅಷ್ಟೇ ಪ್ರಬಲವಾಗಿದೆ ಯೆಂಬುದನ್ನು ನಾನು ಬಲ್ಲೆ. ಹದಿನೆಂಟನೆಯ ದಿನವಾದ .ಇಂದಿನ ನಿರ್ಣಾಯಕ ಯುದ್ಧದಲ್ಲಿ ನಾವೆಲ್ಲರೂ ಅತಿಶಯ ದಣಿದಿರುವೆವು. (ಗದ್ಗದ ವಾಣಿ ಯಿಂದ) ಇಂದಿನ ಸಾಯಂಕಾಲದಲ್ಲಿ ಪೂರ್ಣವಿಶ್ರಾಂತಿ ಪಡೆದು ನಾಳೆ ನಿಮ್ಮಿಚ್ಛೆಯಂತೆ ಮಾಡೋಣ. ನಾನು ಏಕಾಂಗಿಯಾಗಿಯೇ ಇಲ್ಲಿ ಅಡಗಿರುತ್ತೇವೆ. ಪಾಂಡವರ ಗೂಢಚರರಿಗೆ ನಮ್ಮ ಸುಳಿವು ಹತ್ತಿದರೆ ಎಲ್ಲವೂ ವ್ಯರ್ಥ. ನಮ್ಮ ಪರಾಜಯವೂ ನಿಶ್ಚಿತ. ಆದಷ್ಟು ಬೇಗ ಇಲ್ಲಿಂದ ತೊಲಗಿ ವಿಶ್ರಮಿಸಿರಿ.

ಮೂವರೂ—ಮಹದಾಜ್ಞೆ (ಎಂದು ನಮಸ್ಕರಿಸಿ ತೆರಳುವರು) ಪರದೆ.

[ಕುರುಕ್ಷೇತ್ರದ ಯುದ್ಧಭೂಮಿ ಕೃಷ್ಣಾರ್ಜುನರ ಪ್ರವೇಶ]

ಅರ್ಜುನ—ಕೃಷ್ಣಾ! ನಾವು ಎಷ್ಟು ಶೋಧಿಸಿದರೂ ದುಷ್ಟ ದುರ್ಯೋಧನನ ಶವವೂ ದೃಷ್ಟಿಗೆ ಬೀಳಲೊಲ್ಲದು. ಹೆಣಗಳ ರಾಶಿರಾಶಿ ಯನ್ನೆಲ್ಲ ಶೋಧಿಸಿ ಕೈಗಳು ಸೋತು ಹಣ್ಣಾದವು. ಈ ನರಮೇಧದ ಯಜ್ಞಕುಂಡದಲ್ಲಿ- ಈ ಭಯಂಕರ ಹತ್ಯಾಕಾಂಡದಲ್ಲಿ ಕೌರವನೊಬ್ಬನು ಜೀವಂತವಾಗಿರಲು ಶಕ್ಯವೇ! ಇದರಲ್ಲಿ ನಿನ್ನ ಅಭಿಮತವೇನು ಕೃಷ್ಣ?

ಕೃಷ್ಣ—ಧನಂಜಯ! ದುಷ್ಟವಾದದ್ದು ಬೇಗ ನಶಿಸಲಾರದು. ಈ ಪ್ರಕೃತಿ ನಿಯಮದಂತೆ ಕಡುಧೂರ್ತ ದುರ್ಯೋಧನನು ಎಲ್ಲಿಯೋ ಅಡಗಿ ಹೊಂಚುಹಾಕುತ್ತಿರಬೇಕು. ಹೊರತು ಆತನ ಮರಣವು ಅಸಂಭವ. (ತುಸು ದೂರ ನಿರೀಕ್ಷಿಸಿ) ಅದೋ ಅಲ್ಲಿ ನಮ್ಮ ವೀರರು

ಬರುತ್ತಲಿದ್ದಾರೆ. ಅವರ ಮುಖಚರ್ಯೆಯೂ ನಿರಾಶೆಯನ್ನೇ ವ್ಯಕ್ತ ಪಡಿಸುವದು

ಧರ್ಮರಾಜ—ಕೃಷ್ಣಾ! ದುರ್ಯೋಧನನು ನಿಮಗೂ ಗೋಚರಿಸಿಲ್ಲವೇ!

ಕೃಷ್ಣ—ಇಲ್ಲ ಧರ್ಮನಂದ ಈಗ ಅವನನ್ನು ಶೋಧಿಸುವದೇ ದೊಡ್ಡ ಸಮಸ್ಯೆಯಾಗಿದೆ.

ನಕುಲ—ಆತನು ಜೀವಂತನಿದ್ದರೆ ಈ ವಿಶಾಲ ರಣಭೂಮಿಯಲ್ಲಿ ಎಲ್ಲಿಯಾದರೂ ಕಾಣುತ್ತಿದ್ದನು ಕೌರವನೂ ಶಕುನಿಯಂತೆ ಗಜ ಸೈನ್ಯದಲ್ಲಿ ಹೂಳಿ ಹೋಗಿರಬೇಕು

ಯುಯುತ್ಸು—ಆತನು ಸತ್ತಿಲ್ಲ. ಎಲ್ಲಿಯೋ ಅವಿತಿದ್ದಾನೆ.

ಸಹದೇವ—(ಆತುರದಿಂದ) ಈಗ ಕೌರವನನ್ನು ಶೋಧಿಸುವದು ಮಹತ್ವವಲ್ಲ. ತಬ್ಬಲಿಯಾದ ಮಕ್ಕಳ—ಅನಾಥ ಸ್ತ್ರೀಯರ ಕರ್ಣ ಕಠೋರವಾದ ಶೋಕಸ್ವರವು ಕುರುಶಿಬಿರದಲ್ಲಿ ದಿಗಂತವನ್ನೇ ಪ್ರತಿಧ್ವನಿಸುತ್ತಿದೆ. ಆ ಅನಾಥ ಸಮೂಹದ ವ್ಯವಸ್ಥೆಯು ಇದೀಗ ಹೆಚ್ಚಿನದಲ್ಲವೇ

ದೃಷ್ಟದ್ಯುಮ್ನ—(ಅಧಿಕಾರವಾಣಿಯಿಂದ) ಅದಕ್ಕೇನು ಆಲೋಚನೆ. ಕುರುಶಿಬಿರವನ್ನು ಲೂಟಿ ಮಾಡಿ ನಮ್ಮ ಸೈನಿಕರು ಹದಿನೆಂಟು ದಿನದ ಯುದ್ಧದಣುವನ್ನು ಹಿಂಗಿಸಿಕೊಂಡು ಯಥೇಚ್ಛವಾಗಿ ನಲಿಯಲಿ. ಇದು ವಿಜಯಿಗಳ ಸಂಪ್ರದಾಯವೇ ಆಗಿದೆ ಆದರಂತೆ ಸೈನಿಕರಿಗೆ ಆಜ್ಞೆ ಮಾಡೋಣ.

ಅರ್ಜುನ—ಹಾಂ ನಿಧಾನಿಸು ಸೇನಾಪತಿ. ಇಂಥ ಸಂಪ್ರದಾಯ ನಿಷ್ಠತೆಯಿಂದ ಪ್ರಯೋಜನವಿಲ್ಲ. ಧರ್ಮನೀತಿಜ್ಞನಾದ ಅಣ್ಣನ ಅಭಿಪ್ರಾಯವಿದ್ದಂತೆ ಮಾಡೋಣ.

ಧರ್ಮರಾಜ—ಕುರುಶಿಬಿರದ ಲೂಟಿಯು ಆದರೆ ನಮ್ಮ ಶಿಬಿರವೂ ಲೂಟಿಯಾದಂತೆಯೆ. ಇಂಥ ಕಠೋರ ಸಂಪ್ರದಾಯಗಳು ನಮ್ಮ ಸಮೀಪವೂ ಸುಳಿಯಲಾಗದು. ಭಾರತ ಯುದ್ಧದ ನೀತಿಯು ಯಾವಾಗಲೂ ಜಗತ್ತಿಗೆ ಆದರ್ಶವಾಗಿರಬೇಕು. ನಮ್ಮ ಯುದ್ಧದ

ದಲ್ಲಿಯೂ ಅಹಿಂಸೆಯ ಸೂಕ್ಷ್ಮದೆಳೆಯು ನೀತಿದೃಷ್ಟಿಗೆ ಹೊಳೆಯುತ್ತಿರ ಬೇಕು ಅದಕ್ಕಾಗಿ ಕುರುಶಿಬಿರದ ಅನಾಥ ಸಮೂಹವನ್ನು ಕೂದಲೂ ಕೊಂಕದಂತೆ ಹಸ್ತಿನಾನಗರಿಗೆ ಮುಟ್ಟಿಸಲು ಕೌರವಾನುಜ ಯುಯು ತ್ಸುವಿಗೆ ಅಜ್ಞಾಪಿಸು.

ದೃಷ್ಟದ್ಯುಮ್ನ—(ಕೊಂಚ ಲಜ್ಜೆಯಿಂದ) ನೀನು ಪರಿಮಿತ ಸೈನ್ಯದ ಕಾವಲಿನಲ್ಲಿ ಆ ಅನಾಥ ಸಮೂಹವನ್ನು ರಾಜಧಾನಿಗೆ ಮುಟ್ಟಿಸಿಬಾ.

ಯುಯುತ್ಸು—(ಧರ್ಮಜನಿಗೆ ಕೃಷ್ಣನಿಗೆ ವಂದಿಸಿ) ನಿಮ್ಮನ್ನು ಬಿಟ್ಟು ಅಗಲುವದೆಂದರೆ ಮನಸ್ಸು ಒಪ್ಪಲಾರದು ಆದರೂ ಕರ್ತವ್ಯ ನೀತಿಗಾಗಿ ಹೋಗುವೆ ತಮ್ಮ ಅಪ್ಪಣೆಯಾಗಲಿ.

ಕೃಷ್ಣ—ದುರ್ಯೋಧನನ ಊಳಿಗದಲ್ಲಿಯೇ ಉಂಡು ಬೆಳೆದರೂ ಅವರ ಅನೀತಿಗೆ ಹೇಸಿ ನೀತಿವಂತರಾದ ಪಾಂಡವರನ್ನು ಸೇರಿದ ನಿನ್ನ ಸತ್ಯ ಪಕ್ಷಪಾತತನವು ತ್ರೇತೆಯ ವಿಭೀಷಣನಂತೆ ಆದರ್ಶವಾಗಿದೆ. ನಿನಗೆ ಮಂಗಲವಾಗಲಿ.

ಧರ್ಮ—ಇದು ನಮ್ಮ ಸೇವೆಯಲ್ಲ ಧರ್ಮ ನೀತಿಗಳ ಸೇವೆ ಭಾರತೇತಿಹಾಸದಲ್ಲಿ ನಿನ್ನ ಈ ಹೆಸರು ಅಮರ ಪ್ರಭೆಯಿಂದ ಬೆಳಗಲಿ. ಹೋಗಿ ಬಾ. (ಯುಯುತ್ಸು ತೆರಳುವನು)

ಅರ್ಜುನ—(ಚಕಿತಮುದ್ರೆಯಿಂದ ಅವನು ಹೋದ ದಿಕ್ಕು ನೋಡುತ್ತ) ಸಿಂಹಾಸನಕ್ಕಾಗಿ ನಾವು ವೈರಿಗಳೊಡನೆ ಯುದ್ಧ ಮಾಡಿ ದೆವು. ಆದರೆ ಈ ವೀರನು ಸಹಬಂಧುಗಳ ವಿರುದ್ಧವಾಗಿ ಹೋರಾಡಿ ದನು. ಸ್ವಾರ್ಥಕ್ಕಾಗಿಯೇ! ಅಲ್ಲ ಅಲ್ಲ. ಕೇವಲ ಧರ್ಮನೀತಿಗಳ ಅಭಿಮಾನಕ್ಕಾಗಿ ಅಹಹ ಎಂಥ ತ್ಯಾಗ ಎಲ್ಲರಲ್ಲಿಯೂ ಈ ಸುವಿಚಾರ ವಿದ್ದರೆ ಇಂಥ ಹತ್ಯಾಕಾಂಡವು—ಘನಘೋರ ಹಿಂಸಾಯಜ್ಞವು— ನಡೆಯುವದೇ! ಶಕ್ಯವಿಲ್ಲ. ಧನ್ಯ ಯುಯುತ್ಸು ನೀನು ಪರಮ ಧನ್ಯನು.

ಸಾತ್ಯಕಿ—ಪಾಪ! ಭೀಷ್ಮ, ದ್ರೋಣ, ಕರ್ಣ, ಶಲ್ಯಾದಿ ವೀರಾ ಗ್ರಣಿಗಳು ಉಂಡ ಅನ್ನಕ್ಕಾಗಿ ಪ್ರಾಣ ತೆತ್ತರು ಅವರೂ ಯುಯುತ್ಸು

ವಿನ ನೀತಿಯನ್ನು ಅನುಸರಿಸಿದ್ದರೆ ಎಂಟೇ ತಾಸುಗಳಲ್ಲಿ ಭಾರತ ಯುದ್ಧವು ಮಂಗಲವಾಗುತ್ತಿತ್ತು. ಪಾಂಡವರ ಜಯಭೇರಿಯು ಇಷ್ಟ ರೊಳಗೇ ದಿಗಂತವನ್ನೂ ಮೊಳಗುತ್ತಿತ್ತು. ಅದು ಹೋಗಿ ಈಗ ಹದಿನೆಂಟು ದಿನವುರುಳಿದರೂ ಯುದ್ಧ ಮುಗಿಯಲಿಲ್ಲ. ಕೌರವನೊಬ್ಬನಿಗಾಗಿ ಎಲ್ಲರೂ ಪರಿತಪಿಸುತ್ತಿದ್ದೇವೆ.

ಅರ್ಜುನ--ಕೃಷ್ಣಾ! ಇಂದು ಕೌರವನನ್ನು ಶೋಧಿಸದಿದ್ದರೆ ಇಷ್ಟು ದಿನದ ಶ್ರಮವೂ ವ್ಯರ್ಥ.

ಕೃಷ್ಣ—ನೋಡಿರಿ! ಆ ವಂಚಕಿಯು ಜನ್ಮದಿಂದಲೂ ನಿಮ್ಮನ್ನು ವಂಚಿಸುತ್ತಿದ್ದಾನೆ. ಈ ಮರಣಾಂತ್ಯವೇಳೆಯಲ್ಲೂ ಅವನು ಆ ದುರ್ಗುಣವನ್ನು ಬಿಡಲಾರನು. ಸೇನಾಪತಿ! ಮುಂದೇನು ವಿಚಾರ.

ದೃಷ್ಟದ್ಯುಮ್ನ—(ಕೊಂಚ ಯೋಚಿಸಿ) ರಣಭೂಮಿಯ ಈ ಮೂರೂ ದಿಕ್ಕುಗಳನ್ನೂ ಶೋಧಿಸಿದ್ದಾಯಿತು ಸೈನಿಕ ಮುಖ್ಯರೆಲ್ಲ ನಿರಾಶೆಯಿಂದ ಬಂದಿದ್ದಾರೆ (ಮುಂದೆ ಕೈತೋರಿಸಿ) ನಾವು ಸಸೈನ್ಯರಾಗಿ ಮುಂದೆ ಗೋಚರಿಸುವ ಅರಣ್ಯ ಪ್ರದೇಶವನ್ನು ಮುತ್ತಿದರೆ ಬೇಟೆಯು ಸಾಧಿಸಬಹುದೆಂದು ನನ್ನ ಅಭಿಪ್ರಾಯ

ಸಾತ್ಯಕಿ—ಹೌದು ನನಗೂ ಈ ಮಾತು ಸಮಂಜಸವೆನಿಸುತ್ತದೆ ಅಂಧರಾಜನ ವೃದ್ಧ ಮಂತ್ರಿಯಾದ ಸಂಜಯನು ಇದೇ ದಿಕ್ಕಿನಿಂದಲೇ ಬಂದಿದ್ದಾನೆ ಧುರ್ಯೋಧನನ ಗುಟ್ಟು ಈತನಿಂದಲೇ ತಿಳಿಯಬೇಕು ಎಂದು ಯತ್ನಿಸುತ್ತಿರುವಾಗ ಅದಕ್ಕೆ ಅಶ್ವತ್ಥಾಮನು ವಿಘ್ನಕಂಟಕನಾದನು ನಮಗೆ ತಿಳಿಯಲಾಗದೆಂದು ಅವರು ವಿರುದ್ಧ ದಿಕ್ಕಿನಿಂದ ಹೋಗಿದ್ದಾರೆ.

ಅರ್ಜುನ – ಹಾಗಾದರೆ ವಿಲಂಬಿಸಲಾಗದು ವೀರರೇ! ಸಜ್ಜಾಗಿರಿ.

ಕೃಷ್ಣ--ಹಾಂ ಸಮಾಧಾನ ದುರ್ಯೋಧನನ ಪ್ರಾಣಹೀರಲು ವೀರ ಪ್ರತಿಜ್ಞೆ ಮಾಡಿದ ಬಲಭೀಮನಿನ್ನೂ ಬಂದಿಲ್ಲ. ನಮ್ಮ ಉದ್ದೇಶ ಇಷ್ಟರೊಳಗೆ ಆತನಿಂದ ಸಫಲವಾಗಿರಬೇಕು. ಕೌರವನ ವಿಷಯದಲ್ಲಿ

ಪೂರ್ಣ ಕೋಣೆಗಾರನಾದ ವಾಯುಪುತ್ರನ ನಿರೀಕ್ಷಣೆಯಿಂದಲೇ ಹೊರ ಡೋಣ.

ಧರ್ಮ—ಹೌದು ನಮ್ಮವರಲ್ಲಿ ಅವನೊಬ್ಬನೇ ತಪ್ಪಿ ಉಳಿದಿದ್ದಾನೆ. ಆತನು ಬಂದನಂತರವೇ ಮುಂದಿನ ವಿಚಾರ (ಪರದೆ)

(ನಿರ್ಜನ ಕುರುಕ್ಷೇತ್ರದ ಒಂದು ಮೂಲೆ, ಇಬ್ಬರು ಬೇಟೆಗಾರರ ಪ್ರವೇಶ)

ಒಂದನೆಯವ—ತಮ್ಮಾ! ಆ ಸರೋವರದಿಂದ ಮೊಸಳೆಯಂತೆ ಮೇಲಕ್ಕೆ ಎದ್ದನಲ್ಲ ಅವನನ್ನು ಆಗಲೇ ಕೊಲ್ಲಬೇಕಿತ್ತು

ಎರಡನೇಯವ—(ಅಂಜಿಕೆಯಿಂದ) ಯಾಕೆ ಅಣ್ಣಾ! ಆ ಮೂವರೊಡನೆ ಸಿಟ್ಟನಿಂದ ಏನೋ ಮಾತನಾಡಿದರೆ ಅವನನ್ನು ನಾವು ಕೊಲ್ಲುವದೇಕೆ?

೧ನೇ—ಛೀ ನೀನು ಶುದ್ಧಮರುಳನಿರುವಿ. ನಮ್ಮ ರಾಜರನ್ನ ಕೊಲ್ಲಲು ಆ ಮೂವರೊಡನೆ ಆಲೋಚಿಸಿದ್ದಾನೆ ಕೌರವನು. ಈ ಭಯಂಕರ ಭಲ್ಲೆಯಿಂದ ಹಂದಿ ವ್ಯಾಘ್ರಗಳನ್ನು ಸೀಳುವಂತೆ ಅವನನ್ನು ಆಗಲೇ ಸೀಳಬೇಕಿತ್ತು ಆದರೆ........

೨ನೇ—ಆದರೇನು ನೀನು ಮತ್ತೂ ದೊಡ್ಡಮರುಳ ಆ ಕೌರವನು ಅಷ್ಟು ಆಳವಾದ ಮಡುವಿನಲ್ಲಿ ಮುಳುಗಿದನಲ್ಲೋ! ಕಂಡಿಲ್ಲವೇ! ನೀನು. ಇನ್ನುಳಿದ ಮೂವರ ವಿಚಾರವನ್ನು ನಮ್ಮ ಭೀಮರಾಜರಿಗೆ ಹೇಳಿದರೆ ಸಾಕು ಒಂದೇ ಗುದ್ದಿಗೆ ಮೂವರ ಸದ್ದೂ ಅಡಗುವದು.

೧ನೇ—ಆ ಕೌರವನು ಸಾಯಲು ಮುಳುಗಿಲ್ಲ ನಮ್ಮ ರಾಜರನ್ನು ಸೈನ್ಯಸಹಿತ ಕೊಲ್ಲುವ ಹಂಚಿಕೆಗಾಗಿ ಜೀವದಿಂದಲೇ ಅಡಗಿದ್ದಾನೆ. ನಾವು ತಾಲವೃಕ್ಷದ ಮರೆಯಲ್ಲಿ ನಿಂತು ಆಲಿಸುವಾಗ ಅವರು ಆಡಿದ ಈ ಮಾತನ್ನು ನೀನು ಗ್ರಹಿಸಲಿಲ್ಲವೇ?

೨ನೆ—(ಆಶ್ಚರ್ಯದಿಂದ) ಅವರ ಆ ಸಣ್ಣ ಮಾತು ನನಗೆಲ್ಲಿ ಕೇಳಬೇಕು. ಮೊದಲೇ ನನ್ನ ಕಿವಿ ಕೊಂಚ ಮಂದ. ಈಗ ನೀರಿನಲ್ಲಿ ಬದುಕಿರಲು ಅದು ಮೀನವೋ ಮಂಡೂಕವೋ! ಅಥವಾ ಟೊಂಕದ ಮೇಲೆ ಮನುಷ್ಯ ಕೆಳಗೆ ಮೀನವಾಗಿರಬೇಕು. ಅರೆ ಮನುಷ್ಯನಾದಂತಾಯಿತು. ಉಪ್ಪರಿಗೆಯಲ್ಲಿ ಸುಖದಿಂದಿರುವ ಕೌರವನು ಈ

ಅಡವಿ ಪ್ರದೇಶದಲ್ಲಿ ಅದೂ ನೀರಿನ ಮಡುವಿನಲ್ಲಿ ಜೀವಿಸುವದು ಎಂದಿಗೂ ಅಶಕ್ಯ. ಅದೊಂದು ವಿಚಿತ್ರ ಪ್ರಾಣಿಯೇ ಆಗಿರಬೇಕು.

೧ನೇ—ಒಟ್ಟಾರೆ ಅವನು ಮಾನವನಲ್ಲವೆಂದು ನಿರ್ಣಯಿಸಿ ದೆಯಾ! ತರ್ಕಪಂಡಿತ. ಹಾಗಾದರೆ ನಾಗಕನ್ಯೆಯಾಗಿರಬೇಕು ತಲೆಯ ಮೇಲೆ ಕಿರೀಟವಿದ್ದುದರಿಂದ ಅಲ್ಲವೇ!

೨ನೇ— ಹಾಂ ನಿಜ ಹೀಗೆ ಬಾನನ್ನದಾರಿಗೆ, ಅದು ನಾಗರ ಮಣಿಯುಮಣಿ. ತಲೆಯ ಮೇಲೆ ಧರಿಸಿನಿಂತಿದೆ. (ಶಂಕಿತನಾಗಿ) ಆಕೆಗೆ ಮೀಶೆಯಿರುವದೇ ಅಣ್ಣಾ!

೧ನೇ—(ಗಟ್ಟಿಯಾಗಿ ನಕ್ಕು) ಹ, ಹ, ಇದ್ದರೆ ತಪ್ಪೇನು ಪಾತಾಳ ವಾಸಿ ಪುರುಷರಿಗೆ ಮೀಶೆಯಿಲ್ಲವಂತೆ, ಈಗ ಕಲಿಕಾಲವೆಂದಾಗ ಅಲ್ಲಿನ ಸ್ತ್ರೀಯರಿಗೂ ಮೀಶೆ ಬರಬಹುದು ಇಲ್ಲವಾದರೆ ಯಾರೂ ಗತಿಯಿಲ್ಲದೆ ಮೀಶೆಯು ಅನಾಥವಾಗುವದು. ಅದು ನಾಗಕನ್ಯೆಯಾದರೆ ನೀನು ಲಗ್ನ ಮಾಡಿಕೊಳ್ಳಬಹುದಲ್ಲವೇ ತಮ್ಮಾ,

೨ನೇ—(ಆಲೋಚಿಸಿ) ನನಗೆ ಹೆಂಡತಿ ಇದ್ದಾಳಲ್ಲ. ಆದರೆ

೧ನೇ— ಆದರೇನು ಅವಳು ದಡ್ಡಳಾಗಿರಲು ಸಾಕು

೨ನೇ—ಇಲ್ಲಪ್ಪಾ. ನಮ್ಮ ದ್ರೌಪದಿ ಅಮ್ಮನವರಂತೆ ಬಾರೀ ಚುರುಕು ಇದ್ದಾಳೆ. ಅವಳಂತೆ ಗಂಡನಿಗೆ ಬುದ್ಧಿ ಹೇಳುತ್ತಾಳೆ. ದ್ರೌಪತಿ ಅಮ್ಮನವರಿಗೆ ಭೀಮ:ರಾಜರನ್ನು ಕಂಡಂತೆ ನನ್ನಾಕೆಗೆ ನಾನು

೧ನೆ— ಹಾಗಿದ್ದರೆ ನಿನ್ನ ಹೆಂಡತಿಗೆ ಎಷ್ಟು ಮಂದಿ ಗಂಡಂದಿರು-

೨ನೆ-- ಛೀ ಹಾಗಂದರೇನು ನಾನೊಬ್ಬನೇ! ಆದರೆ ಪಾಂಡವರ ಇಂದ್ರಪ್ರಸ್ಥರಾಜ್ಯದಲ್ಲಿ ಬಾರೀ ವಿದ್ಯೆ ಕಲಿತ ಬುದ್ಧಿಯುಳ್ಳ ಪ್ರಾಣಿ ನಾನು ಧೃತರಾಷ್ಟ್ರನ ರಾಜ್ಯದಲ್ಲಿಯ ಮನುಷ್ಯ. ನನಗೆ ಬರ ಬುದ್ಧಿ ಯಿಲ್ಲದ್ದು ಉತ್ತಮವಾಯಿತು

೧ನೇ—ಅಂಧನೃಪತಿ ರಾಜ್ಯದಲ್ಲಿಯವನಾದರೂ ನಿನಗೆ ಕಣ್ಣು ಚೆನ್ನಾಗಿ ಕಾಣುತ್ತಿವೆ. ಆದರೆ ವಿದ್ಯೆ ಬೇಕಿತ್ತು. ಸರೋವರದಲ್ಲಡಗಿದ ಕೌರವನನ್ನು ಮೀನ ಮಂಡೂಕನನ್ನಾಗಿಸಿ ಕೊನೆಗೆ ನಾಗಕನ್ಯೆಯ

ರೂಪಕೊಟ್ಟು ಲಗ್ನಸಂಕಲ್ಪಕ್ಕೂ ಹಾಯ್ದಿರುವೆ. ಎಂಥ ಪಂಡಿತ ನೀನು. ಎಷ್ಟು ಬುದ್ಧಿ ನಿನ್ನಲ್ಲಿ.

೨ನೇ—ಬುದ್ಧಿಯಿದ್ದರೆ ಚಿಂತೆ ಹೆಚ್ಚು. ಬೇಟೆಯಲ್ಲಿ ಒಂದು ಗುರಿ ತಿಲಮಾತ್ರ ತಪ್ಪಿದರೂ ನೀವು ಇಂದ್ರಪ್ರಸ್ಥ ರಾಜ್ಯದವರು ಚಿಂತಿಸುವಿರಿ. ಆದರೆ ನಾನಿದ್ದೇನೆ- ಮೃಗಗಳೇ ಕಾಣದಿದ್ದರೂ ಸಂತೋಷ ಗುರಿಯೊಂದೂ ಬೀಳದಿದ್ದರೂ ಚಿಂತೆಯಿಲ್ಲ. ಬಿದ್ದರಂತೂ ಹೆಮ್ಮೆ.

೧ನೇ—ನಾಳಿನ ಪಾಂಡು ರಾಜ್ಯದಲ್ಲಿ ಒತ್ತಾಯದಿಂದ ವಿದ್ಯೆಕಲಿಸಿ ನಿನ್ನನ್ನೂ ಬುದ್ಧಿವಂತನನ್ನಾಗಿಸುವರಲ್ಲ.

೨ನೇ—ಅದೇ ತೊಂದರೆ ಹಾಗಾದರೆ ನಾನು ಹೊಸ ಬುದ್ಧಿವಂತ ಹೆಂಡತಿ ಹಳೇ ಬುದ್ಧಿವಂತೆ. ಈ ಅಭಿಮಾನದ ತಾಕಲಾಟದಲ್ಲಿ ನನಗೆ ಗಂಡನೆನ್ನುವ ಹೆಸರು ಯಾವಾಗಲೂ ಉಳಿಯಬೇಕು. ನೀನು ನಾಗ ಕನ್ಯೆಯ ವಿಷಯ ಕೇಳಿದ್ದು ಯೋಗ್ಯವೆಂದೇ ಅನಿಸುವದು

೧ನೇ—ಯೋಗ್ಯವಾದರೇನೂ ಪ್ರಯೋಜನವಿಲ್ಲ. ಧರ್ಮನರಾಜ್ಯ ದಲ್ಲಿ ಒಂದು ಹೆಂಡತಿಯಿರುವಾಗ ಇನ್ನೊಂದು ಲಗ್ನವಾದರೆ ಅಪರಾಧ ವಾಗುವದು. ಅದು ಅನೀತಿ (ಆಲಿಸಿ) ಯಾರೋ ಬರುತ್ತಿರುವಂತಿದೆ· ನಮ್ಮ ಭೀಮ ರಾಜರು (ಭೀಮನ ಪ್ರವೇಶ)

ಇಬ್ಬರೂ ಕೂಡಿ—ಭೀಮ ರಾಜರಿಗೆ ಜಯವಾಗಲಿ.

ಭೀಮ—ಇದೇನು ಇಲ್ಲಿ ನಿಂತಿರಿ. ಇಂದು ಯುದ್ಧದ ಕೊನೆಯ ದಿನ ಬೇಟೆಯು ಉತ್ತಮವಾಗಿ ಸಾಧಿಸಿದೆಯೇ!

೧ನೇ—ನಮ್ಮ ಬೇಟೆ ಅತ್ಯುತ್ತಮವಾಗಿದೆ. ಆದರೆ ತಾವೇನು ದಣಿದಂತೆ ಕಾಣುವಿರಿ.

ಭೀಮ—(ದಣಿದವನಂತೆ) ಇನ್ನೂ ನನ್ನ ಬೇಟೆಯೇ ಸಾಧಿಸಲಿಲ್ಲ. ಆ ಕ್ರೂರ ಕುರುಮೃಗವು ಎಲ್ಲಿಯೋ ಅಡಗಿದೆ. ಹುಡುಕಿ ಹುಡುಕಿ ಹಣ್ಣಾದೆ

೧ನೇ—ಹಾಗಿದ್ದರೆ ನಿಮ್ಮ ಬೇಟೆಯ ಮೃಗದ ಹೊನಲೂ ಸಿಕ್ಕಿದೆ ಅದೂ ಸಾಧಿಸಿದಂತೆಯೇ ಸರಿ.

ಭೀಮ—(ಅಚ್ಚರಿಯಿಂದ) ಏನು. ಆ ವಂಚಕಿ ಕೌರವನನ್ನು ಕಂಡೆಯಾ, (ಗದೆತಿರುವಿ) ಎಲ್ಲಿ ಅಡಗಿರುವನು. ನೀನು ಹೇಗೆ ತಿಳಿದೆ.

೧ನೇ—ದ್ವೈಪಾವನ ಸರೋವರ ಸಮೀಪದ ತಾಲವೃಕ್ಷದ ತುದಿಯಲ್ಲಿಯ ಒಂದು ಕ್ರೂರ ಪಕ್ಷಿಗೆ ಗುರಿಯಿಡುತ್ತಿದ್ದೆ. ಯಾರೋ ಮಾತನಾಡುತ್ತಿರುವಂತೆ ಭಾಸವಾಯಿತು- ನೋಡುವಷ್ಟಕ್ಕೆ ಸರೋವರ ತೀರದಲ್ಲಿ ಅಶ್ವತ್ಥಾಮಾದಿಗಳೊಂದಿಗೆ ಕೌರವನು ಮಾತಾಡುತ್ತಿರುವದು ಕಂಡಿತು. ಮೆಲ್ಲನೆ ಅದೇ ತಾಲವೃಕ್ಷದ ಮರೆಯಲ್ಲಿ ನಾವಿಬ್ಬರೂ ಅಡಗಿ ಅವರ ಮಾತನ್ನೆಲ್ಲ ಕೇಳಿದೆವು

ಭೀಮ—(ಗಂಭೀರನಾಗಿ) ಏನಂದರು ಆ ನೀಚರು.

೧ನೇ—ಇಂದು ಯುದ್ಧ ಮಾಡಿದರೆ ನಮಗೆ ಸಾವು ಖಂಡಿತ. ಆದ್ದರಿಂದ ಈ ರಾತ್ರಿಯಲ್ಲಿ ಪೂರ್ಣ ವಿಶ್ರಾಂತಿ ಪಡೆದು ನಾಳೆ ಉಪಾಯಾಂತರಗಳಿಂದ ಪಾಂಡವರನ್ನು ನಿರ್ಮೂಲ ಮಾಡುವಾ ಎಂದು ಕೌರವನು ಅಶ್ವಾತ್ಥಾಮಾದಿಗಳನ್ನು ಬೇರೆಡೆಗೆ ಕಳಿಸಿ, ಸರೋವರದಲ್ಲಿಯೇ ಅಡಗಿದ್ದಾನೆ

ಭೀಮ - (ಗದೆಯನ್ನು ಹೆಗಲೇರಿಸಿ) ಹಾಗಿದ್ದರೆ ಬೇಟೆ ನಿಜವಾಗಿಯೂ ಸಿಕ್ಕಂತೆಯೇ ಸರಿ ನಮ್ಮ ಸೈನಿಕರನ್ನು ಎಲ್ಲಿ ಕಂಡಿರಿ

೨ನೇ—ಸೈನಿಕರೂ ದ್ವೈಪಾಯನ ಸರೋವರದ ಮಾರ್ಗವನ್ನೇ ಹಿಡಿದಿದ್ದಾರೆ. ನಾವು ಇತ್ತ ಬರುವಾಗ ದೂರದಲ್ಲಿಯ ಕೆಂಧೂಳಿಯಿಂದ ತಿಳಿಯಿತು.

ಭೀಮ—ನೀವು ಜಾಗ್ರತೆಯಿಂದ ಶಿಬಿರ ರಕ್ಷಣೆಯನ್ನು ಮಾಡಿರಿ ನೀರಿನಲ್ಲಿಯ ಕುರುಮೀನವನ್ನು ತುಂಡರಿಸಿ ಬರುತ್ತೇನೆ. ವಿಜಯಮಾಲೆಯು ಸಿದ್ಧವಿರಲೆಂದು ರಾಣೀವಾಸಕ್ಕೆ ತಿಳಿಸು

ಇಬ್ಬರೂ—ಮಹದಾಜ್ಞೆ (ಎಂದು ನಮಸ್ಕರಿಸಿ ತೆರಳುವರು)

[ಪಾಂಡವರು ನಿಧಾನವಾಗಿ ಕ್ರಮಿಸುತ್ತಿರುವ ಮಾರ್ಗ]

ಅರ್ಜುನ—ಕೃಷ್ಣಾ! ಇಂದು ಕುರುಕ್ಷೇತ್ರದ ರಣಕುಂಡದ ಪೂರ್ಣಾಹುತಿಯ ದಿನ ಕೌರವನ ರಕ್ತದಿಂದ ಯುದ್ಧಭೂಮಿಯು ಅವಭೃತವಾಗಬೇಕಿತ್ತು. ವಿಲಂಬವಿಲ್ಲದೆ ಭಾನುದೇವನೂ ಸಾಗುತ್ತಿದ್ದಾನೆ.

ಅದರೆ ಕೌರವನ ಸುಳಿವೇ ಇಲ್ಲ. ಭೀಮನ ಪತ್ತೆಯೂ ಇಳ್ಳ. (ಚಿಂತೆ ಯಿಂದ) ಮುಂದಿನ ಮಾರ್ಗವೇ ಕಾಣಲೊಲ್ಲದು.

[ವೇಗದಿಂದ ಭೀಮನ ಪ್ರವೇಶ]

ಭೀಮ—ಪಾಂಡುವೀರರೇ! ಇನ್ನು ಚಿಂತಿಸಬೇಡಿರಿ. ನರಮೇಧದ ಪೂರ್ಣಾಹುತಿಯ ಸಾಮಗ್ರಿಯು ದ್ವೈಪಾಯನ ಸರೋವರದ ಜಲ ಗರ್ಭದಲ್ಲಿ ವಿಶ್ರಮಿಸುತ್ತಿದೆ ಏಳಿರಿ. ಕ್ಷಣವೂ ವಿಲಂಬ ಮಾಡಬೇಡಿರಿ. ಇನ್ನು ವಿಲಂಬಿಸಿದರೆ ಪ್ರಯೋಜನವೇ ಇಲ್ಲ.

ಧರ್ಮನಂದನ ಮಹಾರಾಜ್ಕೀ ಜೈ ಎಂದು ಘೋಷಿಸುತ್ತ ಎಲ್ಲರೂ ತೆರಳುವರು

(ದ್ವೈಪಾಯನ ಸರೋವರ ತೀರದಲ್ಲಿ ಪಾಂಡು ಸೈನ್ಯ)

ದೃಷ್ಟದ್ಯುಮ್ನ—(ಭೂಮಿಯನ್ನು ಪರೀಕ್ಷಿಸುತ್ತ) ಇಲ್ಲಿ ಕೌರವ ನಿರುವದು ಖಂಡಿತ. ಅವನ ಪದಚಿನ್ಹೆಯು ಇಲ್ಲಿ ಸುಸ್ಪಷ್ಟವಾಗಿ ಮೂಡಿದೆ

ಸಹದೇವ—ಇದೋ ಜೊತೆಯಲ್ಲಿ ಅಶ್ವತ್ಥಾಮಾದಿಗಳ ಹೆಜ್ಜೆಯೂ ಮೂಡಿರುವದು.

ಸಾತ್ಯಕಿ—ಅದಕ್ಕೂ ಮೊದಲು ಸಂಜಯನ ಹೆಜ್ಜೆಯು ಗುರುತಿದೆ.

ಭೀಮ—ನಮ್ಮ ಬೇಟೆಗಾರರು ಹೇಳಿದ ಸ್ಥಳವೂ ಇದೇ ಆಗಿದೆ.

ಕೃಷ್ಣ— ವೀರರೆ ಕೌರವನು ಇಲ್ಲಿಯೇ ಸರೋವರದಲ್ಲಿ ಅಡಗಿದ್ದಾ ನೆಂಬದು ಈಗ ಸ್ಪಷ್ಟವಾದಂತಾಯಿತು. ಇನ್ನು ಆತನನ್ನು ಮೇಲಕ್ಕೇಳಿ ಸುವ ಸಾಹಸವು ನಿಮ್ಮ ಕೈಲಿದೆ (ಎಲ್ಲರೂ ಧನುರ್ಧಾರಿಗಳಾಗಿ ಸಾಲಾಗಿ ನಿಲ್ಲುವರು)

ದೃಷ್ಟದ್ಯುಮ್ನ—(ಬಾಣವನ್ನು ತೊಟ್ಟು ಹಾಂ ಅದೋ ಆ ಕಮಲ ಪುಷ್ಪದ ಕೆಳಗೆ ಕುಳಿತಿದ್ದಾನೆ. ಈ ಬಾಣದ ಅಘಾತದಿಂದ ಈ ಗಲೇ ಬರುವನು.

ಸಾತ್ಯಕಿ—(ಹೆದೆಯೇರಿಸಿ) ಸೇನಾಪತಿ! ನಿನ್ನ ಗುರಿಯು ಸುಳ್ಳಾ ಯಿತು. ಅದೋ ಆ ಕನ್ನೈದಿಲೆಯ ಅಡಿಯಲ್ಲಿರುವನು (ಬಾಣ ಬಿಡುವನು)

ಸಹದೇವ - ಸಾತ್ಯಕಿಯ ಬಾಣವೂ ವ್ಯರ್ಥವಾಯಿತು ಆ ಹಂಸೆಗಳು ನೀರಾಟವಾಡುವಲ್ಲಿ ಆಳವಾಗಿ ಕುಳಿತಿದ್ದಾನೆ ಈ ತೀಕ್ಷ್ಣ ಬಾಣದಿಂದ ತೀವ್ರವಾಗಿ ಬರುತ್ತಾನೆ.

ನಕುಲ—ಸಹದೇವನ ಕೈಚಳಕವೂ ನಿರರ್ಥಕವಾಯಿತು. ಆ ನೀರುಕೋಳಿಗಳು ವಿಹರಿಸುವಲ್ಲಿ ಅಡಗಿರಬೇಕು. ಈ ಕೂರಂಬಿನ ಇರಿತದಿಂದ ಈಗಲೇ ಗೋಚರಿಸುವನು.

ಧರ್ಮಜ--ನಕುಲನ ಬಾಣವೂ ನಿಷ್ಪ್ರಯೋಜಕವಾಯಿತು. ಆ ಕೆಂದಾವರೆಯ ತಳದಲ್ಲಿರುವನು ಈ ಶಲ್ಯದ ಸೆಳೆತಕ್ಕೆ ಪಾತಾಳದಲ್ಲಿದ್ದರೂ ಬರುವನು.)

ಅರ್ಜುನ – (ಗಂಭೀರನಾಗಿ) ಎಲ್ಲರ ಸಾಹಸವೂ ಸರೋವರದ ನೀರಿನಲ್ಲಿ ಹೋಮಿಸಿದಂತಾಯಿತು. (ಎಂದು ಗಾಂಡೀವಿಗೆ ಕೈಹಾಕುವಷ್ಟಕ್ಕೆ ಭೀಮನೂ ಗದೆ ತಿರುವುತ್ತ ಸರೋವರದಲ್ಲಿ ಧುಮುಕಲೆತ್ನಿಸುವನು.)

ಕೃಷ್ಣ ಹಾಂ ನಿದಾನಿಸಿರಿ ಭೀಮಾರ್ಜುನರೇ! ದುಡುಕೋಣದಿಂದ ಪ್ರಯೋಜನವಿಲ್ಲ. ನಮ್ಮ ವೀರರ ಪ್ರಯತ್ನವನ್ನು ಈಗಷ್ಟೇ ನೋಡಿದಿರಿ. ನಿಮ್ಮ ಅಸ್ತ್ರಶಸ್ತ್ರಗಳೊಂದೂ ಜಲರಾಶಿಯನ್ನು ಭೇದಿಸಿ ಕೌರವನಿಗೆ ನಾಟಲಾರವು. ಅಭೇದ್ಯವಾದ ಜಲಸ್ತಂಭ ವಿದ್ಯೆಯಿಂದ ಆತನು ನಿಶ್ಚಿಂತೆಯಿಂದ ಜಲಗರ್ಭದಲ್ಲಿ ವಿಶ್ರಮಿಸುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ವೈರಿಯನ್ನು ಚಾತುರ್ಯದಿಂದ ಗೆದಿಯಬೇಕು. ವೈರಿಯು ಪ್ರತ್ಯಕ್ಷವಾಗಲು ಈಗ ವಾಗ್ಬಾಣವೊಂದೇ ಸಾಧನವಾಗಿದೆ. ಹೊರತು ನಿಮ್ಮ ನಿರ್ಜೀವ ಅಸ್ತ್ರಶಸ್ತ್ರಗಳು ಅವನನ್ನು ಮುಟ್ಟಲಾರವು.

ಧರ್ಮ - ಕೃಷ್ಣಾ ಅಷ್ಟೊಂದು ಆತುರವೇಕೆ. ಕೌರವನು ಮೇಲಕ್ಕೇಳವೆ ಅಲ್ಲಿಯೇ ಜೀವಿಸುವದು ಅಸಾಧ್ಯ ತಾನಾಗಿ ಬರುವನಲ್ಲವೇ! ಆಗಲೇ ಅವನನ್ನು ಕೊನೆಗಾಣಿಸುವದು ಸುಲಭವಾಗುವದು.

ಕೃಷ್ಣ—ಧರ್ಮನಂದನ! ಹಾಗೆ ವಿಲಂಬಿಸುವದು ಕರ್ತವ್ಯಾಂಧತೆಯಾಗುವದು ಪ್ರಬಲ ವೈರಿಯು ಜೀವಿಸಿರುವಾಗ ಕ್ಷಣವೂ ವಿಲಂಬಿಸದೆ ಯುಕ್ತಿಶೌರ್ಯಗಳಿಂದ ಕೊಲ್ಲುವದೇ ಸಮರನೀತಿ. ಅತಿತಾಳ್ಮೆಯು

ಗಂಡಾಂತರಕ್ಕೆ ಕಾರಣ. ಆದ್ದರಿಂದ ಜಲರಾಶಿಯನ್ನು ಭೇದಿಸಿ ಕೌರವನ ಮರ್ಮಾಘಾತವನ್ನು ಮಾಡುವ ನಿಶಿತ ವಾಗ್ಬಾಣವು ಬೇಕು. ಅಂಥ ವಾಗ್ಬಾಣವು ಯಾರ ಬಾಯಬತ್ತಳಿಕೆಯಲ್ಲಿವೆಯೋ ಅಂಥವರು ಸಜ್ಜಾಗಲಿ. ಈ ವೇಳೆಯಲ್ಲಿ ಆ ದುರ್ಯೋಧನನ್ನು ಮೇಲಕ್ಕೇಳಿಸುವ ಮಹತ್ಸಾಧನವು ಬೇರೊಂದಿಲ್ಲ ಧರ್ಮನಂದನ! ಇದಕ್ಕೆ ತಕ್ಕವರು ಇದೀಗ ಮುಂದಾಗಲಿ. ವಾಗ್ಬಾಣದ ಮರ್ಮಾಘಾತದಿಂದ ಕೌರವನು ಶೀಘ್ರವೇ ಮೇಲಕ್ಕೆ ಬರುವಂತಾಗಲಿ.

ಧರ್ಮಜ—ನಿನ್ನ ಹೇಳಿಕೆಯು ಶಿರಸಾಮಾನ್ಯವಾಗಿದೆ (ಗಂಭೀರವಾಗಿ ಸರೋವರದ ಕಡೆಗೆ ನೋಡುತ್ತ) ಎಲೈ ದುರ್ಯೋಧನ! ನಿನ್ನ ಒಣದರ್ಪದ ಸಾಮ್ರಾಜ್ಯವನ್ನು ಬಿಟ್ಟು ಜಲಚರದಂತೆ ನೀರಿನಲ್ಲೇ ಅವಿತಿರುವೆ. ಏಳು ಇಷ್ಟು ಭೀತಿಯಿಂದ ನೀನು ಅಡಗುವದು, ಕ್ಷತ್ರಿಯ ಶಬ್ದಕ್ಕೇ ಕಲಂಕಪ್ರಾಯ. ಏಳು ದುರ್ಯೋಧನ! ಕುರುಯಜ್ಞದ ಪೂರ್ಣಾಹುತಿಯ ಮುಖ್ಯ ವಸ್ತುವು ನೀನಾಗಿರುವೆ.

ದುರ್ಯೋಧನ—(ನೀರಿನೊಳಗೆ ಬಿರುಸಿನಿಂದ) ಯುಧಿಷ್ಠಿರ! ಮರಣಹೋಮದ ಪೂರ್ಣಾಹುತಿಯು ಪಾಂಡವರದಾಗಿದೆ ಅದಕ್ಕಾಗಿ ಈ ಕೌರವನು ವಿಶ್ರಾಂತಿ ಮಂತ್ರ ಜಪಿಸುತ್ತಿದ್ದಾನೆ. ಹೊರತು ಹೇಡಿಯಂತೆ ಹೆದರಿ ಅಡಗಿಲ್ಲ. ಪೊಳ್ಳು ಗಾಳಿಗೆ ಕುಲಾಚಲವು ಚಲಿಸಬಲ್ಲದೇ! ಮರುಳ! ಕ್ಷಾತ್ರಪೌರುಷದಿಂದ ಅಖಂಡ ಸಮ್ರಾಟನಾಗಿ ಮೆರೆದ ಈ ಸುಯೋಧನನು ಭಿಕ್ಷುಕರಿಗಿಂತಲೂ ಹೀನಾ ಜೀವಿಗಳಾದ ನಿಮಗೆ ಅಂಜುವೆನೇ? ನಾನಿರಲಿ ಈ ಸರೋವರದ ಜಲಚರವೂ ಅಂಜಲಾರದು, ಅಡಗಲಾರದು. ನಮ್ಮ ಉಜ್ವಲ ಕ್ಷಾತ್ರಾಭಿಮಾನವು ನನ್ನ ಜೀವದೊಂದಿಗೆ ಅರಬಲ್ಲದು. ಆ ತನಕ ಈ ವಿಶಾಲ ಕುರುಸಾಮ್ರಾಜ್ಯವು ನಿಮ್ಮಂಥ ಪೌರುಷಹೀನರ ಕೈಸೇರಲಾರದು ಇದು ನಿಶ್ಚಯ.

ಧರ್ಮಜ—ಧುರ್ಯೋಧನ! ನಮ್ಮ ಪೌರುಷವು ದಿಗಂತದಲ್ಲಿ ಜ್ವಲಿಸುವ ಸೂರ್ಯನಷ್ಟು ನಿಷ್ಕಲಂಕವಾಗಿದೆ ಭೂಮಿಯಷ್ಟು ಸ್ಥಿರವಾಗಿದೆ ವಾಯುವಿನಷ್ಟು ಗಮನಶೀಲವಾಗಿದೆ ಆದರೆ ಗುರುಹಿರಿಯರು ಕರ್ಣ-ದುಶ್ಯಾಸನಾದಿ ವೀರರನ್ನು ಕೊನೆಗೊಳಿಸಿದಾಗಲೂ

ಸಾಮ್ರಾಜ್ಯವಾಳಬೇಕೆನ್ನುವ ರಾಕ್ಷಸೀ ವಿಚಾರವುಳ್ಳ ನೀನು ಕ್ಷತ್ರಿಯ ಶಬ್ದಕೆ ಅರ್ಹನೇ! ನಾವಂತೂ ಜನ್ಮವೈರಿಗಳು, ದಾಯಾದ್ಯರು ಈ ಛಲದಿಂದ ನಮ್ಮ ಮೇಲೆಸೆದ ಮೋಸ ಪ್ರಯೋಗವಂತೂ ಅನಿರ್ವಚನೀಯ ಕರ್ಣನಂಥ ಚಿರಮಿತ್ರನನ್ನೂ ಕೊಲ್ಲಿಸಿ ಬದುಕುವ ಹಂಬಲವುಳ್ಳ ನೀನು ಕ್ಷಾತ್ರಶಬ್ದಕ್ಕೆ ಯೋಗ್ಯನೇ! ನಿನ್ನ ರೀತಿನೀತಿಗಳು ಜನ್ಮದಿಂದಲೂ ಕ್ಷಾತ್ರತೆಗೆ ವಿರುದ್ಧವಾಗಿವೆ. ಭರತ ಕುಲದ ಕಲಂಕ ಸ್ವರೂಪವು ನಮ್ಮೆದುರು ಬದುಕಬಾರದು. ಏಳು, ನಿನ್ನ ಅಂತಿಮ ಕಾಲವು ಸಮೀಪಿಸುತ್ತಿದೆ.

ದುರ್ಯೋಧನ—(ಕೋಪವಾಣಿಯಿಂದ) ಯಾರ ಅಂತಿಮ ಕಾಲವೆಂಬದನ್ನು ನಿರೀಕ್ಷಿಸುವಿ ಧರ್ಮಜ! ನಿಮ್ಮೆಲ್ಲರನ್ನು ನಾನು ಪೂರ್ಣ ಪರಾಜಯಗೊಳಿಸಿದಾಗಲೇ ತಿಳಿಯುವದು ಕ್ಷಾತ್ರ ತೇಜದ ಕೆಚ್ಚು.

ಧರ್ಮ—ಆಗಲಿ ಯುದ್ಧದಲ್ಲಿ ನಾವೆಲ್ಲ ಮಡಿದರೂ ಸಂತೋಷವೇ (ನಕ್ಕು) ಆಗ ನಿನ್ನ ಸಾಮ್ರಾಜ್ಯವು ನಿಷ್ಕಂಟಕ. ಇದಕ್ಕಾಗಿಯೇ ಕರ್ಣನಂಥ ಮಿತ್ರ ಶಿಖಾಮಣಿಗಳನ್ನೂ, ಭೀಷ್ಮ ದ್ರೋಣಾದಿ ಪೂಜ್ಯರನ್ನೂ ಕೊಲ್ಲಿಸಿದೆಯಾ! ಸ್ಮಶಾನ ಪಿಶಾಚಿಯಂತೆ ನೀನೊರ್ವನೇ ಸಾಮ್ರಾಜ್ಯವಾಳಬಹುದು. ಅದಕ್ಕಾಗಿ ನಿನ್ನಂಥ ವೀರನು ನೀರೊಳಗೆ ಜಲಚರಗಳಂತೆ ಅಡಗುವದೇಕೆ.

ದುರ್ಯೋಧನ—ಯುಧಿಷ್ಟಿರ! ಸಾಕು ಹಂಗಿಸುವದು. ಒಬ್ಬಂಟಿಗನಾಗಿ ನಾನು ರಾಜ್ಯವಾಳಬಲ್ಲೆನೆ! ಇಲ್ಲ. ನನ್ನ ಪೌರುಷವನ್ನು ನಿಮಗೆ ಚೆನ್ನಾಗಿ ಮನಗಾಣಿಸುವ ಪೂರ್ತಿಗೆ ಯುದ್ಧ, ವಿಜಯ. ಆನಂತರ ಕೃಷ್ಣಾಜಿನಧಾರಿಯಾಗಿ ಈ ಸಾಮ್ರಾಜ್ಯವನ್ನು ನಿಮ್ಮ ಪಾಲಿಗೆ ಬಿಟ್ಟು ಅರಣ್ಯವನ್ನಾದರೂ ಸೇರುವೆ. ಹೊರತು ಈಗಿನ ಶೋಕಪೂರಿತ ಸಾಮ್ರಾಜ್ಯವು ಏಕಾಂಗಿಯಾದ ನನಗೇತಕೆ. ಸ್ಮಶಾನ ಸದೃಶ ರಾಜ್ಯವು ನಿಮಗೇ ಭೂಷಣ.

ಧರ್ಮ—ದುರ್ಯೋಧನ, ಸೂಜಿಯ ಮೊನೆಯಷ್ಟು ಭೂಮಿಯನ್ನು ಕೊಡದವನು ಈಗ ಸಮಗ್ರ ಸಾಮ್ರಾಜ್ಯವನ್ನು ಹೇಗೆ ಕೊಡಬಲ್ಲೆ. ಮರುಳಾ! ನೀನು ಕೊಡುವೆನೆಂದರೂ ಈ ಸಮಯದಲ್ಲಿ ನಮಗೆ

ಬೇಡ. ದ್ಯೂತ-ವಂಚನೆ--ಮೋಸ ಮುಂತಾದವುಗಳಿಂದ ರಾಜ್ಯ ಗಳಿಸುವದಂತೂ ನಿನ್ನ ಪಾಲಿನದಾಯಿತು ಹಿಂದೆ ಇಂದ್ರಪ್ರಸ್ಥದಲ್ಲಿ ರಾಜಯುಸೂಯದಿಂದ ರಾಜ್ಯ ಬೆಳೆಸಿದಂತೆ ಈಗಲೂ ಕ್ಷಾತ್ರಪೌರುಷ ದಿಂದಲೇ ಸಾಮ್ರಾಜ್ಯವನ್ನು ಸ್ಥಾಪಿಸುವೆವು. ಈಗ ರಾಜ್ಯವನ್ನು ಕೊಡ ಕೊಳ್ಳುವ ಹಕ್ಕು ಯಾರಿಗೂ ಇಲ್ಲ ಅದನ್ನು ಪ್ರತ್ಯಕ್ಷ ರಣರಂಗವೇ ನಿರ್ಣಯಿಸುವದು. ಕಾರಣ ಪ್ರತ್ಯಕ್ಷನಾಗು.

ದುರ್ಯೋಧನ—ಯುಧಿಷ್ಠಿರ! ನಿನಗೆಷ್ಟು ಹೆಮ್ಮೆ ನನಗೆ ಬೇಕಾದುದು ರಾಜ್ಯವಲ್ಲ. ಅದಕ್ಕಾಗಿ ಜಲಗರ್ಭವನ್ನು ಪ್ರವೇಶಿಸಿಲ್ಲ. ಲೋಕವೇ ಬೆರಗೊಳ್ಳುವಂಥ ರಣರಂಗ ರಚಿಸಲು ಈಗೊಂದು ರಾತ್ರಿಯ ವಿಶ್ರಾಂತಿ. ನಂತರ ಯುದ್ಧ. ಕ್ಷತ್ರಿಯ ವೀರನಿಗೊಪ್ಪುವ ವೀರ ಸ್ವರ್ಗ. ಧರ್ಮಜಾ! ಕೇಳು. ಮನುಷ್ಯ ಲೋಕದ ಅನಂತಸುಖದ ಸಾಮ್ರಾಜ್ಯವನ್ನು-ವಿಶಾಲ ಭಾರತವನ್ನು-ಸಮಸ್ತ ಸುಖವನ್ನು-ಬಂಧು ಸಮೂಹದೊಡನೆ ತಿಲಮಾತ್ರವೂ ಕ್ಲೇಶವಿಲ್ಲದೆ ಬಹು ಕಾಲ ಭೋಗಿಸಿದೆನು ಈಗ ಸ್ವರ್ಗೀಯ ಸಿಂಹಾಸನವನ್ನು ತರಿಸಿ ನನ್ನ ಸಮಸ್ತ ಬಂಧುಗಳು--ಗುರುಹಿರಿಯರು--ತೀವ್ರವಾಗಿ ಕರೆಯುತ್ತಿದ್ದಾರೆ. ಈ ಕುರು ಸಮ್ರಾಟನ ವೈಭವದ ನೆಲೆಯು ನಿನ್ನಂತವರಿಗೆ ತಿಳಿಯಲಾರದು. ಸುಮ್ಮನಿರು ವಿಶ್ರಮಿಸುವ ಕಾಲಕೂಟವನ್ನು ಕೆಣಕಬೇಡ.

ಧರ್ಮ—ಕಾಲಕೂಟದೊಡನೆ ಹೋರಾಡುವದೇ ನಮಗೆ ಇಷ್ಟವಾಗಿದೆ. ನಿನ್ನ ಒಣಪೌರುಷದ ಮಾತುಗಳಿಂದ ಪ್ರಯೋಜನವಿಲ್ಲ. ವೀರ ಕ್ಷತ್ರಿಯನಾದರೆ ಪ್ರತ್ಯಕ್ಷನಾಗು.

ದುರ್ಯೋಧನ—ದಣಿದ ನಿರಾಯುಧನೊಬ್ಬನನ್ನು ಅನೇಕ ಪ್ರಬಲರು ಕೂಡಿ ಕೊಲ್ಲುವ ಹೊಂಚು ನಿಮ್ಮದು, ಇದು ಪೌರುಷವಲ್ಲ. ಅಮಾನುಷ ಕಾರ್ಯ. ರಾಜ್ಯದಾಶೆಗೆ ಉಗ್ರಾಹಿಂಸೆಯ ಮಡಿಲಕೂಸುಗಳಾಗಿದ್ದೀರಿ. ಮನುಷ್ಯತ್ವದ ಪರಿವೆಯಿದ್ದರೆ. ನೀವು ಹೀಗೆ ಮಾಡುತ್ತಿದ್ದಿಲ್ಲ.

ಧರ್ಮ—ಧುರ್ಯೋಧನ! ಸಂಕಟದಲ್ಲಿ ಪಾಪ-ಪುಣ್ಯ-ದೇವರು-ನ್ಯಾಯ-ಅನ್ಯಾಯಗಳೆಲ್ಲವೂ ಸುಲಭವಾಗಿ ಕಾಣುವವು. ಅದೇ

ದರ್ಪದ ಸಿಂಹಾಸನದ ಮೇಲಿರುವಾಗ ಕಂಡಿದ್ದರೆ, ಮಾನವ ಕುಲದ ಈ ಮಾರಣ ಕುಂಡವು ಕುರುಕ್ಷೇತ್ರದಲ್ಲಿ ರಣಗುಟ್ಟುತ್ತಲಿತ್ತೇ! ಅಭಿಮನ್ಯು ವಿನಂಥ ಏಕಾಂಗಿ ಬಾಲಕನು ಅನೇಕರ ಕೃತ್ರಿಮ ಪ್ರಯೋಗದಿಂದ ಸಾಯುತ್ತಿದ್ದನೇ! ಸುಯೋಧನ! ನಿನಗೀಗ ಅದೆಲ್ಲ ಜ್ಞಾಪಕವಿದೆಯೇ! ಏಳು, ನಿನ್ನಂತೆ ನಾವು ಮೋಸಗಾರರಲ್ಲ. ಬೇಕಾದ ಯುದ್ಧ ಸಾಮಾಗ್ರಿ ಯನ್ನು ಇಚ್ಛಿಸು. ಬೇಕಾದವರನ್ನು ಆಹ್ವಾನಿಸು. ಒಬ್ಬೊಬ್ಬರಾಗಿ ಧರ್ಮಯುದ್ಧ ಮಾಡುವೆವು. ಹೊರತು ಬಲವಿದೆಯೆಂದು ನಿನ್ನಂತೆ ಅನ್ಯಾಯದಿಂದ ಕೊಲೆ ಮಾಡಲಾರೆವು. ಮೇಲಕ್ಕೆ ಬಾ ಹೇಡಿಯಾಗ ಬೇಡ

ದುರ್ಯೋಧನ—ಧರ್ಮಜ! ನಿನ್ನ ಬಡಬಡಿಕೆಗೆ ಮೇಲೇಳು ವಷ್ಟು ಮೂರ್ಖನಲ್ಲ. ಸಾಮ್ರಾಜ್ಯ ಮಕುಟಕ್ಕಾಗಿ ನಿಮಗಿಷ್ಟು ಆತುರ ವೆಂದು ತಿಳಿದಿರುವೆ. ನನ್ನ ಅಚಲವಾದ ಇಚ್ಛೆಯನ್ನು ಯಾರೂ ಚಲಿಸ ಲಾರರು ನನ್ನನ್ನು ಕಾಣಲಾರೆ.

ಧರ್ಮ—ದುರ್ಯೋಧನ! ಪ್ರಜರನ್ನು ಬರಿಯ ದರ್ಪದಿಂದ ಆಳುವ ನಿನ್ನ ಸಾಮ್ರಾಜ್ಯಕ್ಕೆ ಧಿಕ್ಕಾರವಿರಲಿ. ಅಂಥ ರಾಜ್ಯವನ್ನು ಸ್ವಪ್ನದಲ್ಲಿಯೂ ಬಯಸಲಾರೆ. ಸತ್ಯ--ಶಾಂತಿ--ದಯೆ--ಪ್ರೇಮ ಇವು ಗಳಿಂದ ಪೂರಿತವಾದ ರಾಜ್ಯವೇ ನಿಜವಾದ ಸಾಮ್ರಾಜ್ಯ. ನಿನ್ನ ಒಣ ಬಿಂಕದ ಸಾಮ್ರಾಜ್ಯವು ಇಂದಿನ ಕಾಲದಲ್ಲಿ ಹೇಗೂ ಬದುಕಿ ನಿಲ್ಲ ಲಾರದು. ಸಾಮ್ರಾಜ್ಯ ದರ್ಪದ ಜಲಸಮಾಧಿಯ ಪ್ರತ್ಯಕ್ಷ ರೂಪವು ನಿನ್ನೊಂದಿಗೆ ನೀರಲ್ಲಿ ಮುಳುಗಿದೆ. ಒಣ ಪೌರುಷ--ದುರಹಂಕಾರ-- --ಮತ್ಸರ--ಸ್ವಾರ್ಥ ಮುಂತಾದ ವಿಷಪೂರಿತ ಸಾಮ್ರಾಜ್ಯಕ್ಕಿಂತ-- ಪ್ರಶಾಂತವಾದ--ನಿಸರ್ಗಸುಂದರವಾದ ವನವಾಸವು ಶತಪಾಲು ಮೇಲು. ಏಳು. ನಿನ್ನ ಬಂಧುಗಳ ನಿರೀಕ್ಷಣೆಯನ್ನು ನಮಗೆ ಪ್ರತ್ಯಕ್ಷನಾಗಿ ಪೂರೈಸು. ನಿನ್ನನ್ನೇಳಿಸದೆ ಎಂದಿಗೂ ಬಿಡಲಾರೆವು. ನಿನ್ನ ವೀರತನ ವನ್ನು ರಣರಂಗದಲ್ಲಿ ನಿಜಗೊಳಿಸು.

ದುರ್ಯೋ--ಯಮನಂದನ! ಸುಮ್ಮನೆ ಬಡಬಡಿಸಬೇಡ. ನನ್ನನ್ನು

ಕಾಣುವದು ಇಂದು ಸ್ವಪ್ನದ ಮಾತು. ಅಷ್ಟರ ಸಾಮರ್ಥ್ಯ ನಿಮ್ಮ ಲ್ಲಿಲ್ಲ. ನಿರಾಶನಾಗು ಯುಧಿಷ್ಠಿರ.

ಕೃಷ್ಣ—ಧರ್ಮಜ, ನಿನ್ನ ಹೃದಯವು ನಿಶಿತ ವಾಗ್ಬಾಣದ ಬತ್ತಿ ಯಾಗಲಿಲ್ಲ. ಅದರ ಮರ್ಮಾಘಾತವಿಲ್ಲದೆ ದುರ್ಯೋಧನನೇಳುವದು ಅಸಂಭವ. ನಿನ್ನ ವಿಶ್ವಬಂಧುತ್ವದ ಔಪಚಾರಿಕ ಮೃದುನುಡಿಯು ಕಡುವೈರಿಯ ಕಪಟ-ಕಠೋರ ಹೃದಯಕ್ಕೆ ನಾಟಲಾರದು. ವಾಯು ನಂದನ! ಈ ಕೆಲಸದಲ್ಲಿ ನಿನ್ನ ಸಾಮರ್ಥ್ಯದ ಹೊರತು ಪ್ರಯೋಜನವಿಲ್ಲ. ಪಾಂಡವರ ಅದರಲ್ಲಿಯೂ ನಿನ್ನ ಜನ್ಮವೈರಿ ದುರ್ಯೋಧನನ ವಿಶ್ರಾಂತಿ ಯನ್ನು ಭಂಗಗೊಳಿಸು. ಚಿರವೈರದ ಸೇಡಿನೊಡನೆ ಪಾಂಚಾಲೆಗಿತ್ತ ಭರವಸೆಯ ಶಪಥ ಪೂರೈಸಲು ಜಾಗ್ರತನಾಗು.

ಭೀಮ—(ಸಂತಾಪದಿಂದ) ಎಲೈ ರಣಹೇಡಿ! ಉಜ್ವಲ ಕುರು ಕುಲದಲ್ಲಿ ಹುಟ್ಟಿ ಕುರಿಯಂತೇಕೆ ಅವಿತಿರುವೆ. ಭೀಷ್ಮಾದಿ ಹಿರಿಯರನ್ನು -ಕರ್ಣನಂಥ ಪ್ರಾಣಮಿತ್ರರನ್ನು ಬಂಧು ಸಮೂಹವನ್ನು-ನಿಷ್ಕರುಣೆ ಯಿಂದ ಕೊಲ್ಲಿಸಿದ ಕುಲದ್ರೋಹಿ! ನೀನು ಆತ್ಮಹತ್ಯ ಮಾಡಿಕೊಳ್ಳದೆ ಜೀವಿಸಿರಲು ಲಜ್ಜೆಯಿಲ್ಲವೆ! ನಮ್ಮನ್ನು ಕೊಲ್ಲಲು ವಿಶ್ರಾಂತಿ. ಅಲ್ಲವೇ! ಕ್ಷಾತ್ರಕುಲಕಂಟಕ! ಇದೀಗ ನಿನ್ನ ಸಾಮ್ರಾಜ್ಯಲಾಲಸೆಯೇ? ನಿನಗೆ ಮೃತ್ಯುರೂಪ ತಾಳಿ ನಿಂತಿದೆ. ನಿನ್ನ ಕೊನೆಯ ಕ್ಷಣವನ್ನು ಎಣಿಸುತ್ತಿದೆ. ನಮ್ಮನ್ನು ಪರಿಪರಿಯಾಗಿ ಕಾಡಿಸಿದ ನೀನು ಈಗ ಪಾತಾಳಗರ್ಭ ಪ್ರವೇಶಿಸಿದರೂ ಬದುಕಲಾರೆ, ಇದು ನಿಶ್ಚಿತ. ಪವಿತ್ರ ವಾದ ಕ್ಷತ್ರಿಯ ಕುಲವನ್ನೆ ವಿಧವೆಯನ್ನಾಗಿಸಿ - ಕರ್ಣಕರ್ಕಶವಾದ ಶೋಕ ಸ್ವರವನ್ನು ಕೇಳಿಸುತ್ತಲೂ ವಿಶ್ರಮಿಸುವೆಯಾ! ಕುಲಘ್ನ! ಏಳು. ಏಳು! ತೊಂಬತ್ತೊಂಬತ್ತು ಮಂದಿ ನಿನ್ನ ತಮ್ಮಂದಿರ ರಕ್ತವನ್ನು ಕುಡಿ ದರೂ ನನ್ನ ಭಯಂಕರ ಗದೆಯ ದಾಹ ಹೆಚ್ಚುತ್ತಲಿದೆ ಕೊಬ್ಬಿದ ನಿನ್ನ ರಕ್ತಕ್ಕಾಗಿ ಹಾತೊರೆಯುತ್ತಿದೆ.

ದುರ್ಯೋ—(ಭಯಂಕರ ಸಿಟ್ಟಿನಿಂದ) ಛೀ ಬುದ್ಧಿಗೇಡಿ ಭೀಮ! ಸೂತ್ರದ ಬೊಂಬೆಗಳಂತಿರುವ ನಿಮಗೆ ಧಿಕ್ಕಾರ-ಆ ಕಪಟ ಕೃಷ್ಣನಿಗೆ ಸರ್ವಸ್ವವನ್ನು ಮಾರಿದ ವಿವೇಕಾಂಧರಿಗೆ ರಾಜ್ಯಸಿಂಹಾಸನವೇಕೆ! ನೀವು

ರಾಜ್ಯವಾಳುವದಕ್ಕಿಂತ ನಾಯಿನರಿಗಳು ಆಳುತ್ತಿರುವದೇ ಯೋಗ್ಯ. ಉದರಂಭರಿ ಭೀಮ! ನಿನ್ನ ಹಾಗೂ ಗಧೆಯ ರಕ್ತಕಾಂಸಲು ನನ್ನ ಗಧೆಯು ಇಷ್ಟು ಆಳವಾದ ನೀರಿನಲ್ಲಿಯೂ ಭೀಷಣವಾದ ಸಾಧನೆ ಮಾಡುತ್ತಲಿದೆ. ನಾಳೆ ಬೆಳಗಾಗುವದೇ ತಡ. ನಮ್ಮೀರ್ವರ ಜನ್ಮ ವೈರವು ಸಿಗಲಿದೆ- ಆ ಸಮಯ ಕಾಯುತ್ತಲಿರು.

ಭೀಮ—ನೀಚ! ವಂಚಕಿ! ನಾಳೆ ನಾಳೆಯಲ್ಲವೇ! ಈಗಲೇ ಘೋರ ಮೃತ್ಯುವು ಸರೋವರದಂಚಿನಲ್ಲಿ ತನ್ನ ಕರಾಳ ನಾಲಗೆ ಚಾಚಿ ನಿಂತಿದೆ. ನನ್ನ ರಕ್ತಹೀರುವ ಜಂಭವೆಷ್ಟರದೆಂದು ನಿನ್ನ ಹೇಡಿತನವೇ ಪ್ರದರ್ಶಿಸುತ್ತಿದೆ. ದರುಳ ದುರ್ಯೋಧನ! ಮೊನ್ನೆ ದುಶ್ಯಾಸನನ ರಕ್ತಮಾಂಸದೋಕುಳಿಯು ನಿನ್ನ ನಿರ್ಜೀವ ಹೃದಯದಲ್ಲೇನು ಮಾಡಿತು- ಹೇಡಿ! ನಿನಗಾಗಿ ಪ್ರಾಣತೆತ್ತ ತಮ್ಮಂದಿರ ರಕ್ತದೌತಣ ನೋಡಿಯೂ ಜಲಚರದಂತೆ ನೀರಿನಲ್ಲಿ ವಿಶ್ರಮಿಸುವಿಯಾ! ಮಕ್ಕಳು ಮರಿಗಳನ್ನೆಲ್ಲ ಯುದ್ಧರಾಕ್ಷಸನ ಬಾಯಿಗೆ ತುತ್ತಾಗಿಸಿ ನೀನೊಬ್ಬ ಸುಖ ವಾಗಿರಲಪೇಕ್ಷಿಸುವಿಯಾ! ಅಡವಿಯ ಮೃಗವೂ ತಮ್ಮವರಿಗಾಗಿ ಹೆಣಗುವದು- ಅಷ್ಟೂ ಅಭಿಮಾನವಿಲ್ಲದ ನೀನು ನೀರೊಳಗೆ ಪ್ರಾಣ ಬಿಡು- ಆಗ ಕ್ಷತ್ರಿಯ ಕುಲವು-ಕುರುಸಿಂಹಾಸನವು-ಭಾರತ ಸಾಮ್ರಾ ಜ್ಯವು ನಿಷ್ಕಲಂಕವಾಗಿ ಪ್ರಕಾಶಿಸುವದು.

ದುರ್ಯೋಧನ—(ಅತ್ಯಂತ ರೋಷಗೊಂಡು ಗಧಾಪಾಣಿಯಾಗಿ- ಸರೋವರದಿಂದ ಮೇಲಕ್ಕೆ ಏಳುವನು ಎಲ್ಲರು ಚಪ್ಪಾಳೆ ತಟ್ಟುವರು. ಆಗ ಮತ್ತೂ ಸಿಟ್ಟಿನಿಂದ) ಎಲೈ ಷಂಢ ಕಪಟಿಗಳೇ! ನೀವು ಹೊಂಚು ಹಾಕಿ ಭೀಷ್ಮದ್ರೋಣರನ್ನೆಲ್ಲ ಸಂಹರಿಸಿ ಈಗ ನನ್ನನ್ನೂ ಮೋಸ ದಿಂದಲೇ ಕೊಲ್ಲಲು ಸಜ್ಜಾಗಿರುವಿರಿ. ಬನ್ನಿರಿ ಎಲ್ಲರನ್ನೂ ಈ ಗಧೆಯ ಒಂದೇ ಆಘಾತದಿಂದ ಚೂರ್ಣಗೊಳಿಸುವೆನು-

ಭೀಮ—ಹ, ಹ್ಹ, ಹ! [ವ್ಯಂಗ್ಯವಾಗಿ] ಒಂದು ಕ್ಷುದ್ರ ಜಲ ಜಂತುವು ಈ ಭೀಮನ ದೃಷ್ಟಿಗೋಚರದಿಂದ ಮೇಲಕ್ಕೆ ಬಿದ್ದು ಬಡಬಡಿ ಸುತ್ತಿದೆ. ಹ!ಹ! ಈ ಜಲಚರವು ಸಾಯುವ ಲಕ್ಷಣವಿದೆಯೆಂದು ಕಾಣು

ವದು. ಹೇಗೆ ದುರ್ಯೋಧನ! ನೀರುಕುಡಿದು ಹೊಟ್ಟೆಯುಬ್ಬರಿಸಿನಿಂತಿದೆ. ಒಂದು ಹೆಜ್ಜೆ ಮುಂದರಿಸಿದರೆ ಅಪಾಯ ಅಲ್ಲಿಯೇ ವಿಶ್ರಮಿಸು. ನಾವಾರೆಂದು ಲಕ್ಷಿಸು.

ಧರ್ಮ—ತಮ್ಮಾ! ಭೀಮಾ, ಸೋತ ವೈರಿಯನ್ನು ಹಂಗಿಸುವದು ಧರ್ಮವಲ್ಲ. ನಮ್ಮ ಧ್ಯೇಯ ಸಾಧಿಸಿತು. ಇನ್ನು ಆತನನ್ನೇ ಚುಚ್ಚಿ ಚುಚ್ಚಿ ನೋಯಿಸಬೇಡ. ದುರ್ಯೋಧನ! ಶಾಂತನಾಗಿ ಕೊಂಚ ವಿಶ್ರಮಿಸು. ಈಗ ನಾವು ನಡೆಸಬೇಕಾದುದು ಆದರ್ಶ ಧರ್ಮಯುದ್ಧ ಅನ್ಯಾಯವಾಗಿ ಅನಾಥ ಸ್ತ್ರೀಬಾಲಕರನ್ನೆಲ್ಲ ಹಿಂಸಾಗ್ನಿಯಲ್ಲಿ ಹೋಮಿಸುವ ನರ ರಾಕ್ಷಸರು ಅಥವಾ ಯುದ್ಧ ಪಿಪಾಸುಗಳು ನಮ್ಮ ಯುದ್ಧದ ರೀತಿಯನ್ನು ನಿರಂತರವೂ ಅನುಕರಿಸಲಿ; ನಿನ್ನ ಒದ್ದೆಯ ಬಟ್ಟೆಯನ್ನು ಬಿಸಾಡು. ಇದೋ ಬೇಕಾದ ವಸ್ತ್ರಾಭರಣಗಳನ್ನು ಧರಿಸು. ಇಚ್ಛಿತವಾದ ಆಯುಧ ಧರಿಸಿ ನಮ್ಮೊಳಗೆ ಬೇಕಾದ ವೀರರನ್ನು ರಣಕ್ಕೆ ಆಹ್ವಾನಿಸು

ದುರ್ಯೋಧನ—[ಪಾಂಡವರಿಂದ ಕೊಡಲ್ಪಟ್ಟ .ವಸ್ತ್ರಾಭರಣಗಳನ್ನು ಧರಿಸಿ ಉತ್ಸಾಹದಿಂದ] ಎಲೈ ಪಾಂಡುವೀರರೇ! ಇದೀಗ ಎಲ್ಲವರೂ ಬನ್ನಿರಿ, ಅಥವಾ ಒಬ್ಬರೇ ಬನ್ನಿರಿ– ಎಲ್ಲರಿಗೂ ಸರಿಯಾಗಿ ಯುದ್ಧೋಪಚಾರವನ್ನು ಕೊಡುವ ಈ ಕೌರವನ ಕರಕೌಶಲ್ಯದ ವೈಚಿತ್ರ್ಯವನ್ನು ಜಗತ್ತಿಗೆ ತೋರಿಸುವೆ.

ಧರ್ಮನಂದನ—ದುರ್ಯೋಧನ! ನೀನು ಪ್ರಕಟವಾಗಿ ನಮ್ಮನ್ನು ಸಂತೋಷಗೊಳಿಸಿದೆ. ಏಕಾಂಗಿಯಾದ ನೀನು ನಮ್ಮೈವರಲ್ಲಿ ಇಷ್ಟಬಂದವರೊಡನೆ ಯುದ್ಧಮಾಡು ನೀನು ಒಬ್ಬನನ್ನು ಜಯಿಸಿದರೂ ಸರಿಯೇ. ನಾವೆಲ್ಲರೂ ಸೋತವರೆಂದು ನನ್ನ ಒಪ್ಪಿಗೆ. ಆಗ ನಿನ್ನ ರಾಜ್ಯ ನಿನಗೆ.

ಕೃಷ್ಣ - (ತುಸು ಬಿರುಸಿನಿಂದ) ಯುಧಿಷ್ಠಿರ! ಇದೆಂಥ ಹುಡುಗಾಟಿಕೆ ನಿನ್ನ ಈ ನುಡಿಯಿಂದ ಈ ವರೆಗಿನ ಸರ್ವರ ಸರ್ವಸಾಹಸವನ್ನು ಬೂದಿಯಲ್ಲಿ ಹೋಮಿಸಿದಂತಾಯಿತು. ಈಗ ದುರ್ಯೋಧನನು ಸಾಮಾನ್ಯನೆಂದು ತಿಳಿದೆಯಾ! ಗದಾಯುದ್ಧದಲ್ಲಿ ಭೀಮನಂತೆ ಬಲ

ದೇವನ ಮುಖ್ಯಶಿಷ್ಯನು. ಇಷ್ಟೇ ಅಲ್ಲ, ಹದಿನಾಲ್ಕು ವರ್ಷ ಸಂತತವಾಗಿ ಬೇಡಿನ ಭೀಮನನ್ನು ನಿರ್ಮಿಸಿ ಅದರೊಡನೆ ಹೋರಾಡಿ ಯಾರಿಗೂ ಅಜೇಯನಾಗಿದ್ದಾನೆ. ಈಗಂತೂ ಜೀವದ ಹಂಗು ದೊರೆದು ಕಾದುವ ಈ ವೀರನ ಗಥೆಯು ಮುಂದೆ ಭೀಮನಿರಲಿ; ಪ್ರತ್ಯಕ್ಷ ಬಲದೇವನೂ ನಿಲ್ಲಲಾರನು. ಉಳಿದವರ ಮಾತು ದೂರ. ಧರ್ಮ! ಆಡಿ ಕೆಡಿಸಿಬಿಟ್ಟೆ. ಜನ್ಮದಿಂದ ಮರಣಾಂತವೂ ಕುಂತಿಯ ಮಕ್ಕಳಿಗೆ ವನವಾಸವೆಂಬುದೇ ವಿಧಿಯ ಲಿಖಿತವೇ—ದೈವೇಚ್ಛೆಯಿದ್ದಂತಾಗುವದು. ಮತ್ತೇನು ಮಾಡಬರುವದು.(ಭೀಮನನ್ನು ದೃಷ್ಟಿಸಿ ಸುಮ್ಮನಾಗುವನು)

ಭೀಮ—ಕೃಷ್ಣಾ! ಚಿಂತಿಸಬೇಡ ಕುರು ಸೈನ್ಯದ ಅಪರಿಮಿತ ಗಜ ಸಮೂಹವು ಈ ಗಥೆಯು ಆವೃತ್ತಮಾತ್ರದಿಂದ ತೂರಿಹೋಗಿದೆ ಲೀಲಾಮಾತ್ರದಿಂದ ಕುರುಕ್ಷೇತ್ರದಲ್ಲಿ ರಕ್ತಸಾಗರವೇ ರೂಪುಗೊಂಡಿತು. ಇದೀಗ ವಿಜಯಮಾಲೆಯ ಅರಳಿದ ಪ್ರಬೆಯನ್ನು ಕಾಣುತ್ತಿರವಾಗ ಇದೊಂದು ಕೌರವನೆಂಬ ಕ್ಷುದ್ರಕೀಟವು ಏನುಮಾಡಬಲ್ಲದು ನೀನು ನಿಶ್ಚಿಂತನಾಗು ಕೃಷ್ಣಾ!

ದುರ್ಯೋಧನ—ಸಾಕು ಭೀಮಾ! ನಿನ್ನ ಒಣ ಪೌರುಷ. ಹೇಡಿಯ ಅಸ್ತ್ರವೇ ಇದಾಗಿದೆ. ಆಡಿ ಕೆಡಿಸುವದು ಶೂರನ ಲಕ್ಷಣವಲ್ಲ. ಕೃತಿಶೌರ್ಯವೇ ಶೂರನ ನಿಜಲಕ್ಷಣ. ಆ ಅಭಿಮಾನ ನಿನ್ನಲ್ಲಿದ್ದರೆ ರಣರಂಗದಲ್ಲಿ ವ್ಯಕ್ತಗೊಳಿಸು.

ಭೀಮ—(ಗಥೆಯನ್ನು ತಿರುಗಿಸುತ್ತ) ಬಾ ದುರ್ಯೋಧನ ಬಹುಕಾಲದ ಸೇಡನ್ನು ಇಂದು ಯಥೇಚ್ಛ ತೀರಿಸಿಕೊಳ್ಳೋಣ.

ದುರ್ಯೋಧನ—(ಗಥೆಯನ್ನು ಮೇಲಕ್ಕೆತ್ತಿ) ಇದೋ ಬಂದೆ ಹೊಟ್ಟೆ ಬಾಕ ಭೀಮಾ! ಜನ್ಮದಿಂದಲೂ ಇಂಥ ಸಮಯ ಕಾಯುತ್ತಿದ್ದೆ. ಇಂದು ಮಾತ್ರ ಧನ್ಯನಾದೆ.

(ಗಧಾಪಾಣಿಗಳಾದ ಭೀಮ ದುಯೋಧನರಿಬ್ಬರೂ ಯುದ್ಧ ಮಾಡುವರು. ಕ್ಷಣಕಾಲ ನಂತರ ದುರ್ಯೋಧನನು ಬೀಳುವನು)

(ಪರದೆ)

(ದ್ವೈಪಾಯನ ಸರೋವರದ ಮಾರ್ಗ ಪ್ರದೇಶದಲ್ಲಿ ಬಲರಾಮ ಆಲೋಚಿಸುತ್ತ ಬರುವನು)

ಬಲರಾಮ – ಕೃಷ್ಣನ ಕಪಟ ತಂತ್ರದಿಂದ ಕೌರವ ಕುಲವು ನಿರ್ಮೂಲವಾಯಿತು. ಈ ಸಮಯದಲ್ಲಿ ನೀತಿಯ ನಿರ್ಮಲೋದಕವನ್ನು ಒಬ್ಬನೂ ಎತ್ತಿಹಿಡಿದಿಲ್ಲವೇ! ಪಾಂಡವರೂ ಅಷ್ಟು ನೀತಿಭ್ರಷ್ಟರಾದರೆ! (ಪಶ್ಚಾತ್ತಾಪದಿಂದ) ಶಿಷ್ಯೋತ್ತಮಾ! ದುರ್ಯೋಧನ! ನನ್ನನ್ನು ನಂಬಿ ನೊಂದೆಯಾ! ಏಕಾಂಗಿಯಾಗಿ ನೀನು ಯುದ್ಧ ಮಾಡುತ್ತಿರುವ ವಿಷಯತಿಳಿದು ಹೃದಯವು ತಳಮಳಿಸುತ್ತಿದೆ ಭಾರತ ಸಾಮ್ರಾಟನಾಗಿ ಮೆರೆದ ನಿನಗೆ ಎಂಥ ವಿಪತ್ತು ಪ್ರಾಪ್ತವಾಯಿತು ಹನ್ನೊಂದು ಅಕ್ಷೋಹಿಣೀ ಸೈನ್ಯದಲ್ಲಿ ನೀನೊಬ್ಬನುಳಿದೆಯಾ! ಏನು ಮಾಡಲಿ. (ತಿರಸ್ಕಾರದಿಂದ) ನಿನ್ನ ದುರ್ದೈವವೇ ಅಷ್ಟು ಬಲವಾಗಿದೆ. ಕರ್ಣ, ದ್ರೋಣ, ಶಲ್ಯ, ಭೀಷ್ಮಾದಿ ಅಜೇಯ ವೀರರು ಮಡಿಯುವದು ಶಕ್ಯವಿಲ್ಲ. ನಿನ್ನ ದುರ್ಭಾಗ್ಯವು ಸಕಲ ಸನ್ನಾಹದಿಂದ ಉತ್ಸುಕನಾಗಿ ಬರುವ ನನ್ನ ದಾರಿಗೆ ತೀರ್ಥಯಾತ್ರೆಯ ದೀರ್ಘವಾದ ಸುತ್ತುಹಾಕಿತು. ಆಗಲಿ, ಈ ಸಮದಲ್ಲಿ ನಿನ್ನ ಪ್ರಾಣವಾಯುವಿದ್ದರೂ ಸಾಕು (ಕ್ರೋಧದಿಂದ ಹಲಾಯುಧವನ್ನೆತ್ತಿ ಹಿಡಿದು) ಇದೇ ಹಲಾಯುಧದಿಂದ ನೀತಿ ಭ್ರಷ್ಟರಾದ ಪಾಂಡವರು ಧ್ವಂಸಗೊಳ್ಳುವ ದೃಶ್ಯವನ್ನು ನೋಡಿ ನಲಿಯಬಹುದು. ವೀರಶಿಖಾಮಣಿ! ನನ್ನ ಕರ್ತವ್ಯಪೂರೈಸಲು ಇದೋ ಧಾವಿಸಿ ಬರುತ್ತಿರುವೆ. ಸುಯೋಧನಾ! ನಿಶ್ಚಿಂತನಾಗು (ವೇಗದಿಂದ ತೆರಳುವನು). (ಪರದೆ) ದ್ವೈಪಾಯನ ತೀರದ ಯುದ್ಧ ಭೂಮಿ. ಸುಯೋಧನನು ಪುನಃ ಸಜ್ಜಾಗಿ ನಿಲ್ಲುವನು)

ಭೀಮ—ಹಹ್ಹಹ್ಹ ದುರ್ಯೋಧನ! ಸಾಯಲಿಲ್ಲವಷ್ಟೇ! ಆಗಲಿ. ನಿನ್ನ ಪೌರುಷವು ತಿಳಿದಂತಾಯಿತು ಬಲದೇವನಿಂದ ಗದಾಯುದ್ಧವನ್ನು ಎಷ್ಟು ಕಲಿತಿರುವಿಯೆಂದು ತಿಳಿದಂತಾಯಿತು ಕ್ಷಾತ್ರ ವೀರರಿಗಲ್ಲದೆ ಅಂಥ ವೀರವಿದ್ಯೆಯು ನಿನ್ನ ಸಿರಿವಂತಿಕೆಯ ಮಬ್ಬಿನಲ್ಲಿ ಹೇಗೆ ತಿಳಿಯಬೇಕು. ಯುದ್ಧ ಮಾಡುವ ಧೈರ್ಯವಿದೆಯೇ!

ದುರ್ಯೋಧನ—(ರೋಷದಿಂದ) ಛೀ ಹೊಟ್ಟೆ ಬಾಕ ಭೀಮ! ಒಂದಾವರ್ತಿ ನನ್ನನ್ನು ಕೆಡವಿದ ಮಾತ್ರಕ್ಕೆ ನೀನೊಬ್ಬ ರಣಪಂಡಿತ ನಾಗಲಾರೆ. ಬಲದೇವನ ಗದಾಯುದ್ಧದ ಪ್ರಭಾವವನ್ನು ನೋಡ ಬಹುದು. ಶರೀರವೇ ಭಾರವಾದ ನೀನು ನಿಮಿಷ ಮಾತ್ರದಲ್ಲಿ ಇಲ್ಲ ದಂತಾಗುವೆ (ಶೂನ್ಯಮನಸ್ಕನಾಗಿ) ಈ ಸಮಯದಲ್ಲಿ ನನ್ನ ಸಹಾಯ ಕ್ಕೆಂದು ಪ್ರಾಣಿ ಮಾತ್ರವೂ ಇಲ್ಲವಲ್ಲ. ಬಲದೇವ! ನೀನೊಬ್ಬ ನಾದರೂ ಬಂದಿದ್ದರೆ ಶಿಷ್ಯನ ಹಸ್ತಲಾಘವ ನೋಡಿಯಾದರೂ ನಲಿಯ ಬಹುದಿತ್ತು. ಹಾಯ್! ಈ ದುರ್ಭಾಗ್ಯನನ್ನು ಕಾಣುವ ವೇಳೆಯು ಮೀರುತ್ತಲಿದೆ. ಆಗಲಿ ಬಲದೇವ! ನಿನ್ನ ಆಶೀರ್ವಾದ ಬಲವಾದರೂ ಸಾಕು ಆಗ ನೂರಾರು ಭೀಮರೂ ತೃಣಸಮಾನರು. ಇದೋ ಭೀಮ! ಪರ್ವತಪ್ರಾಯನಾದ ನಿನಗೆ ನನ್ನ ಗದೆಯು ವಜ್ರಾಘಾತ.

ಭೀಮ — ಹೇಡಿಯಂತೆ ಏನನ್ನಾಲೋಚಿಸುವೆ ಮರುಳ ದುರ್ಯೋ ಧನ! ಇದು ದ್ಯೂತವಲ್ಲ-ಯುದ್ಧ. ಅಂತಃಪುರವಲ್ಲ ರಣಭೂಮಿ. ಕುಹಕ ಶಕುನಿಯಲ್ಲ. ಮುಂದೆ ನಿಂತವನು ನಿನ್ನ ಮೃತ್ಯುರೂಪ ತಾಳಿದ ಭೀಮನು. ಎಚ್ಚರಿಕೆಯಿಂದ ಯುದ್ಧಮಾಡು. ನಿನ್ನ ಸಹಾಯಕರನ್ನು ಸ್ಮರಿಸಿಕೋ! ಈಗ ಯಾರು ಬರುವರು. ಎಲ್ಲರನ್ನೂ ಕಳಕೊಂಡು ಈಗ ಚಿಂತಿಸಿದರೆ ಪ್ರಯೋಜನವೇನು.

ಬಲರಾಮ — (ವೇಗದಿಂದ ಪ್ರವೇಶಿಸಿ) ಪ್ರಯೋಜನವಿದೆ ಪೃಥ್ವಿಯು ಪಲ್ಲಟವಾದರೂ ಸುಯೋಧನನಿಗೆ ಸಹಾಯಕರು ಇದ್ದಾರೆ ಭೀಮ, ಪಾಂಡು ಪುತ್ರರೆ! ಮೈಮರೆಯಬೇಡಿ. ಏಕಾಂಗಿಯಾದ ಕೌರವನನ್ನು ಎಲ್ಲರೂ ಮುತ್ತಿರುವಿರಿ. ನಿಮ್ಮ ಅನ್ಯಾಯಕ್ಕೆ ತಕ್ಕ ಮಾರ್ಗದರ್ಶನವು ನನ್ನ ಭೀಕರ ಹಲಾಯುಧದಲ್ಲಿದೆ ನೋಡಿರಿ. ನೀಚರೆ (ಎಂದು ಹಲಾಯುಧವನ್ನು-ಪಾಂಡವರ ಮೇಲೆತ್ತುವನು)

ಕೃಷ್ಣ—ಅಣ್ಣಾ ಇದೇನು! ಇಷ್ಟೇಕೆ ಕೋಪ ತಾಳುವಿ. ವಸ್ತು ಸ್ಥಿತಿಯನ್ನು ವಿಚಾರಿಸು. ಕೌರವನೊಂದಿಗೆ ಭೀಮನೋರ್ವನೆ ಯುದ್ಧ ಮಾಡುತ್ತಿರುವನು ನಾವೆಲ್ಲ ನಿರಸ್ತ್ರರಾಗಿ ನೋಡುತ್ತಿದ್ದೇವೆ. ಆತನ

ಮೈಮೇಲಿನ ಕವಚಕುಂಡಲಗಳನ್ನು ನಿರೀಕ್ಷಿಸು ಪಾಂಡವರ ಉದಾರತೆ -ಆದರ್ಶನೀತಿ ಯುದ್ಧವು ತಾನಾಗಿ ತಿಳಿಯುವದು.

ಬಲರಾಮ—ಸಾಕು ಕೃಷ್ಣ! ನಿನ್ನ ಬಡಿವಾರದ ಮಾತು ನಿನ್ನಿಂದಲೇ ಕುರುಕುಲವು ನಿರ್ಮೂಲವಾಯಿತು ಪಾಂಡವರು ಮಾತ್ರ ನೀತಿ ಸಂಪನ್ನರು. ಕೌರವರು ಮಾತ್ರ ನೀತಿ ಭ್ರಷ್ಟರು-ಅಲ್ಲವೇ! ಏನು ಮಾಡಲಿ-ಪಾಂಡವರ ಹೆಮ್ಮೆಯನ್ನು ಅಡಗಿಸುತ್ತಿದ್ದೆ.

ಕೃಷ್ಣ—ಅಣ್ಣಾ! ಪಾಂಡವರು ನಮಗೆ ಅತ್ತೆಯ ಮಕ್ಕಳು- ಕೌರವನು ಬೇಕೆಂತ ಯುದ್ಧಹೂಡಿದಾಗ ಯಾರೇನು ಮಾಡುವರು. ಪಾಂಡವರಲ್ಲಿ ಕೊಂಚವಾದರೂ ಅನೀತಿ ಕಂಡರೆ ಶಿಕ್ಷಿಸು ಹೊರತು ವ್ಯರ್ಥವಾಗಿ ಕೋಪವೇಕೆ. ಶಾಂತನಾಗಿ ವಿಚಾರಿಸು.

ಬಲರಾಮ—ಕೃಷ್ಣಾ! ಯಾವ ಕೆಲಸಕ್ಕೆ ಮುಂದಾದರೂ ಅಲ್ಲಿ ನಿನ್ನ ಆತಂಕವಿದೆ. ಹುಂ ಆಗಲಿ ಬಿಡು- ಎಂದು ಹಲಾಯುಧವನ್ನು ಕೆಳಗಿಳಿಸುವನು.

ದುರ್ಯೋಧನ — (ದುಃಖದಿಂದ) ಯಾದವಾಗ್ರಣೀ! ಈಗಲಾದರೂ ನನ್ನ ನೆನಪಾಗಿ ಬಂದಿರುವೆ. ಹತಭಾಗ್ಯನಾದ ಈ ಸುಯೋಧನನಿಗೆ ಜಗತ್ತಿನಲ್ಲಿ ಇನ್ನಾರಿಲ್ಲ. ನನ್ನವನೆಂದರೆ ನೀನೊಬ್ಬನೇ. (ನಮಸ್ಕರಿಸುವನು)

ಬಲರಾಮ —(ಮರುಕದಿಂದ) ಸುಯೋಧನಾ! ಏನು ಮಾಡಲಿ ಈಗ ಎಲ್ಲ ಕಾರ್ಯವೂ ಮಿಂಚಿಹೋಯಿತು. ಭಾರತ ಯುದ್ಧದ ಮುಕ್ತಾಯವು ನಿನ್ನೊರ್ವನ ತಲೆಯ ಮೇಲೆ ನಿಂತಿದೆ ಅತ್ಯಂತ ಅಭಿಮಾನಿ ವೀರರಲ್ಲಿ ನಿನ್ನನ್ನು ಮೆಚ್ಚಿದ ಈ ಬಲರಾಮನಿಗೆ ನಿನ್ನ ದರ್ಶನಕ್ಕಾದರೂ ಅವಕಾಶವಿದೆ. ಆಗಲಿ ಶಿಷ್ಯವೀರನೆ! ಕ್ಷಾತ್ರಕುಲಸಮ್ರಾಟನಾದ ನೀನು ಅಸಹಾಯನಲ್ಲ- ಇದೋ ಹಲಾಯುಧವು ಸ್ಪಂದಿಸುತ್ತಿದೆ ರಣಕುಂಡದ ಚಾಲನೆಗೆ ಅನುಮತಿಯಷ್ಟೇ!

ಕೃಷ್ಣ—ಅಣ್ಣಾ! ಈಗ ನಮ್ಮೊಳಗೆ ಜಗಳವೇಕೆ? ಹಲಾಯುಧಕ್ಕೆ ಸುದರ್ಶನವೂ ಎದುರಾಗಬೇಕಾಗುವದು. ಇದು ಮತ್ತೂ ಅನಾಹುತ. ಭೀಮ ದುರ್ಯೋಧನರೀರ್ವರೂ ನಿನ್ನ ಶಿಷ್ಯರು ಸಮಬಲರು.

ಅವರೇ ಯುದ್ಧ ಮಾಡಲಿ ನಮಗೆ ಇಕ್ಕರ್ತರಲ್ಲಿ ಪಕ್ಷಪಾತವೇಕೆ. ಶಿಷ್ಯ ವೀರರ ಯುದ್ಧ ಚಮತ್ಕಾರವನ್ನು ನೋಡಿ ಆನಂದಿಸು. ಭೂಪ್ರದಕ್ಷಿಣೆಯಿಂದಾದ ದಣಿವು ಹಿಂಗಲಿ ವಿಶ್ರಮಿಸು. ನಾನೂ ತಟಸ್ಥನಾಗಿರುವೆ. ಪಾಂಡವರ ಯುದ್ಧ ನೀತಿಯನ್ನು ಪ್ರತ್ಯಕ್ಷ ಕಾಣಬಹುದು.

ಬಲರಾಮ—(ತಿರಸ್ಕಾರದಿಂದ) ಹುಂ ನಿನ್ನ ಹೇಳಿಕೆಯೇ ಆಗಲಿ (ಕುಳಿತುಕೊಳ್ಳುವನು; ಭೀಮ ದುರ್ಯೋಧನರಿಬ್ಬರೂ ಬಲರಾಮನನ್ನು ನಮಸ್ಕರಿಸಿ, ಪುನಃ ಯುದ್ಧ ಮಾಡುವರು. ಭೀಮನು ಬೀಳುವನು)

ಬಲರಾಮ— (ಹರ್ಷೋದ್ಗಾರದಿಂದ) ಭಲೇ ದುರ್ಯೋಧನ! ನಿನ್ನ ಸಾಹಸ ಚಪಲತೆಗಳ ಮಹಾ ಸುಳಿಯಲ್ಲಿ ಆನೆಯಂಥ ಭೀಮನು ನಿಲ್ಲಬಲ್ಲನೇ! ನನ್ನ ವಿದ್ಯೋಪದೇಶವು ಸಫಲವಾಯಿತು. ಇಂಥ ಶಿಷ್ಯ ವೀರರಿಂದಲೇ ಗುರುವಿನ ಜನ್ಮವು ಸಾರ್ಥಕ.

ಭೀಮ—(ಎಚ್ಚತ್ತು) ದುರ್ಯೋಧನ! ಹೆಮ್ಮೆಯಿಂದ ಹಿಗ್ಗಬೇಡ. ಗರ್ಜಿಸುತ್ತಿರುವ ಸಮುದ್ರತೆರೆಗಳು ಹಿಂತೆರಳುವಾಗಲೂ ಕೊಚ್ಚಿಕೊಂಡೊಯ್ಯುವವು ಅದರಂತೆ ಈ ನನ್ನ ಪ್ರಹಾರದಿಂದ ತೂರಿ ಹೋಗುವಿ. (ದುರ್ಯೋಧನನು ಬೀಳುವನು.)

ಸಾತ್ಯಕಿ—ಎಂಥ ಬಿರುಗಾಳಿಯಿಂದಲೂ ಕುಲಾಚಲವು ಚಲಿಸಲಾರದು. ಆದರಂತೆ ಭೀಮನ ವೀರತನದ ಮುಂದೆ ಕೌರವನ ವಿಕ್ರಮವು ನಿಷ್ಪ್ರಯೋಜಕ. ಇಲ್ಲವಾದರೆ ಹನ್ನೊಂದು ಅಕ್ಷೋಹಿಣೀ ಮಹಾಬಲದಲ್ಲಿ ಇದೊಂದು ಜೀವವುಳಿಯುವಂತಾಗುತ್ತಿತ್ತೇ!

ದುರ್ಯೋಧನ—(ಎಚ್ಚರದಿಂದ-ಆವೇಶಗೊಂಡು) ಉದರಂಭರಿ ಭೀಮಾ! ನಿನಗೆಷ್ಟು ಅಹಂಕಾರ. ಗದಾಯುದ್ಧ ಕೌಶಲ್ಯವು ಶರೀರವೇ ಹೊರೆಯಾಗಿರುವ ನಿನಗೆ ಹೇಗೆ ಬಂದೀತು ನೋಡುತ್ತಿರು ಉಕ್ಕೇರುವ ಕಡಲ ತೆರೆಯಂತೆ ಅಪ್ಪಳಿಸುವ ನನ್ನ ಗದಾಪ್ರಯೋಗದ ಚಮತ್ಕೃತಿಯನ್ನು. ಇದೊಂದು ಪ್ರಹಾರದಿಂದ ತಪ್ಪಿಕೊಂಡರೆ, ನೀನು ನಿಜ

ವಾದ ಶೂರನು. (ಗದೆಯಿಂದ ಹೊಡಿಯುವನು, ಭೀಮನು ಜರ್ಜರಿತ ನಾಗಿ ಬೀಳುವನು, ಅರ್ಜುನನು ಉಪಚರಿಸುವನು).

ಬಲರಾಮ—ಭಾಪು! ಸುಯೋಧನ! ನಿನ್ನ ವೀರಾವೇಶ ವಿದ್ಯುದ್ವೇಗ-ತೀವ್ರಪ್ರಹಾರಗಳ ಮುಂದೆ ಭೀಮನಿರಲಿ ಪ್ರತ್ಯಕ್ಷ ಯಮನೂ ನಿಲ್ಲಲಾರನು

ಕೃಷ್ಣ— ಅಣ್ಣಾ! ಯುದ್ಧರಂಗದಲ್ಲಿ ಸೋಲು ಗೆಲವುಗಳು ಗ್ರೀಷ್ಮದ ವೃಷ್ಟಿಯಂತೆ ಅನಿಶ್ಚಿತ ಅದು ಯಾರ ಸೊತ್ತಲ್ಲ. ಪ್ರತ್ಯಕ್ಷ ವೀರರ ಮುಂದೆ ನಿಂತು ಹೀಗೆ ಒಬ್ಬನನ್ನು ಉತ್ತೇಜಿಸುವದು, ಮತ್ತೊಬ್ಬನನ್ನು ಕುಗ್ಗಿಸುವದು ಸರಿಯಲ್ಲ. ಜಯಶ್ರೀಯ ಕೋಲ್ಮಿಂಚು ಯಾರಲ್ಲಿ ಪ್ರಕಾಶಿಸುವದೆಂಬದನ್ನು ನಿರೀಕ್ಷಿಸುವದೇ ನಮ್ಮ ಕರ್ತವ್ಯ ಅದಕ್ಕೆ ಹೊರತಾದ ವಿಷಯ ನಮಗೇಕೆ.

ಧರ್ಮಜ—(ಚಿಂತೆಯಿಂದ) ಅರ್ಜುನಾ! ಭೀಮನ ತಲೆಯಿಂದ ಚಿಮ್ಮುವ ರಕ್ತ ನಿಂತಿಲ್ಲವೇ!

ಅರ್ಜುನ - ನಿಂತಿದೆ ನೀವು ಗಾಬರಿಯಾಗಬೇಡಿರಿ.

ದೃಷ್ಟದ್ಯುಮ್ನ—ಎಚ್ಚರಾಗಲು ಇನ್ನೂ ವಿಳಂಬವಿದೆಯೇ!

ಅರ್ಜುನ – ಹೌದು ಮರ್ಮಾಘಾತವು ಬಲವಾಗಿದೆ

ಪಾಂಡು ಸೈನಿಕರೆಲ್ಲರೂ ಚಿಂತಾಮುಖದಿಂದಿರುವರು (ಪರದೆ)

(ಕುರುಕ್ಷೇತ್ರದಲ್ಲಿ ಪಾಂಡುಶಿಬಿರ-ಹಾಡುತ್ತ ಹೂವು ಪೋಣಿಸುತ್ತಿರುವ ಪಾಂಚಾಲಿ)

ಪಾಂಚಾಲೆ—ಪ್ರಸನ್ನ ಮುದ್ರೆಯಿಂದ) ಆಹಾ ಪವಿತ್ರವಾದ ಈ ಕುರುಕ್ಷೇತ್ರದಲ್ಲಿ ನನ್ನ ಆಶಾ ಕುಸುಮಗಳು ಈಗ ಹದಿನೇಳು ದಿನಗಳಿಂದಲೂ ಅರಳುತ್ತಲಿವೆ. ದಿನದಂತೆ ಇಂದೊಂದು ಅರಳಿದರೆ ಕ್ಷಾತ್ರಜಗತ್ತಿನ ವಿಜಯ ಮಾಲಿಕೆಯಾಗಿ ಆದರ್ಶ ಸಿಂಹಾಸನಾಸೀನರಾದ ಪಾಂಡವರ ಕೀರ್ತಿ ಸೌರಭ್ಯವನ್ನು ದಿಗಂತದಲ್ಲಿಯೂ ಬೀರಬಲ್ಲದು. ಪತಿಗಳ ವೀರತ್ವದಿಂದ ಹಬ್ಬಗೊಪ್ಪುವ ಕೀರ್ತಿಲತೆಯ ಚಿಗುರನ್ನು ಕೊಚ್ಚುತ್ತಿದ್ದ ಕುರುಕೀಟಗಳಲ್ಲಿ ಇನ್ನೊಂದೇ ಉಳಿದಿದೆ. ಅದರ ಸಂಹಾರವೆಂದರೆ ವಿಜಯಮಾಲೆಯ ಪರಿಪೂರ್ಣತೆ. ಒಮ್ಮಿಂದೊಮ್ಮೆ ಬಲಭುಜ ಹಾರಿ

ದಂತಾಗುವದು. ಆಂ. ಇದೇನು ಸಂಧ್ಯಾಸಮಯದಲ್ಲಿ ಈ ಅಪಶಕುನ

ದಾಸಿ—ಮಹಾ ರಾಣಿಯವರೇ! ಮಹಾರಾಣಿಯವರೆ! ನೋಡಿರಿ ಎಂಥ ಸುಂದರಪುಷ್ಪವಿಂದಿನದು ನೀವು ತಯಾರಿಸುತ್ತಿರುವ ವಿಜಯ ಮಾಲಿಕೆಗೆ ಇದೊಂದು ಪದಕವಿಟ್ಟಂತಾಗುವದು. ಎಷ್ಟು ಮುದ್ದಾಗಿದೆ

ಪಾಂಚಾಲಿ—(ನಿಟ್ಟುಸಿರು ಬಿಟ್ಟು) ಎಷ್ಟು ಮುದ್ದಾದರೇನು ಸುಂದರವಾದರೇನು ವಿಜಯ ಮಾಲಿಕೆ ಹಿಡಿಯಲು ಕೈಗಳು ಭಾರವಾಗಿವೆ.

ಸಖಿ (ಮುಖನೋಡಿ) ಹೀಗೇಕೆ, ಇಂದಿನ ವಿಜಯದ ಸುದಿನ ದಲ್ಲಿ ಚಿಂತೆಯ ಮುಸುಕು ಆವರಿಸಲು ಕಾರಣವೇನು ಮಹಾರಾಣೀ.

ಪಾಂಚಾಲಿ — ಅದೇಕೋ ಅಪಶಕುನದ ಭಯವು ಹೃದಯ ವನ್ನಾವರಿಸುತ್ತಿದೆ- ಭಗವತಿ ಹಸ್ತಿನಾಂಬೆಯ ಕರುಣಾಮಯರತ್ನ ಬೆಳೆಯಲ್ಲಿ ಪೋಣಿಸುತ್ತಿರುವ ವಿಜಯ ಮಾಲಿಕೆಯು ಅಕಸ್ಮಾತ್ ಕೈ ತಪ್ಪಿ ಜಾರಿದಂತಾಯಿತು. ಸಂಧ್ಯಾ ಸಮಯದ ಕತ್ತಲೆಯಂತೆ ಅವ್ಯಕ್ತ ವೇದನೆಯು ದೇಹವನ್ನು ವ್ಯಾಪಿಸುತ್ತಿದೆ.

ಸಖಿ —(ಗಾಬರಿಯಾಗಿ) ಅಂತಹ ಸಂಕಟ ಸಮಯವು ಇಂದಿನ ವಿಜಯದ ಕೊನೆ ದಿನದಲ್ಲಿ ಹೇಗೆ ಪ್ರಾಪ್ತವಾಗಿರಬಹುದು. ದ್ವೈಪಾ ಯನ ಸರೋವರದಲ್ಲಡಗಿದ ದುರ್ಯೋಧನನ್ನು ಮೇಲೆಬ್ಬಿಸಿ ಯುದ್ಧ ವನ್ನು ಪುನಃ ಪ್ರಾರಂಭಿಸಿದ್ದಾರೆ ಎಂಬದನ್ನು ಇದೀಗ ಅರ್ಧತಾಸಿನಲ್ಲಿ ಬೇಟೆ ಮಾಡಿಬಂದ ನನ್ನ ಪತಿಗಳಿಂದ ತಿಳಿದೆವು. ಆದರೆ ಇಂಥ ವಿಪತ್ಸೂ ಚಕ ಚಿನ್ಹೆಗೆ ಕಾರಣವೇನಿರಬಹುದು-

ಪಾಂಚಾಲಿ—ಅದಾರಿಗೆ ತಿಳಿಯಬೇಕು ಸಖೀ!

ಸಖಿ—ಹಾಗಾದರೆ ಈಗ ಕರ್ತವ್ಯವಾವದು! ಸಮಾಧಾನ ಹೇಗೆ ದೇವಿ!

ಪಾಂಚಾಲಿ—ಸಮಾಧಾನವೇನು ವನವಾಸದಂಥ ಅಸಹ್ಯಕಷ್ಟ ಪರಂಪರೆಗಳನ್ನು ಭಗವತಿ ಹಸ್ತಿನಾಂಬೆಯ ದಿವ್ಯಾನುಗ್ರಹ ಬಲದಿಂದ ದಾಟಿ ಬದುಕಿದೆವು. ಯಾರ ಸಂಕಲ್ಪಮಾತ್ರದಿಂದ ವಿಶ್ವದ ಸೃಷ್ಟಿ ಸಂಹಾರಗಳು ನಡೆಯುವವೋ ಆ ಹಸ್ತಿನಾಂಬೆಗೆ ಮೊರೆಯಿ

ಡುವದಕ್ಕಿಂತಲೂ ಹೆಚ್ಚಿನ ಕರ್ತವ್ಯವಿನ್ನಾವುದು. ಸಖೀ! ಸಂಧ್ಯಾ ಸಮಯ ಸಮೀಪಿಸಿತು ನಿತ್ಯದಂತೆ ಹಸ್ತಿನಾಂಬೆಯ ಪೂಜಾ ಸಾಮಾಗ್ರಿಗಳನ್ನು ಸಿದ್ಧಗೊಳಿಸು. ಇಂಥ ಸಮಯದಲ್ಲಿ ಆ ಜಗನ್ಮಾತೆಯಲ್ಲದೆ ನಮಗಿನ್ನಾರು. ನಡೆ, ಹೋಗೋಣ. (ಪರದೆ)

(ಹಸ್ತಿನಾಂಬೆಯ ಮೂರ್ತಿಯೆದುರು ಪಾಂಚಾಲಿ ಹಾಡುತ್ತ ಆರತಿ ಮಾಡುವಳು.)

ಪಾಂಚಾಲಿ—(ಭಕ್ತಿಯಿಂದ ನಮಸ್ಕರಿಸಿ) ದೇವಿ! ಕರುಣಾಮಯಿ! ನಮ್ಮ ಜೀವನಾಕಾಶದಲ್ಲಿ ಕವಿಯುತ್ತಿರುವ ಮೇಘಪರಂಪರೆಗಳು ನಿನ್ನ ಅನುಗ್ರಹದ ಬಿರುಗಾಳಿಯಿಂದ ಚದುರಿ ಮಾಯಗೊಂಡಿವೆ. ಅದರಂತೆ ಇಂದೊದಗಿದ ಮಹಾವಿಪತ್ತಿನಿಂದ ನನ್ನ ಪತಿಗಳು ಮುಕ್ತರಾಗುವಂತೆ ಅನುಗ್ರಹಿಸು. ನನ್ನ ಇಂದಿನ ಆಶಾಕುಸುಮವು ನಿನ್ನ ಕಟಾಕ್ಷದ ಮಕರಂದ ಸೇವನೆಯಿಂದ ಪತಿಗಳ ವಿಜಯಮಾಲಿಕೆಯನ್ನು ದಿವ್ಯವಾಗಿ ಬೆಳಗಿಸಲಿ. ಅನುಗ್ರಹಿಸು ದೇವಿ ನನ್ನ ಬಯಕೆಯ ಪುಷ್ಪವನ್ನು ಅನುಗ್ರಹಿಸು (ಎಂದು ಕೈಜೋಡಿಸಿ ಕುಳಿತುಕೊಳ್ಳುವಳು. ವಿಗ್ರಹದ ಸುಂದರ ಪುಷ್ಪವೊಂದು ಪಾಂಚಾಲಿಯ ಕರದಲ್ಲಿ ಬೀಳುವದು. ಅಚ್ಚರಿಯಿಂದ) ನೋಡು ಗೆಳತೀ! ಇದೇ ಪ್ರಸಾದ ಪುಷ್ಪದಿಂದ ನಮ್ಮ ವಿಜಯಮಾಲಿಕೆಯನ್ನು ನಿಶ್ಚಿಂತೆಯಿಂದ ಸಿದ್ಧಪಡಿಸೋಣ. ನೋಡು ತಂಗಾಳಿಯು ಹೇಗೆ ಸುಳಿಯುತ್ತಿದೆ. ನೋಡು ಸುತ್ತಲಿನ ಪ್ರಕೃತಿಯ ಪ್ರಶಾಂತ ಸೌಂದರ್ಯದಿಂದ ಬತ್ತಿದ ಹೃದಯದಲ್ಲಿ ನವಚೈತನ್ಯ ಮೂಡುತ್ತಿದೆ (ಆಲಿಸಿ) ಅದಾರೋ ಬರುವಂತಿದೆ ಯಾರದು. (ಬೇಟೆಗಾರರಿಬ್ಬರು).

ಈರ್ವರು—ಮಹಾರಾಣಿಯವರಿಗೆ ನಮಸ್ಕಾರ.

ಪಾಂಚಾಲಿ—ಏನು ಬಂದಿರಿ, ಮತ್ತೇನು ಸಮಾಚಾರ.

ಈರ್ವರು—ಮತ್ತೇನಿಲ್ಲ, ಇಂದು ಎಂದಿಗಿಂತ ಸಂಧ್ಯಾಪೂಜೆಯು ಮುಂಚಿತವಾಗಿ ಆಯಿತು ಕಾರಣ ತಿಳಿಯೋಣವೆಂದು ಬಂದೆವು.

ಪಾಂಚಾಲಿ—ರಣರಂಗದ ಸಮಾಚಾರವೇನಾದರೂ ತಿಳಿದಿದೆಯೇ?

ಊರ್ವರು—ನಮಗೇನೂ ತಿಳಿದಿಲ್ಲ ರಾಣಿಯವರೆ. ಆದರೆ ಇಂದು ನಮಗೆ ವಿಜಯದ ಹಬ್ಬವಲ್ಲವೇ!

ಪಾಂಚಾಲಿ—ಹೌದು ನಿಶ್ಚಯವಾಗಿಯೂ ಹೌದು ಹಸ್ತಿ ನಾಂಬೆಯ ದಿವ್ಯಾನುಗ್ರಹವಿರುವಾಗ ಅನ್ಯಥಾ ವಿಚಾರವೇ ಇಲ್ಲ. ಸ್ವೀಕರಿಸಿರಿ ಪ್ರಸಾದವನ್ನು. (ಎಂದು ಪ್ರಸಾದ ಕೊಡುವಳು. ಎಲ್ಲರೂ ಭಕ್ತಿಯಿಂದ ಸ್ವೀಕರಿಸುವರು) ವಿಜಯೋತ್ಸವವು ಶೀಘ್ರವಾಗಿ-ಸುಖ ಕರವಾಗಿ ಪತಿಗಳ ಆಗಮನದೊಂದಿಗೆ ನೆರವೇರಲೆಂದು ಭಗವತಿಯನ್ನು ನಾವೆಲ್ಲರೂ ಕೂಡಿ ಪ್ರಾರ್ಥಿಸೋಣ. (ಎಲ್ಲರೂ ಭಕ್ತಿಯಿಂದ ಹಾಡು ವಾಗ ಪರದೆ ಬೀಳುವದು)

(ದ್ವೈಪಾಯನ ಸರೋವರ ತೀರದ ರಣಭೂಮಿ)

ಧರ್ಮಜ—(ಚಿಂತಾಕ್ರಾಂತನಾಗಿ) ಕೃಷ್ಣಾ! ಭೀಮನ ಪರಿಸ್ಥಿತಿ ಯಿನ್ನೂ ಸುಧಾರಿಸಿಲ್ಲ ಈಗೊಂದು ಕ್ಷಣದಿಂದ ಶ್ವಾಸಗತಿಯು ಮಾತ್ರ ಸುಸೂತ್ರವಾಗಿದೆ. ಹೊರತು ಸ್ಮೃತಿಗೊಂಡು ಚೇತರಿಸಿಲ್ಲ ಮುಂದೇನು?

ಕೃಷ್ಣ—ಧರ್ಮಜ! ಇನ್ನು ಚಿಂತೆಬೇಡ. ಪಾಂಚಾಲಿಯ ಪೂಜಾಪ್ರಭಾವದಿಂದ-ಹಸ್ತಿನಾಂಬೆಯ ಅನುಗ್ರಹ ಶಕ್ತಿಯಿಂದ ವಾಯುಪುತ್ರನ ಅಂಗಾಂಗಗಳಲ್ಲಿ ಪ್ರಾಣವಾಯುವು ಸಂಚರಿಸತೊಡ ಗಿದೆ. ಪಾತಿವ್ರತ್ಯದ ದಿವ್ಯಪ್ರಭಾವವಿದು. ಮಾದ್ರೀ ಕುಮಾರರೇ! ಭೀಮನು ಮೊದಲಂತೆ ಯುದ್ಧ ಮಾಡುವಷ್ಟು ಬಲಶಾಲಿಯಾಗಬೇಕಾ ಗಿದೆ ನಿಮ್ಮ ಪಿತೃದೇವತೆಗಳನ್ನು ಅಭಿಮಂತ್ರಿಸಿ ಉಪಚರಿಸಿರಿ.

ನಕುಲ ಸಹದೇವರು—(ಭಕ್ತಿಯಿಂದ ಪಿತೃಗಳನ್ನು ಸ್ಮರಿಸಿ) ಹೇ, ಆಶ್ವಿನೀ ದೇವತೆಗಳೇ! ನಿಮ್ಮ ಸ್ಮರಣ ಪ್ರೇಕ್ಷಣ ಮಾತ್ರದಿಂದ ಜಡವೂ ಚೇತರಿ ಜೀವಂತವಾಗುವದು. ವನಸ್ಪತಿಯ ಅಧಿದೇವತೆ ಗಳಾದ ನಿಮ್ಮಿಂದ ವಿಶ್ವಕಲ್ಯಾಣವೇ ಆಗುತ್ತಿರುವದು. ನಿಮ್ಮ ಮಹಾ ಮಹಿಮೆಯಿಂದ ಭೀಮನಲ್ಲಿ ಪುನಃ ಯುದ್ಧೋತ್ಸಾಹವು ಇಮ್ಮಡಿ ಯಾಗಿ ಜ್ವಲಿಸುವಂತಾಗಲಿ.

(ಉಪಚರಿಸುತ್ತಿರುವಂತೆ ಭೀಮನು ಎಚ್ಚತ್ತು ನಿಲ್ಲುವನು)

ಭೀಮ—(ಸಂತಪ್ತನಾಗಿ) ದುರ್ಯೋಧನಾ ಇಷ್ಟರಿಂದಲೇ ಉಬ್ಬಿ

ಮರೆಯಬೇಡ. ಸೂರ್ಯಾಸ್ತವೂ ಸಮೀಪಿಸಿತು ಕುರುವೀರನು ನಿಜ ವಾಗಿದ್ದರೆ ಈ ಪ್ರಹಾರದಿಂದ ಪಾರಾಗುವಿ ನೋಡು (ಎಂದು ಬಲವಾಗಿ ಗದೆಯಿಂದ ಹೊಡಿಯುವನು. ದುರ್ಯೋಧನ ಮೂರ್ಛಿತನಾಗುವನು ಪುನಃ ಕ್ಷಣಾಂತರದಲ್ಲಿ ಚೇತರಿಸುವನು. ಈರ್ವರೂ ಸೋಲುಗೆಲವು ಗಳಿಲ್ಲದೆ ವೀರಾವೇಶದಿಂದ ಕಾದುತ್ತಿರುವರು.)

ಅರ್ಜುನ—ಕೃಷ್ಣಾ! ಜೀವದ ಹಂಗು ದೊರೆದು ವೀರಾವೇಶದಿಂದ ಕಾದುತ್ತಿರುವ ದುರ್ಯೋಧನನ ಮುಂದೆ ನಿಲ್ಲುವವರಾರು! ಅವನ ಚಪಲತೆ ತೀವ್ರ ಪ್ರಹಾರಗಳಿಂದ ಭೀಮನು ಹಣ್ಣಾಗುತ್ತಿದ್ದಾನೆ. ವಿಜಯದಾಶೆಯು ಈಗಲೂ ಗಂಡಾಂತರದ್ದಾಗಿದೆ. ಏನು ಮಾಡುವದು.

ಕೃಷ್ಣ—ಮಾಡುವದೇನು! ಭೀಮನು ಮಾಡಿದ ಪ್ರತಿಜ್ಞೆಯನ್ನು ನೆನಪಿಸಿದರಾಯಿತು ಪ್ರತಿಜ್ಞೆಯ ಮರವಿನಿಂದಲೇ ಗಂಡಾಂತರದ ಸಂಭವ ಇನ್ನು ವಿಳಂಬಿಸಲಾಗದು.

ಅರ್ಜುನ—ಅಣ್ಣಾ! ಭೀಮಾ! ಗಂಭೀರನಾಗಿ ಪ್ರಹರಿಸು. ಪಾಂಡವರು ತಮ್ಮ ಪ್ರತಿಜ್ಞೆಯನ್ನು ಎಂದಿಗೂ ಮರೆಯಲಾರರು. ಪ್ರತಿಜ್ಞಾಪೂರ್ತಿಯೇ ವೀರಕ್ಷತ್ರಿಯನ ಪರಮೋಚ್ಚ ಕರ್ತವ್ಯ ಎಂಬ ದನ್ನು ಕೌರವನು ಈಗಲಾದರೂ ಪ್ರತ್ಯಕ್ಷ ಕಾಣಲಿ. ಆದಕ್ಕಾಗಿ ನಿನ್ನ ಶೌರ್ಯೋತ್ಸಾಹವು ದ್ವಿಗುಣಿತವಾಗಲಿ.

ದುರ್ಯೋಧನ—ವಂಚಕಿಗಳೇ, ನಿಮ್ಮ ಕಪಟೋಪಾಯವು ನನಗೆ ತಿಳಿದಿಲ್ಲವೆಂದು ಗ್ರಹಿಸಿದಿರಾ! ಕೇವಲ ಕಪಟಮೂರ್ತಿ ಕೃಷ್ಣನ ಸೂತ್ರದ ಬೊಂಬೆಗಳಾಗಿ ಹೆಜ್ಜೆಹೆಜ್ಜೆಗೂ ಅನೀತಿಯ ಕೆಸರನ್ನು ತುಳಿಯುತ್ತಿರು ವಿರಿ. ಧಿಕ್ಕಾರ ನಿಮ್ಮ ಪೌರುಷ ಶೌರ್ಯಗಳಿಗೆ ಧಿಕ್ಕಾರ. ಈ ಕೌರ ವನ ನಾಡಿಯಲ್ಲಿ ರಕ್ತ ಸ್ಫುರಣವು ನಿಲ್ಲುವ ವರೆಗೆ ನಿಮ್ಮ ಯಾವ ಮೋಸಗಾರಿಕೆಯೂ ನಡೆಯಲಾರದು ಎಚ್ಚರಿಕೆ.

ಭೀಮ—ಛೀ ಕುಲದ್ರೋಹಿ! ಹುಟ್ಟಿನಿಂದಲೂ ಮೋಸ-ವಂಚನೆ ಅಸೂಯೆಗಳ ಎರಕದ ಮೂರ್ತಿಯಾದ ನಿನಗೆ ಜಗತ್ತೇ ಕಪಟ ಮಯವಾಗಿ ಕಾಣುತ್ತಿರುವದು ಸಹಜ. ಆದರೆ ನಮ್ಮ ನಿನ್ನ ಇತಿ ಹಾಸವನ್ನು ಜಗತ್ತು ತಿಳಿದಿದೆ. ಆ ಸಂಗತಿ ಈಗೇಕೆ (ಇಬ್ಬರೂ ವಿಲಕ್ಷಣ

ರೀತಿಯಲ್ಲಿ ಯುದ್ಧಮಾಡುವರು. ಕೌರವನು ಟೊಂಕಕ್ಕೆ ಗುರಿತೋರಿಸಿ ಭೀಮನ ಮಸ್ತಕಕ್ಕೆ ಹೊಡಿಯಲೆತ್ನಿಸುವನು. ಭೀಮ ಸಾಹಸದಿಂದ ತಪ್ಪಿಸಿಕೊಳ್ಳುವನು)

ದುರ್ಯೋಧನ— ಬದುಕಿದೆಯಾ ಜೀವಗಳ್ಳ ಇನ್ನೊಂದಾವರ್ತಿಗೆ ತಪ್ಪಿಸಿಕೊಳ್ಳಲಾರೆ. ಸ್ಮರಿಸಿಕೋ ಬೇಕಾದವರನ್ನು ಇದೇ ಕೊನೆಯ ಗಳಿಗೆ.

ಭೀಮ— (ಕ್ರೋಧಾಭರಿತನಾಗಿ) ಯಾರು ಮೋಸಗಾರರು. ಟೊಂಕಕ್ಕೆ ಗುರಿಯಿಟ್ಟು ಮಸ್ತಕಕ್ಕೆ ಪ್ರಹರಿಸುವ ಕುಹಕ ಯುದ್ಧ ವನ್ನು ಯಾರು ಕಲಿಸಿದರು. ಹುಟ್ಟನಿಂದಲೂ ಅದೆಷ್ಟು ಬಗೆಯ ಮೋಸ ಪ್ರಯೋಗ ಮಾಡಿದೆ. ಆದರೂ ನಮ್ಮ ಸತ್ಯತೆ ವೀರತ್ವದಿಂದಲೇ ಬದುಕಿದೆವು. ಈಗಲೂ ಮೋಸ, ಅಲ್ಲವೇ. ಇದೋ ಇದೇ ಕೊನೆಯ ಮೋಸ. ಇನ್ನಾರನ್ನೂ ಮೋಸಗೊಳಿಸಲಾರೆ. ಪರಮ ಘಾತಕಿ! ಇನ್ನು ಸಹನೆಗೆ ಅವಕಾಶವಿಲ್ಲ, ಇದೇ ರಾಜಸಭೆಯಲ್ಲಿ ಪಾಂಚಾಲೆಗಿತ್ತ ಭರವಸೆಯ ಪ್ರತಿಜ್ಞಾಪೂರ್ತಿ. ನಿನ್ನೊಂದಿಗೆ ಮೋಸ-ವಂಚನೆಗಳೂ ಸಾಯುವವು. ಇದೇ ಭೀಕರ ಪ್ರತಿಜ್ಞೆ, ನೋಡು. (ಎರಡೂ ತೊಡೆಗಳ ಮೇಲೆ ಗದೆಯಿಂದಪ್ಪಳಿಸುವನು, ಧುಯೋಧನನು ಹಾಯ್ ಎಂದು ಧೊಪ್ಪನೆ ಭೂಮಿಗುರುಳುವನು

ದುರ್ಯೋಧನ— ಹಾಯ್ ದುಷ್ಟ ಭೀಮಾ! ಮೋಸದಿಂದ ಕೊಂದೆಯಾ! ಹಾಯ್! ಹಾಯ್! ಅನ್ಯಾಯದ ಪರಮಾವಧಿ

ಭೀಮ— (ಆವೇಶದಿಂದ) ಎಲೈ ಕುಲದ್ರೋಹಿ! ಅರಗಿನ ಅರಮನೆ- ಮೋಸವ— ದ್ಯೂತ-ವಿಷಪ್ರಾಶನ-ಇಷ್ಟೂ ಅಲ್ಲದೆ ಪಾಂಚಾಲಿಯ ಮಾನಭಂಗ- ಮುಂತಾದವುಗಳೆಲ್ಲ ನಿನ್ನ ನೀತಿಕೃತ್ಯ ಗಳು. ಕ್ಷತ್ರಿಯೋಚಿತ ಸತ್ಯಸಹನೆ–ಧೀರೋದಾದರತೆಯಿಂದ ಯುದ್ಧ ಮಾಡಿದ್ದು ನಿನಗೆ ಅನೀತಿಯಲ್ಲವೇ! ಪತಿವ್ರತೆ ಪಾಂಚಾಲಿಯ ಭೀಕರ ಶಾಪಾಗ್ನಿಯಲ್ಲಿ ದಗ್ಧರಾದ ನಿಮಗೆ ನ್ಯಾಯವಿಚಾರವೆಲ್ಲಿದೆ. ಛೀ ಪಾಪಿ! ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಭೋಗಿಸಲೇಬೇಕು ಅದೇ ನೀತಿಸೂತ್ರದ ತಿರುಳು. ಭೋಗಿಸು ನಿನ್ನ ಪಾಪದ ಫಲವನ್ನು. ಯಥೇಚ್ಛ

ವಾಗಿ ಭೋಗಿಸು (ಎಂದು ಕೌರವನ ತಲೆಯನ್ನು ಒದ್ದು ಹಾಕುವನು. ಕಿರೀಟವು ಸಿಡಿದು ಬೀಳುವದು.)

ಧರ್ಮಜ—(ಮರುಕದಿಂದ) ಭೀಮಾ! ಇದೆಂಥ ಅನ್ಯಾಯ, ಸೋತು ಸಂಕಟದಲ್ಲಿದ್ದಾನೆ. ಮತ್ತಲ್ಲದೆ ನಮ್ಮ ಜ್ಯೇಷ್ಠ ಬಂಧುವೂ ಆಗಿರುವಾಗ ಇಂಥವನಲ್ಲಿ ಕಸಿಕರಪಡದೆ ಒದೆಯುವದು ನೀತಿಯಲ್ಲ. ಕೌರವೇಂದ್ರ! ಈ ಕುರಿತು ದುಃಖಿಸಬೇಡ. ನ್ಯಾಯವೋ ಅನ್ಯಾಯವೋ ಅಂತೂ ನಿಮ್ಮನ್ನು ನಾವು ಪರಾಭವಗೊಳಿಸಿದೆವು. ಭೀಮನ ಕೃತ್ಯಕ್ಕಾಗಿ ಕೊರಗಬೇಡ. ಸಕಲ ಸಂಪತ್ತುಗಳೊಡನೆ ರಾಜ್ಯವಾಳಿ, ವೀರಸ್ವರ್ಗಕ್ಕೆ ಪ್ರಯಾಣ ಸನ್ನದ್ಧನಾದ ನೀನೇ ಧನ್ಯನು ಕುರು ಕುಲೇಂದ್ರ!

ಬಲರಾಮ--(ಕ್ರೋಧದಿಂದ ಹಲಾಯುಧವೆತ್ತಿ ಹಿಡಿದು) ಭೀಮಾ ನಿನ್ನ ದುಷ್ಕೃತಿಗೆ ಧಿಕ್ಕಾರ ಹಲಾಯುಧವೇ ಜಾಗ್ರತವಾಗು,ಅನ್ಯಾಯದ ಪ್ರತಿಫಲವನ್ನು ಭೀಮನು ಕಾಣಲಿ ಪಾಂಡವರು ಅನುಭವಿಸಲಿ. ಟೊಂಕದ ಕೆಳಗೆ ಪ್ರಹರಿಸಿ ಗದಾಯುದ್ಧದ ನಿಯಮ ಮೀರಿದ ಭೀಮನು ತಕ್ಕ ಶಾಸನ ಹೊಂದುವದು ಯೋಗ್ಯವಿದೆ.

ಕೃಷ್ಣ—(ಕೈಹಿಡಿದು) ಶಾಂತನಾಗು ಅಣ್ಣಾ! ಪಾಂಡವರು ನೀತಿ ಸಂಪನ್ನರು ಅವರ ಸೌಖ್ಯವು ನಮ್ಮ ಸುಖವನ್ನೇ ಅವಲಂಬಿಸಿದೆ. ನಮ್ಮ ಅಳಿಯನಾದ ಅಭಿಮನ್ಯುವನ್ನು ಅನೇಕರು ಮೋಸಪ್ರಯೋಗ ದಿಂದ ಕೊಂದಿದ್ದಾರೆ. ರಾಜಸಭೆಯಲ್ಲಿ ಪಾಂಚಾಲಿಯನ್ನು ಛಲಿಸಿ ದಾಗಿನ ಕ್ಷಾತ್ರ ಪ್ರತಿಜ್ಞೆಯನ್ನು ಭೀಮನೀಗ ಪೂರೈಸಿದ್ದು ನ್ಯಾಯ ವಲ್ಲೆಂದು ನೀತಿಜ್ಞನಾದ ನೀನೂ ಹೇಳಬಹುದೇ. ಅದು ಭೂಷಣವೇ!

ಭೀಮ— ಬಲರಾಮ! ನಿನ್ನ ನೂರಾರು ಹಲಾಯುಧಕ್ಕೂ ಅಳು ಕದ ಭೀಮನು ಕೊಂಚ ಅನೀತಿಗೆ ಈಗಲೂ ಹೆದರುತ್ತಿದ್ದಾನೆ. ಹುಟ್ಟಿ ನಿಂದಲೂ ಅನ್ಯಾಯ ಮೋಸಗಳಿಂದ ನಮ್ಮನ್ನು ಕೊಲ್ಲಲೆತ್ನಿಸಿದ ಈ ಕೌರವನು ಕೊನೆಯಲ್ಲೂ ತನ್ನ ಮೋಸದಿಂದಲೇ ಸಾಯುವಂತಾಯಿತು. ಎದುರು ನಿಂತು ಮಂಡಲ ಕಟ್ಟಿ ಯುದ್ಧ ಮಾಡುತ್ತಿರುವಾಗ ನಾನು ಕ್ರಮ ತಪ್ಪಿ ಹೊಡೆಯಲಿಲ್ಲ ತಾನೇ ಮಂಡಲ ತಪ್ಪಿ ಟೊಂಕಕ್ಕೆ

ಗುರಿಯಿಟ್ಟು ಮಸ್ತಕಕ್ಕೆ ಹೊಡೆಯಲು ಕೌರವನು ಜಿಗಿದಾಗ ಆತ್ಮ ರಕ್ಷಣೆಗಾಗಿ ಪ್ರತಿಜ್ಞೆಯಂತೆ ತೊಡೆಯನ್ನು ಮುರಿದೆನು. ಇದರಲ್ಲಿ ನನ್ನ ತಪ್ಪಿದೆಯೆ! ಬಲರಾಮ. ಇಬ್ಬರಿಗೂ ಗುರುವಾದ ನೀನು ಪಕ್ಷ ಪಾತವಿಲ್ಲದೆ ನಿರ್ಣಯಿಸು.

ಬಲರಾಮ—ಭೀಮಾ! ಆದರೆ ಬಿದ್ದ ಕೌರವನನ್ನು ಹಿರಿಯ ನೆಂದೂ ಎಣಿಸದೆ ಒದೆತಹಾಕಿದೆ. ಸಮ್ರಾಟ ಕಿರೀಟಕ್ಕೆ ಅಪಮಾನ ಪಡಿಸಿದೆ. ಕುರುವಂಶದ ಬೇರುಗಳನ್ನೆಲ್ಲ ಸಮೂಲವಾಗಿ ಛೇದಿಸಿದೆ. ನೀನಾದರೂ ಕೀರ್ತಿಶಾಲಿಯಾದೆಯಾ? ಛೀ, ನಿನ್ನ ಕೃತ್ಯಕ್ಕೆ ಧಿಕ್ಕಾರ! ಧಿಕ್ಕಾರ!

ಭೀಮ—ಹಲಧರ! ವಿಚಾರಿಸಿ ಮಾತನಾಡು. ಸತ್ಯನೀತಿಗಳಿಂದ ಕಬ್ಬಿಣವಾದ ನನ್ನ ಹೃದಯವು ಯಾರಿಗೂ ಅಳುಕಲಾರದು. ಆದರೆ ಅನೀತಿಗೆ ಮಾತ್ರ ಕರಗಿ ನೀರಾಗುವದು. ಬಾಂಧವೀ ಪ್ರೇಮವು ಪರಸ್ಪರವಾಗಿದೆ. ಅಂಥ ಪ್ರೇಮವಿರಲಿ. ಜನ್ಮದಿಂದಲೂ ವೈರಿಗಿಂತ ಕಠೋರವಾಗಿ ಎಣಿಸಿ ಹಿಂಸಿಸಿದ ದುರ್ಯೋಧನನನ್ನು ಈ ವರೆಗೂ ಬಂಧುವೆಂದೇ ಕ್ಷಮಿಸಿದೆವು. ಕ್ಷಮೆಗೂ ಕೊನೆಯಿದೆ. ಪಾಪಕ್ಕೆ ಪ್ರಾಯಶ್ಚಿತ್ತವೂ ಇದೆ. ಈಗ ನನ್ನಿಂದಾದ ಪ್ರತೀಕಾರವು ಅತ್ಯಲ್ಪ ವಾದದ್ದು. ದುಷ್ಕೃತ್ಯಗಳ ಪ್ರತಿಫಲವನ್ನು ಈ ದುಷ್ಟನು ಅನುಭವಿಸಲೇ ಬೇಕು. ಅದಕ್ಕೆ ಪಶ್ಚಾತ್ತಾಪವೇನು.

ಧರ್ಮಜ—(ಮರುಕದಿಂದ) ಭೀಮಾ. ಪಶ್ಚಾತ್ತಾಪವು ನನ ಗಂತೂ ಅಧಿಕವಾಗುತ್ತಿದೆ. ಸೋತು ಬಿದ್ದವನು, ಅದರಲ್ಲಿಯೂ ಹಿರಿಯ ಬಂಧುವು. ಇಂಥವನಿಗೆ ನಿನ್ನ ಪಾದಪ್ರಹಾರವೇ! ಅದೆಂಥ ಕಠೋರತೆ ಭೀಮಾ! ಇದು ಧರ್ಮವೇ! ತಮ್ಮಾ ಇನ್ನಾದರೂ ವೈರ ಭಾವಕೃತ್ಯಗಳಿಗೆ ಕೌರವನಲ್ಲಿ ಕ್ಷಮೆ ಯಾಚಿಸು.

ಭೀಮ—ಅಣ್ಣಾ! ಕ್ಷಮೆಯಿರಲಿ. ಜನ್ಮದಿಂದಲೂ ನಮ್ಮಿಬ್ಬರಲ್ಲಿ ಜ್ವಲಿಸುತ್ತಿರುವ ವೈರಭಾವವು ಪೂರ್ಣ ಮರಣಾಂತ್ಯದ ವರೆಗೂ ನಂದ ಲಾರದು; ಜನ್ಮದೊಂದಿಗೆ ಬಂದದ್ದು ಮರಣದೊಂದಿಗೇ ಹೋಗ

ಬೇಕು. ನನಗೆ ಹಿರಿಯ ಬಂಧು ನೀನು. ಕೌರವನು ಪರಮ ದ್ರೋಹಿ! ಅದಕ್ಕೆ ತಕ್ಕ ಪ್ರತೀಕಾರವಿಷ್ಟೇ.

ಬಲರಾಮ— ಯಮುನಂದನ ಈ ಉದ್ಧಟನಿಗೆ ತಕ್ಕ ಶಾಸನ ಗೊಳಿಸದಿದ್ದರೆ ಮಹಾಪರಾಧವಾಗುವದು.

ಕೌರವ—(ಬಿದ್ದಲ್ಲಿಯೇ ಆವೇಶಗೊಂಡು) ಈ ಉದ್ಧಟತನಕ್ಕೆ ನಾನು ವಿಧಿಸಿದ ಅರಣ್ಯವಾಸಾದಿ ಕಠಿಣ ಶಿಕ್ಷೆಗಳೆಲ್ಲವೂ ಅತ್ಯಲ್ಪವಾದವೆಂದು ನನಗೆ ಈಗ ಪಶ್ಚಾತ್ತಾಪ. ಪಾಂಡವರ ಅನ್ಯಾಯ ದರ್ಶನವು ಈಗಲಾದರೂ ನಿನಗಾಯಿತಲ್ಲವೇ ! ಈಗ ನಾನು ಧನ್ಯನು.

ಧರ್ಮಜ— (ಲಜ್ಜೆಯಿಂದ ತಲೆ ತಗ್ಗಿಸಿ) ಭೀಮಾ! ಇನ್ನು ಸಹಿಸ ಲಾರೆ ಕೌರವನಲ್ಲಿ ಕ್ಷಮೆಯಾಚಿಸಿ ಈ ಮಹಾಪಮಾನದಿಂದ ನಮ್ಮನ್ನು ದೂರಮಾಡು.

ಭೀಮ— ಅಣ್ಣಾ! ಈ ಕುರಿತು ಕೌರವ ನಿರಲಿ ನಿನ್ನಲ್ಲಿಯೂ ಕ್ಷಮೆ ಕೇಳಲಾರೆ. ಇದರ ಹೊರತು ಮತ್ತಾವ ಕಠೋರ ಆಜ್ಞೆಯಿರಲಿ ಶಿಕ್ಷೆಯಿ ರಲಿ ಸಂತೋಷದಿಂದ ಪಾಲಿಸುವೆ. ಅನೀತಿಯ ಅಂಶವೂ ಇಲ್ಲದೆ ಅದರ-ಲ್ಲಿಯೂ ಪರಮ ವೈರಿಯಲ್ಲಿ ಕ್ಷಮೆಯೆಂದರೆ ಎಷ್ಟು ಅಗೌರವ ಎಂಥ ಅವ್ಯವಹಾರ ವೆಂಬುದರ ಕುರಿತು ಸೇನಾಪತಿ ಮುಖ್ಯರನ್ನೆಲ್ಲ ವಿಚಾರಿಸು. ಎಲ್ಲರ ನಿರ್ಣಯಕ್ಕೆ ನಾನು ಸದಾಸಿದ್ಧನು.

ಧರ್ಮಜ— ನೀತಿವಿದರೇ ! ಸೇನಾಪತಿ ಮುಖ್ಯರೇ! ಈ ವಿಷ ಯದಲ್ಲಿ ನಿಮ್ಮ ಅಭಿಪ್ರಾಯವನ್ನು ಶ್ರೇಷ್ಠವಾಗಿ ಹೇಳಿರಿ ನನ್ನ ಹೃದಯ ದಲ್ಲಿ ಸಮಾಧಾನವು ಮೂಡುವಂತಾಗಲಿ.

ದೃಷ್ಟದ್ಯುಮ್ನ— ಮಹಾಪರಾಧಿ ಕೌರವನು ಅನ್ಯನಾಗಿದ್ದರೆ ಇನ್ನೂ ದೊಡ್ಡ ಪ್ರಾಯಶ್ಚಿತ್ತವಾಗಬೇಕಿತ್ತು. ಸಮೀಪದ ಹಿರಿಯ ಬಂ ಧುವೆಂದು ಇಷ್ಟೇ ಶಿಕ್ಷೆಯಾದದ್ದು ಯಥಾರ್ಥವಾಯಿತು.

ಸಾತ್ಯಕಿ — ಪರಮ ಪತಿವ್ರತೆಯ ಮಾನಭಂಗಿಸುವ ಕಾಮುಕ ವಿಚಾರದ ಕೌರವನ ತಲೆಯನ್ನು ಸಹಸ್ರಹೋಳು ಮಾಡಬೇಕಿತ್ತು ಸಹ ನೆಯಿಂದ ಭೀಮನು ಇಷ್ಟೇ ನಡಿಸಿದ್ದು ಕೌರವನ ಪುಣ್ಯ. ಹೊರತು ಅನ್ಯಾಯದ ಒಡೆತನವಲ್ಲ

ನಕುಲ— ಕಾಲಕ್ಕೆ ತಕ್ಕಂತೆ ನೀತಿಯಲ್ಲೂ ಬದಲಾವಣೆಯಿದೆ ಅನ್ಯಾಯವನ್ನು ನೀತಿಯಿಂದಲೇ ಎದುರಿಸುವದು ಎಲ್ಲ ಕಾಲದಲ್ಲೂ ಅಸಾಧ್ಯ. ಮುಳ್ಳಿನಿಂದ ಮುಳ್ಳನ್ನು ತೆಗೆದಂತೆ ಅನೀತಿಯನ್ನೂ ಅನೀತಿಯಿಂದಲೇ ಕೊಲ್ಲುವದು ಇಂದಿನ ಕಲಿಕಾಲದ ನೀತಿ. ಈ ದೃಷ್ಟಿಯಿಂದ ಭೀಮನು ಪ್ರತಿಜ್ಞೆಯಿಲ್ಲದೆ ಈ ಕೃತ್ಯ ನಡೆಸಿದ್ದರೂ ಅನ್ಯಾಯವಾಗುತ್ತಿದ್ದಿಲ್ಲ ಇದಕ್ಕೆ ಭಾರತ ಯುದ್ಧ ಹಲವು ಘಟನೆಗಳೇ ಸಾಕ್ಷಿಯಾಗಿವೆ

ಸಹದೇವ— ಏಕವಸ್ತ್ರಳಾದ-ರಜಸ್ವಲೆಯಾದ ದ್ರೌಪತಿಯನ್ನು ತುಂಬಿದ ಸಭೆಯಲ್ಲಿ ನಗ್ನಗೊಳಿಸುವ-ಕೇವಲ ಕಾಮಾಂಧ ವಿಚಾರದ ಕೌರವನ ತಲೆಯನ್ನು ಭೀಮನು ತುಳಿದದ್ದು ಕ್ಷತ್ರಿಯೋಚಿತವಾಗಿದೆ.

ಅರ್ಜುನ— ಪ್ರಬಲವಾದ ಅನ್ಯಾಯವನ್ನು ಯುಕ್ತಿ ಪ್ರಯುಕ್ತಿಗಳಿಂದ ವಿಧ್ವಂಸ ಮಾಡುವದು. ಕರ್ತವ್ಯನೀತಿ ಅದು ಲೋಕಕ್ಕೆ ಕ್ಷೇಮಕರ ಆದರೂ ಭೀಮನ ಕೃತ್ಯವು ಯುಕ್ತಿಮೋಸಗಳ ಮಿಶ್ರಣವಿಲ್ಲದೆ ನಿಷ್ಕಲಂಕವಾಗಿದೆ. ಕಣ್ಣೆದುರು ಪತ್ನಿಯ ಮಾನಭಂಗವೆಂದರೆ ಯಾವ ಭಾರತೀಯನಿಗೂ ಸಹಿಸಲು ಶಕ್ಯವಿಲ್ಲ. ದುರ್ವಿಚಾರೀ ಕೌರವನ ತಲೆಯನ್ನು ಎಡಗಾಲಿನಿಂದ ತುಳಿದು ಹಾಕುವೆನೆಂಬ ಭೀಮನ ಕೊನೆಯ ಪ್ರತಿಜ್ಞೆ ಪೂರ್ತಿಯಾಯಿತು. ಅದರಲ್ಲಿ ಅನೀತೀಯೆನು.

ಬಲರಾಮ—ಏನನ್ನಾದರೂ ಹೇಳಿ. ನೀತಿಯ ಹೆಸರು ಕೆಡಿಸಬೇಡಿರಿ. ನಿಮ್ಮ ಅನ್ಯಾಯ ಪ್ರದರ್ಶವನ್ನು ಇನ್ನು ನೋಡಲಾರೆ ಸಾಕು ಮಾಡಿರಿ

ಭೀಮ— ರೌಹಿಣೇಯ ನಿನ್ನಂಥವನೂ ಪಕ್ಷಪಾತದ ಮರೆಯಲ್ಲಿ ಏನನ್ನಾದರೂ ಗ್ರಹಿಸುವದೆಂದರೆ ಇದಕ್ಕೂ ಹೆಚ್ಚಿನ ಅನ್ಯಾಯವೆಲ್ಲಿ ನಿನ್ನೆದುರಿನಲ್ಲಿ ನಿನ್ನ ಪತ್ನಿಯ ಮಾನಭಂಗ ಮಾಡಿದ್ದರೆ ಅಂಥ ವೈರಿಯನ್ನು ಮರುಕ್ಷಣದಲ್ಲಿ ಎಷ್ಟೊ ಘೋರವಾಗಿ ಹಿಂಸಿಸುತ್ತಿದ್ದೆ. ಹೇಳು ನಾವು ಇಷ್ಟು ತಾಳ್ಮೆಯಿಂದ ವಿಲಂಬವಾಗಿ ಸೇಡು ತೀರಿಸಿದ್ದು ಅನ್ಯಾಯವಲ್ಲವೇ? ಬಲದೇವ! ತಿಳಿದಂತಾಯಿತು ನಿನ್ನ ಪಕ್ಷಪಾತವು ಜಗತ್ತಿಗೇ ಸ್ಪಷ್ಟವಾಯಿತು.

ಬಲರಾಮ—ಸಾಕು ಭೀಮಾ! ಕೌರವನ ಒಂದು ಕೃತ್ಯಕ್ಕಾಗಿ ನಿಮ್ಮ ಅನ್ಯಾಯ ಪರಂಪರೆ. ನಿನ್ನ ಗೊಡ್ಡು ನೀತಿಯನ್ನು ಸಾಕು ಮಾಡು. ನೀವು ನಿಜವಾದ ಶೂರರಾಗಿದ್ದರೆ ಕೌರವನಿಂದ ಅದೊಂದು ಕೃತ್ಯವೂ ಘಟಿಸುತ್ತಿದ್ದಿಲ್ಲ. ನಿಮ್ಮ ಹೇಡಿತನದ ಪರಿಣಾಮವನ್ನು ನೀವೇ ಕಂಡಂತಾಯಿತು

ಭೀಮ—ಬಲದೇವ! ನಿನ್ನ ನೀತಿಸರಣಿಯನ್ನು ಕೇಳಲು ನಾಚಿಕೆ ಯೆನಿಸುತ್ತದೆ. ಹೇಡಿಯ ಮೇಲೂ ಪರಾಕ್ರಮ ತೋರಿಸುವದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗವು ಇವೆಲ್ಲ ಶೂರನ ನೀತಿ ಅಲ್ಲವೆ! ಕೌರವನ ದುಷ್ಕೃತ್ಯವು ಒಂದಲ್ಲ ಅಸಂಖ್ಯವಾಗಿದೆ. ಅರಣ್ಯ-ಅಗ್ನಿ-ವಿಷ ಮುಂತಾದುವುಗಳೆಲ್ಲ ಅಮಾನುಷವಾಗಿವೆ ಇವು ಗಳಿಂದ ನಿನ್ನಂಥ ಬಲಾಢ್ಯನೂ ಬದುಕಲಾರನು. ಕೇವಲ ಸಹ್ಯ-ಸಹನೆ--ಶೌರ್ಯಗಳಿಂದ ಜೀವಂತ ಉಳಿದೆವು. ವಿಚಾರಿಸು ರೋಹಿಣೇಯ! ಕೌರವನ ಅನ್ಯಾಯದ ಪರಮಾವಧಿಯನ್ನೂ ಹಿಂದಿನ ನೀತಿ ಯನ್ನನುಸರಿಸಿ ಸಹಿಸಿದೆವು. ಇದರಿಂದ ಪರಿಣಾಮದಲ್ಲಿ ಜನ್ಮಹಕ್ಕಿನ ಸ್ವಾತಂತ್ರ್ಯ ಸ್ವರಾಜ್ಯವಿರಲಿ. ಜೀವ ಹಿಡಿದುಕೊಳ್ಳಲು ಸಾಕೆನಿಸಿತು ಅಂದೇ ಪ್ರತಿಯಾಗಿ ಚೈತ್ರಯಾತ್ರೆಯಲ್ಲಾಗಲಿ— ಉತ್ತರ ಗೋಗ್ರಹಣ ದಲ್ಲಾಗಲಿ—ದ್ಯೂತದ ಕೊನೆಯ ಮಾನಭಂಗದಲ್ಲಾಗಲಿ ಕೌರವರನ್ನು ಕೊಲೆಮಾಡಿದ್ದರೆ ಕ್ಷತ್ರಿಯಕುಲದ ಕಂಠಸೂತ್ರವು ಕುರುಕ್ಷೇತ್ರದ ರಕ್ತ ಪ್ರವಾಹದಲ್ಲಿ ತೇಲಿಹೋಗುತ್ತಿತ್ತೆ! ಭರತ ಕುಲದ ಕ್ಷಾತ್ರ ವಂಶವು ನಿರ್ಮೂಲವಾಗಿ ತೊಳೆದು ಸಾಮ್ರಾಜ್ಯವು ನಿಸ್ತೇಜವಾಗುತ್ತಿತ್ತೇ! ನೋಡು ಹಿಂದಿನ ನೀತಿಯನ್ನನುಸರಿಸಿ ಎಂಥ ಘೋರ ಕೃತ್ಯವನ್ನು ಕಾಣುತ್ತಿರುವೆವು. ಮೇರೆ ಮೀರಿದ! ಕೌರವನ ಅನೀತಿಯನ್ನು ಸಾಮಾನ್ಯ ರೀತಿಯಿಂದೆದುರಿಸಲು ಶಕ್ಯವಿಲ್ಲದಾಗ ಕ್ಷತ್ರಿಯೋಚಿತ ಸಾಹಸ ಪ್ರತಿಜ್ಞೆಗಳಿಂದೆದುರಿಸಿದೆವು. ಇದರಲ್ಲಿ ನಿನ್ನಂಥ ಪಕ್ಷಪಾತಿ ಗಳಿಗೆ ಚಂದ್ರಕಲೆಯಂತೆ ಅನ್ಯಾಯ ಕಾಣುವದು ಸಹಜ. ಹೊರತು ನೀತಿಜ್ಞರಾರೂ ಒಪ್ಪಲಾರರು.

ಕೃಷ್ಣ—ಅಣ್ಣಾ! ಇದರಲ್ಲಿ ಭೀಮನ ತಪ್ಪಿಲ್ಲ. ಧರ್ಮನಂದನ! ಅಪಮಾನದ ಲೇಶವೂ ಇಲ್ಲ. ವೀರೋಚಿತ ಸಂದರ್ಭದಲ್ಲಿ ಇಂಥ

ಘಟನೆಗಳು ಸ್ವಾಭಾವಿಕ ಈಗ ಸಾಯಂಕಾಲ ಸಮೀಪಿಸಿತು. ಕೌರವನ ಶ್ವಾಸಗತಿಯು ಊರ್ಧ್ವಮುಖವಾಗಿದೆ. ಮುಂದಿನ ವಿಚಾರ ನಡೆಯುಲಿ

ಧರ್ಮಜ-(ದುಃಖದಿಂದ ದುರ್ಯೋಧನನನ್ನು ಸಮೀಪಿಸಿ) ಧನ್ಯ! ದುರ್ಯೋಧನ. ನೀನೇ ಪರಮ ಧನ್ಯನು ಅನಂತ ಸುಖದ ಸ್ವರ್ಗ ಸಾಮ್ರಾಜ್ಯವನ್ನು ಸಮಸ್ತ ಬಾಂಧವರೊಡನೆ ಆಳಲು ಹೊರಟಿರುವೆ. ಎಲ್ಲೆಲ್ಲೂ ಶೋಕಪೂರಿತವಾದ ಜನಶೂನ್ಯವಾದ ಹಸ್ತಿನಾಗರಿಯ ಸಿಂಹಾಸನವನ್ನು ಈ ದುರ್ಭಾಗ್ಯರಿಗೆಂದು ತ್ಯಜಿಸಿ ಹೊರಟಿರುವೆ. ನಿನ್ನ ಮಾರ್ಗವು ಸುಖಕರವಾಗಲಿ.

ದುರ್ಯೋಧನ-(ತಡವರಿಸುತ್ತ) ಧರ್ಮಜ. ನೀನು....ಅಜಾತಶತ್ರು ....ಪರಮಾತ್ಮನ ಅನುಗ್ರಹವುಳ್ಳ ಭಾಗ್ಯಶಾಲಿ. ನನ್ನೆಲ್ಲ ದುಷ್ಕೃತ್ಯಗಳನ್ನು ಕ್ಷಮಿಸು....ನನ್ನ ಉತ್ತರ ಕ್ರಿ....ಯೆ....ಯು. ಮಾತ್ರ ನಿನ್ನ ಪ್ರಶಾಂತ ಹ....ಸ್ತದಿಂದಾ....ಗ....ಲಿ.... ಕಷ್ಣಾ...ಇದೋ.... ಕೊನೆಯ... ನಮಸ್ಕಾರ (ಎಲ್ಲರ ಕಣ್ಣಿನಿಂದಲೂ ದುಃಖಾಶ್ರು ಬೀಳುವದು.)

ಕೃಷ್ಣ—ಕುರು ಕುಲೇಂದ್ರ! ನಿನ್ನ ಉತ್ಕಟ ಅಭಿಮಾನ ಕ್ಷತ್ರಿಯೋಚಿತ ದರ್ಪ ಪರಾಕರ್ಷಣ ಶಕ್ತಿಗಳು ಜಗತ್ತಿಗೆ ಮಾದರಿಯಾಗಿವೆ. ನಿನ್ನಾತ್ಮವು ಚಿರಶಾಂತಿ ಧಾಮದಲ್ಲಿ ಲೀನವಾಗಲಿ.

ದುರ್ಯೋಧನ—ನನ್ನ ಅವಸಾನದೊಂದಿಗೆ ನಿನ್ನ ಸಹಾಯದಿಂದ ಧರ್ಮನ....ಸಾಮ್ರಾಜ್ಯ ಉದಯಿಸುವದು ...ಇದನ್ನು....ನಾನು ಸ್ವರ್ಗದಲ್ಲಿ ನಿಂತು ನೋಡಿ ಸಂತೋಷಿಸುವೆ. ನನ್ನ ಯಾತನೆ....ನೋಡುತ್ತ ....ನಿಲ್ಲಬೇಡಿ....ರಿ. ತೆರಳಿ...ರಿ.... ಬೇಗ.... ಸಾಯಂಕಾಲವಾಯಿತು. (ತೆರಳುವರು)

ಸಾತ್ಯಕಿ—ದರ್ಪ ಸಾಮ್ರಾಜ್ಯವು ಅಸ್ತವಾಯಿತು.

ದೃಷ್ಟದ್ಯುಮ್ನ—ಧರ್ಮ ಸಾಮ್ರಾಜ್ಯವು ಉದಯಿಸುವದು.

ಪರದೆಯೊಳಗೆ ಸೈನಿಕರು—ಪಾಂಡು ಪುತ್ರರ ಐಕ್ಯ-ಪ್ರೇಮ-ಸಾಹಸ-ಧೈರ್ಯ ಆದರ್ಶ ರಮಣಿ ಪಾಂಚಾಲಿಯ ವೀರಪ್ರಚೋದನೆ ಮುಂತಾದುವುಗಳು ಸ್ವತಂತ್ರ ಸಾಮ್ರಾಜ್ಯವನ್ನು ನಿರ್ಮಿಸಿದವು.

ಸ್ವಾತಂತ್ರ್ಯ ಪ್ರಿಯ ಭಾರತೀಯರಿಗೆ ಇದು ಮಾದರಿಯ ಸುವರ್ಣ ಮುದ್ರೆಯಾಗಿದೆ. ಪಾಂಡು ನಂದನ ಮಹಾರಾಜ್ಕೀ ಜೈ ಪಾಂಡುನಂದನ ಮಹಾರಾಜಕೀ ಜೈ, ಎಂದು ಜಯಘೋಷವಾಗುವದು. ಪಾಂಡು ಶಿಬಿರದಲ್ಲಿ ಜಯದ ಕೋಲಾಹಲ, ಪಾಂಚಾಲಿ ಪಾಂಡುವೀರರನ್ನು ಸ್ವಾಗತಿಸಿ-ನನ್ನ ಕೋರಿಕೆಯ ಪುಷ್ಪಗಳೆಲ್ಲವು ಅರಳಿ ಘಮಘಮಿಸುತ್ತಿವೆ ಹದಿನೇಳು ದಿನಗಳಿಂದ ರಚಿಸುತ್ತಿರುವ ಈ ವಿಜಯ ಮಾಲಿಕೆಯು ಇಂದು ಪೂರ್ತಿಯಾಗಿ ಪಾಂಡವರ ಕಂಠದಲ್ಲಿ ವೀರಕಾಂತಿಯಿಂದ ಬೆಳಗುವಂತಾಯಿತು. (ಎಂದು ವಿಜಯ ಮಾಲೆಯನ್ನು ಪಾಂಡವರ ಕೊರಳಿಗೆ ಹಾಕುವಳು. ಶ್ರೀ ಕೃಷ್ಣನಿಗೆ ವಂದಿಸಿ) ಅಣ್ಣಾ, ಇದೆಲ್ಲ ನಿನ್ನ ದಿವ್ಯಾನುಗ್ರಹದ ಪ್ರಭಾವ. ನಿನ್ನ ಕೃಪಾಕಟಾಕ್ಷದಿಂಡ ಭಾರತದ ಮಣಿಯ ಅನುಗಾಲದ ಕನಸು ನನಸಿನ ಸಾಮ್ರಾಜ್ಯವಾಯಿತು. ಅಣ್ಣಾ ಇಂದು ಪಾಂಚಾಲಿ ಧನ್ಯಳು (ಎಂದು ಹಾಡುತ್ತಾ ವೀರರಿಗೆ ಆರತಿ ಮಾಡುವಳು)

ಕೃಷ್ಣ—ಪಾಂಚಾಲೀ! ನನ್ನದೇನಿದೆ, ಎಲ್ಲವೂ ನಿನ್ನ ಪತಿಗಳ ಸಾಹಸ-ನಿನ್ನ ಅಣ್ಣ ಮುಂತಾದ ವೀರ ಬಾಂಧವರ ಮುತ್ಸದ್ದಿತನ—ವೀರಾಂಗನೆಯಾದ ನಿನ್ನ ಪಾತಿವ್ರತ್ಯದ ಪ್ರಭಾವ—ವೀರಪ್ರಚೋದನೆ-ಮುಂತಾದವುಗಳಿಂದ ಅಜೇಯವೆನಿಸಿದ ಕುರುಸಮೂಹವು ನಿರ್ಮೂಲವಾಯಿತು ಅಭೂತಪೂರ್ವ ಸ್ವತಂತ್ರ ಸ್ವರಾಜ್ಯವು ಕರಗತವಾಯಿತು. ಕರ್ತವ್ಯವಿದ್ದರೆ ಮಾತ್ರ ದೇವಾನುಗ್ರಹ ನಿಷ್ಪೌರುಷನಲ್ಲಿ ದೇವಾನುಗ್ರಹವೇನೂ ಮಾಡಲಾರದು. ಭಗಿನೀ ನಿನ್ನ ಆದರ್ಶ ರೀತಿಯು ಭಾರತೀಯ ರಮಣಿಯರಿಗೆ ಚಿರಕಾಲವೂ ಮಾರ್ಗದರ್ಶಕವಾಗಲಿ-ನೀನು ವಿಶ್ರಮಿಸು.

ಸಾತ್ಯಕಿ—ಕೃಷ್ಣಾ ಕುರುಪಾಳಯವನ್ನು ನಾಳೆ ಶೋಧಿಸಿದರಾಯಿತಲ್ಲವೇ! ವೈರಿಗಳ ಭೀತಿಯು ಇನ್ನಿರುವದು ಅಶಕ್ಯ

ಕೃಷ್ಣ—ಛೇ ಹಾಗೆ ತಿಳಿಯುವದು ಎಚ್ಚರಗೇಡಿತನ. ಯುದ್ಧ ಮುಗಿದರೂ ಅದರ ನಂಜು ಇಳಿದಿಲ್ಲ. ಇಂದೇ ವೈರಿ ಪಾಳಯವನ್ನು ಶೋಧಿಸಬೇಕು. ನಾನು ಅರ್ಜುನನೊಂದಿಗೆ ಈಗಲೇ ತೆರಳುವೆನು.

ನೀನು ಉಳಿದ ಪಾಂಡವರೊಡನೆ ಕೊಂಚ ವಿಶ್ರಮಿಸಿ ಬಾ. ಸೇನಾಪತಿ! ಶಿಬಿರ ರಕ್ಷಣೆಯು ಜಾಗ್ರತೆ ನಿನ್ನದು ವಿಜಯೋನ್ಮಾದದಲ್ಲಿ ವೈಮರೆ ತಿರಲಾಗದೆಂದು ಮತ್ತೊಮ್ಮೆ ತಿಳಿಸುವೆ ಅರ್ಜುನಾ! ಏಳು ಹೋಗೋಣ (ಎಂದು ರಥವೇರಿ ಕೃಷ್ಣಾರ್ಜುನರು ದೀವಟಿಗೆಯ ಪ್ರಕಾಶದಲ್ಲಿ ತೆರಳುವರು)

ಅರ್ಜುನ – ಕೃಷ್ಣಾ! ಕುರುಕ್ಷೇತ್ರವು ಎಷ್ಟು ಭೀಕರವಾಗಿದೆ. ಈ ಅಂಧತಮಸ್ಸಿನಲ್ಲಿ ಈ ಘೋರದೃಶ್ಯವನ್ನು ನೋಡಿ ಎದೆಗೆಡ ದವನಾರು!

ಕೃಷ್ಣ – ಅರ್ಜುನಾ! ಇದೋ ಈ ಪಾರ್ಶ್ವವನ್ನು ನೋಡು. ಗೋಡೆ ಹಾಕಿದಂತೆ ಹೆಣಗಳ ರಾಶಿಯು ಗೋಚರಿಸುತ್ತಿದೆ. ಅತ್ತ ನಿರೀ ಕ್ಷಿಸು ನದೀ ಪ್ರವಾಹವು ನಿದಾನವಾಗಿ- ಪ್ರಶಾಂತವಾಗಿ ಸಾಗುತ್ತಿದೆ. ನಾವೂ ಆ ಕಡೆಗೇ ರಥವನ್ನು ನಡೆಸೋಣ.

ಅರ್ಜುನ – ಯುದ್ಧದ ಬೇಗೆಯಲ್ಲಿ ಬೆಂಡಾದ ಮನಸ್ಸಿಗೆ ನದೀ ವಟಾರದಂಥ ಪ್ರಶಾಂತ ಸ್ಥಳವು ಅವಶ್ಯವಿದೆ. ಪಾದ ಪ್ರಕ್ಷಾಲನದಿಂದ ಕೊಂಚಕಾಲ ವಿಶ್ರಮಿಸೋಣ.

ಕೃಷ್ಣ – ಅರ್ಜುನ! ನದೀ ಪ್ರವಾಹವು ಸಮೀಪಿಸುತ್ತಿದೆ. ಸಂಧ್ಯಾ ವಿಧಿಯನ್ನು ಪೂರೈಸೋಣ. ರಥವನ್ನು ಜಾಗ್ರತೆಯಾಗಿ ಇಳಿದು ಬಾ.

ಅರ್ಜುನ – ಅಷ್ಟೇಕೆ ಅವಸರ. ಬಾಣ-ಬತ್ತಳಿಕೆ- ಕವಚಗಳನ್ನೆಲ್ಲ ರಥದ ಮೇಲೆ ತೆಗೆದಿರಿಸಿ ಬರುತ್ತೇನೆ, ಸಂಧ್ಯಾವಿಧಿಗೆ ಇವುಗಳೇಕೆ

ಕೃಷ್ಣ – ಕ್ಷಣವೂ ವಿಲಂಬಿಸಬೇಡ. ಅವೆಲ್ಲವೂ ಹಾಗೆಯೆ ಇರಲಿ. ತೀವ್ರವಾಗಿ ಇಳಿದು ಬಾ.

ಅರ್ಜುನ – ಅಷ್ಟೇಕೆ ಗಾಬರಿ. ಕೊಂಚ ತಾಳು ಕವಚವನ್ನು ಅರ್ಧ ಬಿಚ್ಚಿರುವೆ.

ಕೃಷ್ಣ – ಹಾಗೆಯೇ ಬಾ. ರಥದ ಮೇಲೆ ಏನೂ ಇರಿಸಬೇಡ (ಎಂದು ಅರ್ಜುನನ ಕೈಹಿಡಿದು ಬಗ್ಗುವನು. ರಥವು ಧಗಧಗನೆ ಉರಿಯ ಹತ್ತುವುದು)

ಅರ್ಜುನ – ಇದೇನು ಕೃಷ್ಣ! ಮಣಿರಥವು ಧಗಧಗಿಸುತ್ತಿರುವದು. ಬಾಣಬತ್ತಳಿಕೆಗಳೂ ಭಸ್ಮವಾದವು. ಇದೆಂಥ ವಿಚಿತ್ರ.

ಕೃಷ್ಣ—ನೀನು ರಥದಿಂದ ಇಳಿಯಲು ತಡಮಾಡಿದೆ. ಎಂಥ ಪ್ರಮಾದ ಸಂಭವಿಸುತ್ತಿತ್ತು ನೋಡಿದೆಯಾ! ಭಾರತ ಯುದ್ಧದಲ್ಲಿ ಭೀಷ್ಮ ದ್ರೋಣಾದಿ ಅಸ್ತ್ರೋಪಾಸಕರ ಮಹಾ ಮಂತ್ರಾಸ್ತ್ರಗಳಿಂದ ರಕ್ಷಿಸುತ್ತಿದ್ದೆನು ಈಗ ಯುದ್ಧ ಮುಗಿಯಿತು ಅದಕ್ಕೆ ಅವಧಿಯಿಲ್ಲ.

ಅರ್ಜುನ—ಎಂಥ ಅಮೂಲ್ಯ ರಥವು ಇಲ್ಲದಾಯಿತು. ಠೇಂಕಾರ ಮಾತ್ರದಿಂದ ವೈರಿಗಳ ಎದೆ ನಡುಗಿಸುವ ಗಾಂಡೀವಿ ಧನುಸ್ಸೂ ದಗ್ಧ ವಾಯಿತು ಕೃಷ್ಣಾ! ಅರ್ಜುನನ ಅರ್ಧ ಬಲವೇ ಕುಸಿದು ಹೋಯಿತು. (ಎಂದು ಚಿಂತಿಸುವನು. ಉರಿಯುತ್ತಿರುವ ರಥದ ಮಧ್ಯದಲ್ಲಿ ಅಗ್ನಿ ದೇವನು ಪ್ರಸನ್ನನಾಗಿ) ಧನಂಜಯ ಚಿಂತಿಸಬೇಡ. ಈ ಮೊದಲು ಮಹೇಂದ್ರನ ಉಪವನವಾದ ಖಾಂಡವವನ ದಹನದಿಂದ ನನ್ನಿಚ್ಛೆಯನ್ನು ನೇರವೇರಿಸಿದಾಗ ನಿನ್ನ ಶೌರ್ಯಸಾಹಸಗಳಿಗೆ ಮೆಚ್ಚಿ ಭಾರತ ಯುದ್ಧ ಕ್ಕೋಸ್ಕರ ಅಜೇಯವಾದ ಮಣಿರಥವನ್ನು--ದುರ್ಭೇದ್ಯವಾದ ಗಾಂಢೀ ವವನ್ನು ಅನುಗ್ರಹಿಸಿದ್ದೆನು. ಭಾರತ ಯುದ್ಧದಲ್ಲಿ ಮಹಾಮಂತ್ರಾಸ್ತ್ರ ಗಳಿಂದ ಇಷ್ಟರೊಳಗೇ ಭಸ್ಮವಾಗುತ್ತಿದ್ದ ಭವ್ಯ ರಥವು ಭಗವಾನ್ ಶ್ರೀ ಕೃಷ್ಣನ ಪಾದಸ್ಪರ್ಶದಿಂದ ಬದುಕಿತು. ಇನ್ನು ಅದರ ಅವಶ್ಯಕತೆ ನಿನಗೆ ಬರಲಾರದು. ಕಾರಣ ಅವಧಿ ಮೀರಿದ ರಥಕ್ಕಾಗಿ ಚಿಂತಿಸ ಬೇಡ (ಅಗ್ನಿದೇವನು ಅದೃಶ್ಯನಾಗುವನು.)

ಅರ್ಜುನ—ಕೃಷ್ಣಾ! ಇನ್ನೇನು ಮಾಡುವದು. ಸಂಧ್ಯಾವಿಧಿಯು ಅಗ್ನಿದೇವನ ದರ್ಶನದಿಂದ ಪೂರ್ತಿಯಾಯಿತು. ಕುರುಶಿಬಿರದೆಡೆಗೆ ಕಾಲುನಡಗೆಯಿಂದಲೇ ಹೋಗಬೇಕಾಯಿತು ಈ ಭೀಕರ ರಣಭೂಮಿ ಯಲ್ಲಿ ಕವಿದ ಕಾರ್ಗತ್ತಲೆಯಲ್ಲಿ ಹೋಗುವದು ಪ್ರಯಾಸವೇ ಆಯಿತು

ಕೃಷ್ಣ—ಅಷ್ಟೇಕೆ ಆತುರ. ಅರ್ಜುನಾ ಅದೋ ದೂರದಲ್ಲಿ ನಾಲ್ಕೈದು ಪ್ರಕಾಶಗಳು ನಮ್ಮೆಡೆಗೇ ಧಾವಿಸುತ್ತಿರುವವು. ಅವು ಬರಲಿ ಕೊಂಚ ವಿಶ್ರಮಿಸೋಣ.

ಅರ್ಜುನ—ಈ ಭಯಾನಕ ಸಮಯದಲ್ಲಿ ಈ ರುದ್ರಭೂಮಿಯಲ್ಲಿ ವಿಶ್ರಾಂತಿಯೇ ಕೃಷ್ಣಾ! ಮೊದಲೇ ಒಂದೊಂದಾಗಿ ಕೈಬಿಡುತ್ತಿವೆ ಇದು ಚೆನ್ನಾದ ವಿಚಾರ. ಏಳು ವಿಶ್ರಮಿಸುವದು ಬೇಡ ಮೆಲ್ಲನೆ ಸಾಗೋಣ.

ಕೃಷ್ಣ—ನಿನಗೆ ಇನ್ನೂ ಅಂಜಿಕೆ ಅಳಿದಿಲ್ಲವೇ! ಆ ದೀಪಗಳು ಬರಲಿ ನಂತರ ಹೋಗೋಣ.

ಅರ್ಜುನ—ನೀನೆಂಥ ಮರುಳ. ಕೃಷ್ಣಾ! ಈ ರಣಭೂಮಿಯಲ್ಲಿ ದೀಪಗಳನ್ನು ತರುವವರಾರು ಇಲ್ಲಿ ಪ್ರಕೃತಿಯೇ ಕೊಳೆತು ನಾರುವ ಅಸಹ್ಯ ದುರ್ಗಂಧ. ನಿಲ್ಲಲು ಸಾಧ್ಯವೇ!

ಕೃಷ್ಣ—ನಿನ್ನ ಮನಸ್ಸು ಇನ್ನೂ ಸ್ಥಿರವಾಗಿಲ್ಲ. ಅರ್ಜುನ! ಯುದ್ಧ ಮುಗಿಸಿದರೂ ಮನೋದೌರ್ಬಲ್ಯದ ನಂಜು ಉಳಿದಿದೆ. ಅದು ಪೂರ್ತಿಯಾಗಿ ನಶಿಸಿಲ್ಲ, ಆ ದೀಪಗಳು ಯಾರದೆಂದು ಊಹಿಸಿದೆ ನೀನು

ಅರ್ಜುನ—ನೋಡಿದರೆ ತಾನಾಗಿಯೇ ಸ್ಪಷ್ಟವಾಗುತ್ತಿದೆ. ಅವುಗಳ ವಕ್ರಗತಿಯು ಯಾರದೆಂದು ಮತ್ತೂ ಸ್ಪಷ್ಟವಾಗಿಸುವದು ನಿನಗೆ ತಿಳಿಯಲಾರದು ಅಲ್ಲವೇ

ಕೃಷ್ಣ—ಹೌದು ನಾನು ಆ ವಿಷಯದಲ್ಲಿ ವಿಚಾರಿಸಿಲ್ಲ ಹೇಳು ಯಾರ ದೀಪಗಳೆಂದು.

ಅರ್ಜುನ—ಇಲ್ಲಿ. ಈ ರುದ್ರಭೂಮಿಯಲ್ಲಿ ಮತ್ತಾರ ದೀಪಗಳು. ರುದ್ರಗಣವು ಭೈರವ ನೃತ್ಯಕ್ಕಾಗಿ ಆಗಮಿಸುವ ದೀಪಗಳು ಹೊರತು ಮನುಷ್ಯ ದೀಪಗಳಲ್ಲವೆಂದು ಅವುಗಳ ವಕ್ರಗತಿಯೇ ಹೇಳುವದು ನೋಡು.

ಕೃಷ್ಣ—ಮಕ್ಕಳ ಅಂಜಿಕೆಯ ಕತೆಯನ್ನು ಎಲ್ಲಿ ಕಲಿತೆ ಚೆನ್ನಾಗಿ ನೋಡು ಅದಾರೆಂಬುದನ್ನು. ಧರ್ಮಜಾದಿಗಳು ಸಾತ್ಯಕಿಯೊಂದಿಗೆ ರಥದಲ್ಲಿ ಕುಳಿತು ಬರುತ್ತಿರುವರು ನೋಡು.

ಅರ್ಜುನ—(ಚೆನ್ನಾಗಿ ನಿರೀಕ್ಷಿಸಿ) ಹೌದು ನಮ್ಮವರ ರಥಗಳು ಕೃಷ್ಣಾ! ಸುಮ್ಮನೆ ಭ್ರಮಿಷ್ಟನಾಗಿ ಅಂಜಿದೆ. ಆದರೆ ವಕ್ರಗತಿಯೇಕೆ.

ಕೃಷ್ಣ—ರಣರಂಗದಲ್ಲಿ ನೇರವಾಗಿ ಬರಲು ನಮಗೆ ಸಾಧ್ಯವಾಗಿದೆಯೇ! ಒಂದೆಡೆ ಗಜಸೈನ್ಯವು ಪರ್ವತಾಕಾರವಾಗಿ ಬಿದ್ದಿದೆ. ಮತ್ತೊಂದೆಡೆ ಭಗ್ನರಥ ಸಮೂಹವು ಮಹೋನ್ನತ ದುರ್ಗದಂತಿದೆ. ಇನ್ನೊಂದೆಡೆ ಅಶ್ವದಲವು ದಿನ್ನೆಗಳ ಶ್ರೇಣಿಯಂತೆ ಸಾಲುಗಟ್ಟಿವೆ.

ತನ್ಮಧ್ಯೆ ಮೃತದೇಹಗಳ ರಾಶಿಯು ಗಿರಿಶೃಂಗಗಳಂತಿವೆ. ಇಂಥ ರಣ ಭೂಮಿಯಲ್ಲಿ ಸಹಜವಾಗಿ ಬರುವದೂ ದುಸ್ಸಾಧ್ಯವಾಗಿದೆ. ನೋಡು ಈಗ ಸಮಿಾಪಿಸಿದರು. ರಣಭೂತಗಳಿಂದು ಮಾತ್ರ ಪಲಾಯನ ಮಾಡಬೇಡ.

ಅರ್ಜುನ—ಹೌದು ಕೃಷ್ಣಾ ಜಾಗ್ರತೆಯಾಗಿ ಸಾತ್ಯಕಿಯ ರಥ ವನ್ನು ಆರೋಹಿಸು. ಮಧ್ಯ ರಾತ್ರಿಗೆ ಸಮಿಾಪಿಸಿತು.

ಧರ್ಮಜ—ಕೃಷ್ಣಾ! ಏಳು ಹೋಗೋಣ ಕುರುಶಿಬರವನ್ನು ಶೋಧಿಸಿ ಆವಷ್ಟು ಬೇಗ ಹಿಂತೆರಳುವಾ.

ಕೃಷ್ಣ—ಪಾಂಡುವೀರರೇ ಇಂದು ಕುರುಶಿಬಿರವನ್ನು ಶೋಧಿಸಲು ಅಲ್ಲಿ ಏನೂ ಉಳಿದಿಲ್ಲ! ಯುಯುತ್ಸುವು ನಮ್ಮಾಜ್ಞೆಯಂತೆ ಸರ್ವಸ್ವ ವನ್ನೂ ಹಸ್ತಿನಾ ನಗರಿಗೆ ಸಾಗಿಸಿರುವನು. ವೈರಿ ಠಾಣೆಯಲ್ಲಿ ನೆಲಸು ವದು ವಿಜಯಿಗಳ ಶಿಷ್ಟಸಂಪ್ರದಾಯ ಕಾರಣ, ಈ ರಾತ್ರಿಯನ್ನು ಕುರುಶಿಬಿರದಲ್ಲಿಯೇ ಕಳೆಯಬೇಕು. ರಥವು ಕುರುಶಿಬಿರಾಭಿಮುಖ ವಾಗಿ ಸಾಗಲಿ.

ಧರ್ಮಜ—ಇದೇನು ದುಃಶಕುನವಾಗುತ್ತಿದೆ. ಕುದುರೆಗಳು ಸಮ ಭೂಮಿಯಲ್ಲೂ ಮುಗ್ಗರಿಸುತ್ತಿವೆ.

ಭೀಮ—ಆಂ! ಭುಜದ ಮೇಲಿನ ಗದೆಯು ಧೊಪ್ಪನೆ ನೆಲಕ್ಕುರು ಳಿತು. ಎಂದೆಂದೂ ಹೀಗೆ ಬಿದ್ದಿರಲಿಲ್ಲ.

ಸಾತ್ಯಕಿ—ಹೌದು, ಮಹಾದುಃಶಕುನ. ನರಿಗಳು ಕಗ್ಗತ್ತಲೆ ಯಲ್ಲಿ ಕೊಂಚವೂ ಭೀತಿಯಿಲ್ಲದೆ ನರರುಂಡಗಳನ್ನು ನಮ್ಮೆಡೆಗೆಸೆಯು ತ್ತಿವೆ.

ನಕುಲ—ಬಾಣಬತ್ತಳಿಕೆಗಳು ಜಾರಿಜಾರಿ ಬೀಳುತ್ತಿವೆ ರಥವು ತೂಗಾಡುತ್ತಿದೆ ಇಂಥ ದುಶ್ಯಕುನವು ಹಿಂದೆಂದೂ ಆಗಿಲ್ಲ.

ಸಹದೇವ—ರಥದ ಕಲಶವು ಧೊಪ್ಪನೆ ಭೂಮಿಗುರುಳಿತು. ಕುದುರೆಗಳ ಕಡಿವಾಣ ಹರಿದವು ಇದೆಂಥ ಅದ್ಭುತ ಸೂಚನೆ.

ಅರ್ಜುನ—ಕೃಷ್ಣಾ—ಇದೇನು ಎಡಭಾಗವು ಅದರುತ್ತಿದೆ. ಹೃದಯ ದಲ್ಲಿ ಒಂದು ಬಗೆಯ ತೀವ್ರ ಕಂಪನವುಂಟಾಗುತ್ತಿದೆ. ಕಂಟಕಗಳು

ರಕ್ತಪ್ರವಾಹದಲ್ಲಿ ಕೊಚ್ಚಿ ಕೊಚ್ಚಿ ತೊಳೆದು ಹೋದರೂ ಇನ್ನೂ ಉಳಿದಿವೆಯೇ! ದೇವಾ! ಪಾಂಡವರ ವಿಧಿಲಿಖಿತದಲ್ಲಿ ಇನ್ನೂ ಎಂಥೆಂಥ ದೃಶ್ಯವಡಗಿದೆ.

ಕೃಷ್ಣ—ಪಾಂಡುವೀರರೇ! ಅಂಜುವ ಕಾರಣವೇಕೆ. ಯುದ್ಧ ಮುಕ್ತಾಯದಿಂದ ಹಗುರಾದ ಮನಸ್ಸು ಇಲ್ಲದ ಕಲ್ಪನೆಮಾಡುವದು. ಮೇಲಾಗಿ ಇಂದು ದಣಿವಾದ ಕಾರಣ ಇಲ್ಲದ ವಿಚಾರ ಮೂಡುವದೂ ಸಹಜ. ನಿಮ್ಮ ಕೂದಲೂ ಕೊಂಕುವಂತಿಲ್ಲ ನಿಶ್ಚಿಂತೆಯಿಂದ ವೈರಿ ಶಿಬಿರದಲ್ಲಿ ಯುದ್ಧದ ದಣಿವು ತಣಿಸಿಕೊಳ್ಳಿರಿ. (ಪರದೆ)

(ದ್ವೈಪಾಯನ ಸರೋವರ ತೀರದ ಕಾಡುಪ್ರದೇಶದಲ್ಲಿ ಕೃಪಾಶ್ವತ್ಥಾಮ ಕೃತವರ್ಮರು ಒಂದು ವೃಕ್ಷದಡಿಯಲ್ಲಿ ಆಲೋಚಿಸುತ್ತಿರುವರು.)

ಅಶ್ವತ್ಥಾಮ-ಮಾವಾ! ಮುಂದೇನು ಮಾಡುವದು. ಹೃದಯದಲ್ಲಿ ಒಂದು ಬಗೆಯ ಕ್ಷೋಭೆಯಾಗುತ್ತದೆ. ಪಾಂಡವರನ್ನು ಕೊಂದ ಹೊರತು ನಮ್ಮ ಸ್ವಾಮಿಗೆ ತೃಪ್ತಿಯಿಲ್ಲ. ನನಗಂತೂ ನಿದ್ದೆಯೂ ಬರಲಾರದು.

ಕೃಪ– ನಾವು ನಾಲ್ಕೇ ಜನರು ಪಾಂಡವರನ್ನು ಸೈನ್ಯ ಸಹಿತವಾಗಿ ಕೊಲ್ಲುವದೆಂದರೆ ಅಶಕ್ಯ. ಸ್ವಪ್ನದ ಮಾತು. ಅಶ್ವತ್ಥಾಮ!

ಕೃತವರ್ಮ—ಮೇಲಾಗಿ ಶ್ರೀ ಕೃಷ್ಣನ ಅಭೇದ್ಯ ರಕ್ಷಣೆಯಲ್ಲಿರುವಾಗ ಪಾಂಡವರನ್ನು ಪ್ರತ್ಯಕ್ಷ ಯಮನೂ ಮುಟ್ಟಲಾರನು. ಗುರುಪುತ್ರ.

ಅಶ್ವತ್ಥಾಮ— ಹಾಗೆಂದಿಗೂ ತಿಳಿಯಬೇಡಿರಿ ನಿಶ್ಚಿತ ವಿಚಾರಕ್ಕೆ ತಕ್ಕ ಫಲವೂ ಯಾವಾಗಲೂ ಸಿದ್ಧವಿದೆ. ಸಾಹಸದಿಂದ ಅಸಾಧ್ಯವೂ ಸಾಧಿಸುವದು. ಉದಾಸ ಭಾವನೆಯಿಂದ ಸಾಧ್ಯವೂ ಅಸಾಧ್ಯವಾಗುವದು. ಅಲ್ಪವಾದ ಏಳು ಅಕ್ಷೌಹಿಣೀ ಸೈನ್ಯವುಳ್ಳ ಪಾಂಡವರ ಸಾಹಸದಿಂದ ಹನ್ನೊಂದು ಅಕ್ಷೌಹಿಣಿಯ ನಮ್ಮ ಪ್ರಬಲ ಸೇನೆಯೂ ನಿರ್ಮೂಲವಾಯಿತು. ಕೌರವೇಂದ್ರನೂ ಜಲಗರ್ಭದಲ್ಲಿ ಇದನ್ನೇ ವಿಚಾರಿಸುತ್ತಿ

ರಬೇಕು ಉಪಾಯಾಂತರಗಳಿಂದಲ್ಲದೆ ಪ್ರತ್ಯಕ್ಷ ಯುದ್ಧದಿಂದ ಕೊಲ್ಲುವದು ಅಸಾಧ್ಯ.

ಕೃಪ—ಅಂಥ ಉಪಾಯವಾದರೂ ನನ್ನ ವಿಚಾರದೃಷ್ಟಿಗೆ ಹೊಳೆಯಲಾರದು. ಕೈಲಾದ ಸಹಾಯಮಾಡಬಲ್ಲೆ. (ಅಷ್ಟಕ್ಕೆ ಮರದ ಮೇಲೆ ಮಹಾ ಶಬ್ದವಾಗುವದು.)

ಕೃತವರ್ಮ— ಇದೇನು ವೃಕ್ಷದಮೇಲೆ ಮಹಾ ಶಬ್ದವಾಗುತ್ತಿದೆ.

ಅಶ್ವತ್ಥಾಮ– ಯಾವ ಶಬ್ದವಾದರೂ ನಮಗೇನು ಪ್ರಯೋಜನ. ನನಗಂತೂ ಪಾಂಡವರನ್ನು ಕೊಲ್ಲುವ ವಿಚಾರದ ಹೊರತು ಏನೂ ಸೂಚಿಸಲಾರದು.

ಕೃತವರ್ಮ—ಮನಸ್ಸಿಗೆ ಕೊಂಚ ವಿಶ್ರಾಂತಿಯನ್ನು ಕೊಡು ಅಂದರೆ ಮುಂದಿನ ವಿಚಾರ ಬಗೆಹರಿದೀತು.

ಅಶ್ವತ್ಥಾಮ—ವಿಶ್ರಾಂತಿ ವಿಶ್ರಾಂತಿ! ಎಂದಿಗೂ ಅಸಾಧ್ಯ. ಗುರುಪುತ್ರನ ಸುಪ್ತ ಪ್ರತಿಜ್ಞೆಯು ಪೂರ್ತಿಯಾಗದ ಹೊರತು ವಿಶ್ರಾಂತಿಯೆಲ್ಲಿ.

ಕೃಪ—ಅದಾವ ಪ್ರತಿಜ್ಞೆ. ಪಾಂಡವರಿಗಾಗಿ ನೀನು ಪ್ರತಿಜ್ಞೆ ಮಾಡಿರುವೆಯಾ.

ಅಶ್ವ—ಅಲ್ಲ ಪಾಂಡವರ ಸೇನಾಪತಿ ದುಷ್ಟ ಧೃಷ್ಟದ್ಯುಮ್ನನ ಕುರಿತು ಪ್ರತಿಜ್ಞೆ. ಆ ಪಿತೃ ಹಂತಕನ ಶರೀರವನ್ನು ಸಹಸ್ರ ತುಂಡುಗಳನ್ನಾಗಿ ಮಾಡಿದ ಹೊರತು ನಿದ್ರೆಯಿಲ್ಲ. ಈಪ್ರತಿಜ್ಞಾ ಪೂರ್ತಿಯ ಮಹಾ ಹವನದಲ್ಲಿ ಪಾಂಡುನಂದರೂ ಆಹುತಿಯಾಗುವ ಉಪಾಯುವೇ ಕಾಣದಾಗಿದೆ.

ಕೃಪ—(ಮೇಲೆನೋಡಿ) ಇದೇನು ವೃಕ್ಷಾಗ್ರದಿಂದ ಬೀಳುತ್ತಿರುವದೇನು

ಕೃತವರ್ಮ—ಪುನಃ ಮಹಾ ಸಪ್ಪಳವಾಗುವದಲ್ಲ.

ಅಶ್ವತ್ಥಾಮ—(ನಿರೀಕ್ಷಿಸಿ) ಇದೇನು ಕಾಗೆಯ ಮರಿಗಳು ಛಿನ್ನ ಭಿನ್ನವಾಗಿ ಬೀಳುತ್ತಿವೆ. ವೃಕ್ಷಾಗ್ರದಲ್ಲಿ ಸಪ್ಪಳದೊಂದಿಗೆ ಕಾಗೆಗಳ

ಕ್ರಂದನ ಸ್ವರವು ಹೃದಯ ಭೇದಕವಾಗಿದೆ. ಪಕ್ಷಿ ಪ್ರಪಂಚದಲ್ಲಿಯೂ ಇದೆಂಥ ಪ್ರಳಯ ಇದರ ಕಾರಣವೇನು ಮಾವಾ!

ಕೃಪ— ಪಶುಪಕ್ಷಿಗಳ ಪ್ರಪಂಚದಲ್ಲಿಯೂ ವೈರ-ಪ್ರತಿಹಿಂಸೆ ಕ್ರೌರ್ಯಗಳಿಂದ ಮರಣ ತಾಂಡವ ನಡೆಯುತ್ತಿದೆ. ಆದರೆ ಪ್ರಾಣಿ ಶ್ರೇಷ್ಠನಾದ ಮಾನವನನ್ನು ಈ ದಿಶೆಯಲ್ಲಿ ಜೀವಕೋಟಿಯಾವದೂ ಸರಿಗಟ್ಟಲಾರದು. ಇದು ಮಾನವನ ಬುದ್ಧಿಶಕ್ತಿಯ ಪ್ರಭಾವ.

ಅಶ್ವತ್ಥಾಮ—ಹೌದು ಬುದ್ಧಿಬಲದಿಂದಲೇ ಮಾನವನು ಪ್ರಭುತ್ವ ಗಳಿಸಿದ್ದಾನೆ. ಅದರಿಂದ ಪ್ರಬಲ ವೈರಿಯನ್ನೂ ನಾಶಗೊಳಿಸಬಲ್ಲನು. ಆದರೆ...ಅದೇನು ಪುನಃ ಸಪ್ಪಳ. ಕಾಗೆಗಳ ಕ್ರಂದನ ಸ್ವರ.

ಕೃಪ— ಅದೇ ನಾನು ಹೇಳುತ್ತಿರುವುದು ದಿವಾಂಧ ಗೂಗೆಯೊಂದು ಈ ಮಧ್ಯ ರಾತ್ರಿಯ ಅಂಧಕಾರದಲ್ಲಿ ನಿದ್ರಿಸುವ ಕಾಗೆಯ ಗೂಡುಗಳ ಮೇಲೆ ಧಾಳಿಯಿಟ್ಟದೆ. ಮೊಟ್ಟೆ ಮರಿಗಳನ್ನು ತಿಂದು ರೊಚ್ಚಿಗೆದ್ದು ಹಿಸುಕಿ ಹಾಕುತ್ತಿದೆ. ಕಗ್ಗತ್ತಲೆಯಲ್ಲಿ ಕಾಗೆಯ ಸಮೂಹವು ದಿಕ್ಕು ತೋಚದೆ ಕಂಗಾಲಾಗಿದೆ.

ಕೃತವರ್ಮ—ಹಾಗಿದ್ದರೆ ಕಾಗೆಗಳು ಹಗಲಿನಲ್ಲಿ ಗೂಗೆಯ ಗೂಡನ್ನು ಲೂಟಿಮಾಡಿ ಹಿಂಸಿಸಿರಬೇಕು. ರಾತ್ರಿ ದೃಷ್ಟಿಯುಳ್ಳ ಗೂಗೆಯು ಆ ಪ್ರತೀಕಾರವನ್ನು ಈಗ ರೊಚ್ಚಿಗೆದ್ದು ಮಾಡುತ್ತಿದೆ. ಈ ಸಮಯದಲ್ಲಿ ಸಾವಿರಾರು ಕಾಗೆಗಳಿದ್ದೂ ಒಂದು ಗೂಗೆಗೆ ಬಲಿಯಾಗಬೇಕಾಗಿದೆ. ನೋಡು ಗುರುಪುತ್ರ! ದ್ವೇಷದ ಹೊಯ್ದಾಟವು ಪ್ರಾಣಿ ಲೋಕದಲ್ಲೂ ಕೋಲಾಹಲವೆಬ್ಬಿಸಿದೆ.

ಅಶ್ವತ್ಥಾಮ—(ಆಲೋಚಿಸಿ) ಹಾಂ ತಿಳಿಯಿತು. ನನಗೆ ಬೇಕಾದ ಉಪಾಯವನ್ನು ಪ್ರಕೃತಿ ಮಾತೆಯೇ ಉಪದೇಶಿಸಿದಳು. ಏಕಾಗ್ರತೆಯಿಂದ ಸಿದ್ಧಿಯು ಸುಲಭವೆನ್ನುವದು ಇದೀಗ ಸಿದ್ಧಾಂತವಾಯಿತು. ನೋಡಿರಿ. ಮಾವಾ ಪಾಂಡವರ ನಾಶಕ್ಕಾಗಿ– ಸ್ವಾಮಿಯ ತೃಪ್ತಿಗಾಗಿ ನಾವು ಯೋಚಿಸುತ್ತಿರುವಾಗ ಈ ಗೂಗೆಯು ಎಂಥಾ ಉಪಾಯ ಸೂಚಿಸಿತು.

ಕೃಪ—ಅದೇನು ಅಂಥ ಮಹದುಪಾಯವಾವುದು.

ಅಶ್ವತ್ಥಾಮ--ರಾತ್ರಿಯಲ್ಲಿ ಒಬ್ಬನೇ ಸಹಸ್ರಾರು ಮಂದಿಯನ್ನು ಕೊಂದು ಸೇಡಿನ ಕಾರ್ಯ ಪೂರೈಸಿಕೊಳ್ಳುವ ಸುಲಭ ಮಾರ್ಗವನು ಗೂಗೆಯಿಂದ ಕಲಿತಂತಾಯಿತು ಏಳಿರಿ. ಈಗಲೇ ಏಳಿರಿ ಮಾವಾ! ಗೂಗೆಯಂತೆ ಪಾಂಡು ಶಿಬಿರಕ್ಕೆ ಮುತ್ತಿಗೆ ಹಾಕೋಣ. ನನ್ನ ಪ್ರತಿಜ್ಞಾ ಪೂರ್ತಿ-ಸ್ವಾಮಿಕಾರ್ಯ ಸಿದ್ಧಿ. ಸ್ವಹಿತ ಪರಕಾರ್ಯ. ಹೀಗೆ ದ್ವಂದ್ವ ಸಿದ್ಧಿ ಯಾಗುವದು.

ಕೃಪ—ವತ್ಸ ಕಲ್ಪನೆಯಷ್ಟು ಕೃತಿಗೆ ಸುಲಭವಲ್ಲ. ಪಾಂಡವರು ಕಾಗೆಗಳಂತೆ ನಿಷ್ಕ್ರಿಯರಲ್ಲ. ಅವರಿಗೆ ಶ್ರೀಕೃಷ್ಣನ ಅಭೇದ್ಯರಕ್ಷಾಕ ವಚವಿದೆ.

ಅಶ್ವತ್ಥಾಮ—ವಜ್ರ ಕವಚವೇ ಇರಲಿ. ಅದು ಈ ಸಮಯದಲ್ಲಿ ನಿಷ್ಪ್ರಯೋಜನವೇ ಸರಿ. ಏಳಿರಿ ಕೌರವೇಂದ್ರನ ಅಪ್ಪಣೆ ಪಡೆದು ತೆರ ಳೋಣ. ನಾಳಿನ ಪ್ರಭಾತವು ಕೌರವನ ವಿಜಯಗೀತವನ್ನು ಹಾಡು ವಂತೆ ಮಾಡೋಣ! (ಮೆಲ್ಲನೆ ಸಾಗುವರು)

ಕೃತವರ್ಮ—(ಆಲಿಸಿ) ಇದೆಂಥ ಹೃದಯ ಭೇದಕ ಸ್ವರ

ಕೃಪ—ಹೌದು ಪ್ರಾಣೋತ್ಕ್ರಮಣದಿಂದ ನರಳುವ ಸ್ವರ

ಅಶ್ವತ್ಥಾಮ—ಮನುಷ್ಯರದೇ! ಈ ಹೃದಯಭೇದಕ ಸ್ವರದಿಂದ ಜಲಗರ್ಭದಲ್ಲಿರುವ ಕುರುರಾಜನ ವಿಶ್ರಾಂತಿಗೆ ಭಂಗವಲ್ಲವೇ!

ಕೃಪ— ಹೌದು ಮನುಷ್ಯರದು

ಅಶ್ವತ್ಥಾಮ--ಆಂ ಮನುಷ್ಯರದೇ! ಹೌದು ಶ್ವಾಸವು ಊರ್ಧ್ವ ಗತಿಯಿಂದ ಸಾಗುತ್ತಿದೆ. ತನ್ಮಧ್ಯ ಮರ್ಮ ಭೇಧಕವಾದ ನರಳುವಿ ಕೆಯ ಶಬ್ದ. ಯಾರಾಗಿರ ಬಹುದು. ದ್ವೈಪಾಯನ ಸರೋವರವು ಸಮಾಪಿಸಿತು

ಕೃಪ--ಪಾಂಡವರ ಬೇಟೆಗಾರರಾಗಿರಬೇಕು

ಕೃತವರ್ಮ— ಅಥವಾ ಬೇಹುಗಾರರು ಕೌರವನ ಗಧಾಪ್ರಹಾರ ಕ್ಕೀಡಾದರೋ!

ಅಶ್ವತ್ಥಾಮ—ಅಥವಾ ವೈರಿಗಳಾದ ಪಾಂಡುಗಜಗಳು ಕುರು ಸಿಂಹನನ್ನು ಕೆಣಕಿ ಬಿದ್ದವೋ! ಸ್ವರವು ಮತ್ತೂ ಬಲವಾಗುದೆತ್ತಿ.

(ಸವಿಾಪಿಸಿ) ಇದೋ ಇಲ್ಲಿಯೇ ನರಳುತ್ತಿದ್ದಾನೆ. ಮಾವಾ: ಈ ಅಸಹ್ಯ ವೇದನೆಯುನ್ನು ನೋಡಲಾರೆ. ಯಾರಿಂದು ಸ್ಪಷ್ಟವಾಗಿ ಕಾಣುವದೂ ಇಲ್ಲ

ದುರ್ಯೋಧನ—ಅಂ......ಗುರು....ಪು.... ತ್ರ...ಕೈ... ವಿಾರಿ. ಹೋಯಿತು

ಅಶ್ವತ್ಥಾಮ—(ದಿಗ್ಭ್ರಾಂತನಾಗಿ) ಅಂ ಯಾರು ರಾಜೇಂದ್ರ. ಸುಯೋಧನ ನಿನಗೀ ಅವಸ್ಥೆಯೇ! ಇದೇನು ಸ್ವಪ್ನವೇ!

ಕೃಪ - ಸ್ವಪ್ನವಲ್ಲ ಸತ್ಯವಾಗಿದೆ. ಪಾಂಡವರು ಕೌರವನ ತೊಡೆ ಮುರಿದು ಕೆಡವಿ ಹೋಗಿದ್ದಾರೆ

ಕೃತವರ್ಮ—ನಿರ್ದಯ ಪಾಂಡವರು ಏಕಾಂಗಿ ಕೌರವನನ್ನು ಅದೆಷ್ಟು ರೀತಿಯಿಂದ ಹಿಂಸಿಸಿದರೇನೋ?

ಅಶ್ವತ್ಥಾಮ—(ಸಂತಪ್ತನಾಗಿ) ಇದೋ ತೊಡೆಗಳ ಮೇಲೆ ಭೀಮನ ಗದಾಘಾತ. ಪರಮ ದ್ರೋಹಿಗಳಾದ ಪಾಂಡವರು ಯುದ್ಧ ನೀತಿಯನ್ನೂ ವಿಾರಿ ಮೆರೆದಿದ್ದಾರೆ. ವಿಜಯದ ಉಬ್ಬಿನಲ್ಲೀಗ ಮೈಮರೆತು ನಿದ್ರಿಸುತ್ತಿದ್ದಾರೆ ಕುರುರಾಜ! ಆಜ್ಞೆಯಾಗಲಿ ತುಸು ಹೊತ್ತಿನಲ್ಲಿ ಪಾಂಡವರ ರುಂಡಗಳನ್ನು ನಿನ್ನ ಪಾದತಲದಲ್ಲಿ ತಂದುರುಳಿಸುವೆ

ದುರ್ಯೋಧನ—(ಕಣ್ತೆರೆದು) ನಿನ್ನ ಸ್ವಾಮಿ...ನಿಷ್ಠೆ ಅಪಾರವಾದದ್ದು. ಪಾಂಡವರು ಹಾಗೆ....ಸಿಗಃವಂತಿಲ್ಲ....ಗುರು ಪುತ್ರ

ಅಶ್ವತ್ಥಾಮ—ಪಾತಾಳ ಗರ್ಭದಲ್ಲಿದ್ದರೂ ಬಿಡಲಾರೆ ಇದೋ ಭರವಸೆ. ನಿನ್ನ ಆಜ್ಞೆಯಾಗಲಿ. ವಿಳಂಬವೇಕೆ

ದುರ್ಯೋಧನ—(ನಡುಗುವ ಕೈನೀಡಿ) ನಿನ್ನಿಚ್ಛೆಯಂತಾಗ....ಲಿ ಹೋಗಿ ಬಾ....ನಿನ್ನನ್ನು ಕಂಡ ಹೊರ...ತು ಪ್ರಾಣ....ವು...ಹೋಗಲಾರದು

ಅಶ್ವತ್ಥಾಮ—ಮಹದಾಜ್ಞೆ, ಈ ರಾತ್ರಿಯಲ್ಲಿ ನನ್ನ ವಿಜಯವು ವಿಲಕ್ಷಣವಾದದ್ದಾಗಿದೆ. ಮಾವಾ! ನೀನು ಇಲ್ಲಿ ಕುರುರಾಜನಿಗೆ ಹೆಚ್ಚಿನ ಆಯಾಸವಾಗದಂತೆ ತಕ್ಕರೀತಿಯಲ್ಲಿ ಉಪಚರಿಸು ನಾನು ಕೃತವರ್ಮ

ನೊಂದಿಗೆ ಪಾಂಡು ಶಿಬಿರವನ್ನು ಹೊಕ್ಕು ಕೃತಕಾರ್ಯನಾಗಿಯೇ ಬರುತ್ತೇನೆ ಹೋಗುವರು-ಪರದೆ

(ಪಾಂಡು ಶಿಬಿರದ ಬಹಿದ್ವಾರ)

ಅಶ್ವತ್ಥಾಮ—ಕೃತವರ್ಮ! ಪಾಂಡು ಶಿಬಿರವನ್ನು ತಲ್ಪಿದ್ದಾಯಿತು. ಒಮ್ಮೆಲೆ ಒಳಗೆ ಪ್ರವೇಶಿಸುವದು ಅಪಾಯಕರ

ಕೃತವರ್ಮ—ಹಾಗಾದರೆ ಶತ್ರುಗಳನ್ನು ಒಳ ಹೊಕ್ಕು ಸಂಹರಿಸುವ ಬಗೆಹೇಗೆ ಅಶ್ವತ್ಥಾಮ! ಪಾಂಡವರ ಶಿಬಿರ ರಕ್ಷಣ ಬಲವಾಗಿದೆಯೆಂದು ನಮ್ಮ ಗುಪ್ತಚಾರರು ಹೇಳುತ್ತಿದ್ದರು. ನೀನನ್ನುವುದುನಿಜವೇ ಸರಿ.

ಅಶ್ವತ್ಥಾಮ—ಈಗ ನಾವು ನಿಂತಿರುವದು ಪೂರ್ವ ದ್ವಾರವಾಗಿದೆ. ಏಳು ಉಳಿದ ದ್ವಾರಗಳನ್ನು ಪರೀಕ್ಷಿಸಿ ಬರೋಣ

ಕೃತವರ್ಮ—ಪಾಂಡುಶಿಬಿರ ರಚನೆಯು ಕೌಶಲ್ಯ ಪೂರ್ಣವಾಗಿದೆ ಗುರುಪುತ್ರ, ಪೂರ್ವ ಪಶ್ಚಿಮದಲ್ಲಿ ಮಾತ್ರ ದ್ವಾರಗಳಿವೆ ಮಿಕ್ಕುಳಿದ ಭಾಗಗಳಲ್ಲಿ ನೊರಜೂ ಪ್ರವೇಶಿಸುವಂತಿಲ್ಲ.

ಅಶ್ವತ್ಥಾಮ—ಕೃತವರ್ಮ! (ಅಚ್ಚರಿಯಿಂದ) ಪಾಂಡುಪುತ್ರರ ರೀತಿ-ನೀತಿಗಳು ಎಂಥವನನ್ನೂತಲೆದೂಗಿಸುವಂತಿವೆ ಆದರೆ ಈಗೊಂದು ಉಪಾಯ ಮಾಡಬೇಕಾಗಿದೆ. ಅದೇನೆಂದರೆ ಈಗ ಒಂದು ಪ್ರಾಣಿ ಮಾತ್ರವೂ ಶಿಬಿರದಿಂದ ಜೀವಂತವಾಗಿ ಹೊರಗೆ ಹೋಗದಂತೆ ತುಂಡರಿಸಿಹಾಕುವುದು ನಿನ್ನ ಕೆಲಸ.

ಕೃತವರ್ಮ—ಈ ಪಶ್ಚಿಮ ದ್ವಾರದಲ್ಲಿ ಯಾರು ನಿಲ್ಲುವದು ಪೂರ್ವ ದ್ವಾರದಲ್ಲಿ ನಿನ್ನಿಚ್ಛೆಯಂತೆ ಕೆಲಸ ಪೂರೈಸುವೆ.

ಅಶ್ವತ್ಥಾಮ—ಪಶ್ಚಿಮ ದ್ವಾರವನ್ನು ತೆಗೆಯಲು ಅಸಾಧ್ಯವಾಗುವಂತೆ ಹೊರಗಿನಿಂದ ಮುಚ್ಚಿಬಿಡೋಣ. ನಂತರ ನೀನು ನಿರಾತಂಕವಾಗಿ ಪೂರ್ವದ್ವಾರದಲ್ಲಿ ಖಡ್ಗದ ಕೆಲಸ ಪೂರೈಸು. ವಿಜಯದ ಮಬ್ಬಿನಲ್ಲಿ ಮೈಮರೆತು ನಿದ್ರಿಸುವ ಪಾಂಡು ಸೈನ್ಯವನ್ನು ತುಂಡುತುಂಡಾಗಿ

ಸುವೆ. ಒಂದೇ ಒಂದು ಶಿಶುಮಾತ್ರವೂ ಜೀವಂತವುಳಿಯಕೂಡದು ಪ್ರತಿಹಿಂಸೆಯ ಅನಾಹುತವನ್ನು ಪಾಂಡವರೂ ಸವಿಯಲಿ.

ಕೃತವರ್ಮ—(ಕೊಂಚ ಅಂಜಿಕೆಯಿಂದ) ಅಶ್ವತ್ಥಾಮ. ಇದು ಘೋರ ಕೃತ್ಯವಾಗುವದು. ರಾತ್ರಿಯಲ್ಲಿ ನಿದ್ರಿಸುವಾಗ ಯಾವ ಪ್ರಾಣಿಯನ್ನಾದರೂ ಕೊಲ್ಲುವದು ಸಮಂಜಸವೆನಿಸುವದಿಲ್ಲ.

ಅಶ್ವತ್ಥಾಮ—ಏನು ಕೃತವರ್ಮಾ! ನನ್ನ ಘೋರಪ್ರತಿಜ್ಞೆ ಪೂರೈಸಲು ಇದೇ ತಕ್ಕಸಮಯ. ಈಗ ಕೊಲ್ಲುವದು ಪ್ರಾಣಿವರ್ಗವನ್ನಲ್ಲ. ಪ್ರಚಂಡ ವೈರಿಗಳ ಸಮೂಹವನ್ನು.

ಕೃತವರ್ಮ—ಗುರುಪುತ್ರ! ಎಷ್ಟಾದರೂ ಈ ಕೃತ್ಯಕ್ಕೆ ಮನಸೊಪ್ಪದು. ನಿದ್ದೆಯಲ್ಲಿ ವೈಮರೆತವರನ್ನು ಕೊಲ್ಲುವದು ಶೂರತನವಾಗುವದಿಲ್ಲ.

ಅಶ್ವತ್ಥಾಮ—ಈ ನೀತಿ ನ್ಯಾಯಗಳನ್ನು ನಾನೂ ತಿಳಿದಿದ್ದೆ-ಎಲ್ಲಿಯವರೆಗೆ. ದುಷ್ಟದೃಷ್ಟದ್ಯುಮ್ನನು ಸಮಾಧಿಸ್ಥನಾದ ನನ್ನ ತಂದೆಯ ಪವಿತ್ರ ಶರೀರವನ್ನು ಖಡ್ಗದಿಂದ ಛಿನ್ನಛಿನ್ನಗೊಳಿಸುವವರೆಗೆ. ಅನಂತರ ಪ್ರತಿ ಹಿಂಸೆಯ ದ್ವೇಷಾಗ್ನಿಯಲ್ಲಿ ಉದಾರತೆ-ನ್ಯಾಯಗಳೆಲ್ಲವೂ ಕಮರಿಹೋಗಿವೆ ಈಗಿರುವದೆಂದರೆ ಕರ್ತವ್ಯ. ಪ್ರತಿಜ್ಞಾಪೂರ್ತಿ. ಈ ಕುರಿತು ಕ್ಷಣವೂ ಇನ್ನು ವಿಳಂಬಿಸಲಾಗದು. ಕೃತವರ್ಮಾ ನೋವಿನ ಆಘಾತವಿಲ್ಲದ ನಿನ್ನ ಕಣ್ಣಿಗೆ ಉದಾರತೆ ನೀತಿಗಳೆಲ್ಲವೂ ಕಾಣುವದು ಸಹಜ. ಆದರೆ ನನಗಾಗಿ ಸ್ವಾಮಿಗಾಗಿ-ನೀನು ಈ ಪೂರ್ವ ಮಹಾದ್ವಾರವನ್ನು ಪ್ರತಿಬಂಧಿಸು ಮುಂದಿನ ಹೊಣೆಯೆಲ್ಲವೂ ನನ್ನವು. ಇದಕ್ಕಾದರೂ ಒಪ್ಪುವಿಯಾ!

ಕೃತವರ್ಮ—ಸ್ವಾಮಿಕಾರ್ಯಕ್ಕಾಗಿ ಬದ್ಧ ಕಂಕಣನಾದ ನಿನಗೆ ನನ್ನನ್ನೇ ನಂಬಿರುವಾಗ ಅದೂ ಅವೇಳೆಯಲ್ಲಿ ಸಹಾಯಯಾಚಿಸುವಾಗ ಒಲ್ಲೆನೆನ್ನಲಾರೆ. ನಿಶ್ಚಿಂತೆಯಿಂದ ಕಾರ್ಯಪೂರೈಸು. ಈ ಮಹಾದ್ವಾರದ ಪೂರ್ಣ ಹೊಣೆ ನನ್ನದು.

ಅಶ್ವತ್ಥಾಮ—ಭಲೆ ಕೃತವರ್ಮಾ. ಇಂಥ ಸಹಾಯವಿದ್ದರೆ ಯಮಲೋಕವನ್ನೂ ಸೂರೆಮಾಡಬಹುದು ಇದೋ ಇನ್ನು ಪ್ರಚಂಡ

ಗೂಗೆಯಂತೆ ಶಿಬಿರ ಪ್ರವೇಶಿಸಿ ವೈರಿ ಕಾಗೆಗಳ ಹಿಂಡನ್ನು ಹಿಡಿಹಿಡಿದು ಹಿಂಡಿಹಾಕುತ್ತೇನೆ. ಕೃತವರ್ಮ ಈ ಕರಾಳ ರಾತ್ರಿಯಲ್ಲಿ ರಕ್ತದ ಕೆಂಪು ಪ್ರವಾಹವನ್ನು ಹರಿಸಿ- ಸೇನಾಪತಿ ದೃಷ್ಟದ್ಯುಮ್ನನ ಅಂಗಾಂಗ ಗಳು ರಕ್ತವನ್ನು ಲೇಪಿಸಿ· ವಿಜಯ ರುದ್ರನಾಗಿಬರುವ ಈ ಗುರು ಪುತ್ರನನ್ನು ನಿರೀಕ್ಷಿಸುತ್ತಿರು.

ಕೃತವರ್ಮ—(ಸುತ್ತಲೂ ನಿರೀಕ್ಷಿಸಿ) ಇದೆಂಥ ಘೋರಾಂಧಕಾರ ಜಗತ್ತಿಗೇ ಅಭೇದ್ಯ ಮುತ್ತಿಗೆಯನ್ನು ಹಾಕಿರುವದು. ಈ ಸಮಯದಲ್ಲಿ ಇದು ಪಾಂಡು ಶಿಬಿರವಲ್ಲ. ಕಾಲ ರುದ್ರನ ಪ್ರಳಯಶಿಬಿರ. ರಣ ದೇವತೆಯ ಬಾಯಿಯಂತಿರುವ ಈ ದ್ವಾರದಲ್ಲಿ ನಾನೊಬ್ಬನು ನಿಂತಿ ರುವೆ ಎಂಥ ಭಯಾನಕ ವೇಳೆ! ಇಲ್ಲಿನಿಲ್ಲುವದೂ ಅಸಾಧ್ಯವೆನಿಸುತ್ತದೆ. ಓಡುವದಂತೂ ಪರಮ ದುಸಾಧ್ಯ. ನಿಸ್ವಾರ್ಥದಿಂದ ಸ್ವಾಮಿ ಕಾರ್ಯ ಕ್ಕಾಗಿ ಬಂದ ನನ್ನನ್ನು ದೈವವೇ ರಕ್ಷಿಸಿಕೊಳ್ಳಲಿ. ಅದಕ್ಕೇ ಶರಣು ಹೊರತು ಇನ್ನಾವ ಮಾರ್ಗವಿಲ್ಲ.

ಅಶ್ವತ್ಥಾಮ—(ಆಶ್ಚರ್ಯದಿಂದ) ಇದೇನು ವಿಚಿತ್ರ: (ಶಿಬಿರದ ಎರಡನೆಯ ದ್ವಾರದಲ್ಲಿ ಉಭಯದ್ವಾರಗಳನ್ನು ದಾಟಿದರೂ ಒಬ್ಬನೂ ಕಾವಲುಗಾರನಿಲ್ಲ. ಪಾಂಡು ಸೈನ್ಯವು ಇಂದು ಈ ಶಿಬಿರವನ್ನು ಪ್ರವೇ ಶಿಸಿಲ್ಲವೇನು. (ವಿಚಾರಿಸುತ್ತ ತಿರುಗಿ ಕೃತವರ್ಮನಲ್ಲಿಗೆ ಬರುವನು;

ಕೃತವರ್ಮ—ಇದೇನು ಗುರುಪುತ್ರ! ಇಷ್ಟು ತೀವ್ರವಾಗಿ ಕಾರ್ಯ ಪೂರ್ತಿಯಾಯಿತೆ!

ಅಶ್ವತ್ಥಾಮ—ಕಾರ್ಯ ಪೂರ್ತಿಯ ಮಾತು ದೂರವುಳಿಯಿತು· ಈ ಪ್ರಥಮದ್ವಾರದಿಂದ ಎರಡನೆ ದ್ವಾರದವರೆಗೆ ಒಬ್ಬಸೇವಕನ ಸುಳಿವೂ ಹತ್ತಲಿಲ್ಲ. ಪಾಂಡು ಸೈನ್ಯವು ದ್ವಾರರಕ್ಷಣೆಯಿಲ್ಲದೆ ಇರುವದೇ!

ಕೃತವರ್ಮ—ವೈರಿಗಳ ಭೀತಿಯಿಲ್ಲದೆ ನಿಶ್ಚಿಂತೆಯಿಂದ ಮಲಗಿರ ಬೇಕು ಹೊರತು ಮತ್ತೆಲ್ಲಿಗೂ ಹೋಗುವದು ಅಸಂಭವ

ಅಶ್ವತ್ಥಾಮ – ಹಾಗಾದರೆ! ನೀನು ದ್ವಿತೀಯ ದ್ವಾರವನ್ನೇ ಪ್ರತಿ ಬಂಧಿಸು ನಾನು ಪೂರ್ತಿ ಶೋಧಿಸಿಯೇ ಬರುವೆನು- (ಇಬ್ಬರೂ ಎರ ಡನೇ ದ್ವಾರದಲ್ಲಿ ನಿಲ್ಲುವರು)

ಕೃತವರ್ಮ—ಎಚ್ಚರಿಕೆಯಿಂದ ನಿಧಾನವಾಗಿ ಪ್ರವೇಶಿಸು ಅಶ್ವತ್ಥಾಮಾ! ಪಾಂಡವರು ಚಾಣಾಕ್ಷರು ಮೈಮರೆತಿರಲಾರರು.

ಅಶ್ವತ್ಥಾಮ—ಹೇಗೇ ಇರಲಿ. ಈ ಪ್ರಲಯರುದ್ರನ ಮುಂದೆ ಈಗ ಯಾರೂ ನಿಲ್ಲಲಾರರು. (ಮೆಲ್ಲನೆ ಒಳಗೆ ಹೆಜ್ಜೆಯಿಡುವನು) ಕೃತವರ್ಮಾ! ಇದೇನು ಶಿಬಿರಮಾರ್ಗವು ಗೋಚರಿಸುವದೇ ಇಲ್ಲವಲ್ಲ. ಪ್ರತಿಯಾಗಿ ವಿಕಟಾಕಾರದ ಮೂರ್ತಿಗಳು ಕಾಣುವವು

ಕೃತವರ್ಮ— (ಪಾಂಡು ಸೈನಿಕರಲ್ಲಿ) ಇಂಥ ಆಕಾರದವರು ಒಬ್ಬರೂ ಇಲ್ಲ ಆದರೆ ಈ ಅದ್ಭುತ ದೃಶ್ಯದ ರಹಸ್ಯವೇನು.

ಅಶ್ವತ್ಥಾಮ—ನೋಡು ಕೃತವರ್ಮಾ ಒಂದೆರಡಲ್ಲ ಈ ವಿಕಾರರೂಪಿಗಳ ಸಮೂಹವು ದಾರಿಯುದ್ದಕ್ಕೂ ನಿಂತಿದೆ.

ಕೃತವರ್ಮ--ಇದು ಪಾಂಡು ಶಿಬಿರವಲ್ಲ ಗುರು ಪುತ್ರ! ಭೂತಗಣದ ಆವಾಸಸ್ಥಾನ. ನಮ್ಮ ಸಾಹಸಗಳು ಅಂಧಕಾರದಲ್ಲಿ ವ್ಯರ್ಥವಾಗುತ್ತಿದೆಯೇನೋ!

ಅಶ್ವತ್ಥಾಮ—ಈಗ ಹದಿನೆಂಟು ದಿನಗಳಿಂದಲೂ ಪಾಂಡವರ ನಿವಾಸ ಶಿಬಿರವಿದೇ ಆಗಿರುವಾಗ ಇಂದು ಮಾತ್ರ ಭೂತಗಣಗಳ ಶಿಬಿರವಾಗುವದೇ? ಅಸಂಭವ

ಕೃತವರ್ಮ—ಪಾಂಡವರ ಸುಳಿವಿರಲಿ ದ್ವಾರ ರಕ್ಷಕರ ಹೊಲಬೂ ಇಲ್ಲ. ಬರೀವಿಕಟ ಮೂರ್ತಿಗಳು ಸಮುದ್ರ ತೆರೆಯಂತೆ ಕಾಣುವವು. ಮತ್ತೇನನ್ನ ಬೇಕು. ರಣಭೂಮಿಯ ಔತಣಕ್ಕಾಗಿ ಬಂದ ರಣಪಿಶಾಚಿಗಳು ವಿಶ್ರಮಿಸುವ ಸ್ಥಳವೆಂದೇ ನನ್ನ ಅಭಿಪ್ರಾಯ. ಈಗ ಇಲ್ಲಿಂದ ಕಾಲ್ದೆಗೆಯುವದೇ ಲೇಸು

ಅಶ್ವತ್ಥಾಮ—ಹಾಂ ತಡೆ ನೋಡೋಣ ಇದೊಂದು ಬಾಣವನ್ನು ಪ್ರಯೋಗಿಸುತ್ತೇನೆ. (ಬಾಣ ಬಿಡುವನು)

ಕೃತವರ್ಮ—ಬೇಡ ಗುರುಪುತ್ರ ಬಾಣಪ್ರಯೋಗವು ಬೇಡ. ಭೀಕರಾಕೃತಿಗಳು ಕೆರಳಿ ಮೇಘಗಳಂತೆ ಮೈಮೇಲೆ ಕವಿಯುತ್ತಿವೆ

ಅಶ್ವತ್ಥಾಮ—(ಸಿಟ್ಟನಿಂದ) ಬ್ರಹ್ಮಚರ್ಯವು ಇನ್ನೂ ನಶಿಸಿಲ್ಲ. ಜ್ವಲಿಸುತ್ತಿದೆ, ಬ್ರಾಹ್ಮಣ ತಪಶ್ಶಕ್ತಿಯು ಅಳಿದಿಲ್ಲ. ಜೀವಂತವಿದೆ ಈ

ರಣಭೂತಗಳಿಗಂಜಿ ಓಡಿ ಹೋಗುವಷ್ಟು ಹೇಡಿತನ ಈ ಆಚಾರ್ಯ ಪುತ್ರನಲ್ಲಿಲ್ಲ. ಇವುಗಳ ಸೊಕ್ಕನ್ನು ಮುರಿದೇ ಮುಂದಿನ ವಿಚಾರ. (ಪುನಃ ಬಾಣ ಪ್ರಯೋಗಿಸುವನು)

ಕೃತವರ್ಮ—ಸಾಕು ಬಾಣಪ್ರಯೋಗ. ಗುರುಪುತ್ರ! ಇವುಗಳೊಡನೆ ಸೆಣಸಾಟವೇಕೆ! ಭೂವ್ಯೋಮಾಂತರಿಕ್ಷಗಳನ್ನು ಕಬಳಿಸುವ ಅದ್ಭುತಾಕಾರಗಳು ಮತ್ತೂ ಬೆಳೆಯುತ್ತಿವೆ

ಅಶ್ವತ್ಥಾಮ—ಇವುಗಳ ಸೊಕ್ಕನ್ನೂ ನೋಡಿಯೇ ಬಿಡುತ್ತೇನೆ. ಈ ಮಂತ್ರಾಸ್ತ್ರಗಳನ್ನು ಪ್ರಯೋಗಿಸಿ ಹುಟ್ಟಡಗಿಸಲೇ ಬೇಕು

ಕೃತವರ್ಮ—ಪಾಂಡು ಸೈನ್ಯದ ಮೇಲೆಸೆದಿದ್ದರೆ ಇದೊಂದೇ ಮಂತ್ರಾಸ್ತ್ರದಿಂದ ಸಾವಿರಾರು ಸೈನ್ಯಗಳು ಹೆಸರಿಲ್ಲದಾಗುತ್ತಿದ್ದವು. ಇಂಥ ಮಹಾಸ್ತ್ರವು ಈ ವಿಕಟಾಕೃತಿಗಳ ಮುಂದೆ ನಿಷ್ಪ್ರಯೋಜಕವಾಗುತ್ತಿದೆ

ಅಶ್ವತ್ಥಾಮ—ಮೊದಲೇ ರೊಚ್ಚಿಗೆದ್ದು ಹೊರಟಿರುವ ಈ ಗುರುಪುತ್ರನ ಮುಂದೆ ಇವುಗಳ ಚಿನ್ನಾಟವೇ! ಈ ಮಹಾ ಮಂತ್ರಾಸ್ತ್ರಗಳ ಅದ್ಭುತ ಶಕ್ತಿಯನ್ನು ಪರೀಕ್ಷಿಸಲಿ ಕೃತವರ್ಮ!

ಕೃತವರ್ಮ—ಅಂಧಕಾರವನ್ನು ಭೇದಿಸಿ ಶಿಬಿರದ ಪೂರ್ಣ ಪ್ರಸಾದಗಳನ್ನು ಬೆಳಗುತ್ತ-ಆರ್ಭಟೆಯಿಂದ ಸಾಗಿದ ಮಂತ್ರಾಸ್ತ್ರವೂ ಹೆಸರಿಲ್ಲದಾಯಿತು. ಇವುಗಳ ನಿವಾರಣೆ ಅಸಾಧ್ಯ. ಏಳು ನಮ್ಮ ಕಾರ್ಯ ನಾಳೆ ಪೂರೈಸೋಣ

ಅಶ್ವತ್ಥಾಮ—ಗುರುಪುತ್ರನ ಹಟಾತ್ಕಾರವನ್ನು ಇಂದು ಪರೀಕ್ಷಿಸುವೆಯಾ ಕೃತವರ್ಮ! ಇದರಲ್ಲಿ ಸೋಲು ಗೆಲುವುಗಳ ನಿರ್ಣಯವಾಗಲೇ ಬೇಕು. ಹಟ ಅಭಿಮಾನಗಳಿಲ್ಲದೆ ಅಂಜುಬುರುಕನಂತೆ ಈಗ ಓಡಿ ಹೋಗುವದೇ? ಎಂದಿಗೂ ಅಸಾಧ್ಯ. ಉಪಾಸನಾ ಬಲದಿಂದ ಸಿದ್ಧಿಯಾದ ಈ ಮಹಾ ಶಕ್ತಿಯನ್ನು ಬಿಡುತ್ತೇನೆ

ಕೃತವರ್ಮ—ಮಹಾ ಶಬ್ದದಿಂದ ಹೊರಟ ನಿನ್ನ ಶಕ್ತಿಯು ಆ ಪರ್ವತಾಕೃತಿಯ ಪದತಲದಲ್ಲಿ ನಿಷ್ಕ್ರಿಯವಾಗಿ ಉರುಳಾಡುತ್ತಿದೆ

ಅಶ್ವತ್ಥಾಮ— (ಉನ್ಮತ್ತನಾಗಿ) ಭಾರತ ಯುದ್ಧದಲ್ಲಿಯೂ ಪ್ರಯೋಗಿಸದ ಬ್ರಹ್ಮದತ್ತವಾದ ದಂಡವನ್ನು ಅಭಿಮಂತ್ರಿಸುತ್ತೇನೆ.

ಕೃತವರ್ಮ— ಅಶ್ವತ್ಥಾಮ ನಿನ್ನ ದಂಡವು ಅದರ ಹಸ್ತವನ್ನು ಅಲಂಕರಿಸಿತು. ನಿನ್ನ ಅಮೂಲ್ಯಶಕ್ತಿಗಳನ್ನು ಹೀಗೆ ಕಳಕೊಳ್ಳುವದು ಒಳಿತಲ್ಲ. ಮುಂದಿನ ಕಾರ್ಯವು ಇನ್ನೂ ಬಹಳವಿದೆ. ಹೀಗಾಗುವ ಕಾರಣವನ್ನು ಕೊಂಚ ನಿನ್ನೊಳಗೆ ವಿಚಾರಿಸಿಕೋ.

ಅಶ್ವತ್ಥಾಮ—(ವಿಚಾರದಿಂದ) ಹೌದು ನೀನನ್ನುವದೇನೋ ನಿಜ. ಮಹಾ ಮಹಾ ದಂಡಶಕ್ತಿಗಳೆಲ್ಲವೂ ನಿರರ್ಥಕವಾಗುತ್ತಿವೆ ಈ ಅದ್ಭುತಾಕೃತಿಗಳಲ್ಲಿ ಒಂದು ಶಕ್ತಿ ವಿಶೇಷವಿಲ್ಲದೆ ಹೀಗಾಗಲು ಕಾರಣವಿಲ್ಲ. ನಾನಿಷ್ಟು ಸಿಟ್ಟನಿಂದ ಯುದ್ಧಹೂಡಿದರೂ, ಪ್ರತೀಕಾರದ ಸಣ್ಣ ಶಬ್ದವೂ ಇಲ್ಲ ತಿಲಮಾತ್ರ ಪರಿಣಾಮವೂ ಇಲ್ಲ. ಏನಾದರೂ ಉಪಾಯದಿಂದ ಪ್ರವೇಶಿಸಬೇಕು. ಬಹುಶಃ ಇವುಗಳೇ ಪಾಂಡುಶಿಬಿರ ರಕ್ಷಕರಾಗಿರಬೇಕು. ಕಾವಲುಗಾರರೊಬ್ಬರೂ ಇಲ್ಲದಿರಲು ಇದೇ ಕಾರಣ ಭಲೇ! ಪಾಂಡುಪುತ್ರರೇ! ನಿಮ್ಮ ದೈವಬಲವು ಅಗಾಧವಾದದ್ದು. ಮುಂದೇನು ಕೃತವರ್ಮಾ.

ಕೃತವರ್ಮ — ಮತ್ತೇನುಮಾಡುವದು ಈ ರಣಭೂತಗಳಿಗೆ ಶರಣಾಗತರಾದರೆ ದಾರಿ ಸುಸೂತ್ರವಾದೀತು

ಅಶ್ವತ್ಥಾಮ— ಇದೇ ತಕ್ಕ ಉಪಾಯ ಯುಕ್ತಿ ಪ್ರಯುಕ್ತಿಗಳಿಂದ ಕಾರ್ಯ ಸಾಧಿಸಿಕೊಳ್ಳುವದೇ ಮಹತ್ವ ಎಲೈ ರುದ್ರಗಣಗಳೇ! ತಿಳಿಯದೆ ನಮ್ಮಿಂದಾದ ಪ್ರಮಾದವನ್ನು ಕ್ಷಮಿಸಿರಿ. ಪಾಂಡು ಶಿಬಿರದ ಮಾರ್ಗಬಿಟ್ಟು ನಮ್ಮ ಸ್ವಾಮಿಕಾರ್ಯಕ್ಕೆ ಸಹಾಯಮಾಡಿರಿ.

(ತೆರೆಯಲ್ಲಿ)— ಹ್ಹ- ಹ್ಹ- ಹ್ಹ ಸೋತು ಶರಣಾದೆಯಾ! ಬ್ರಾಹ್ಮಣ ಪುತ್ರ! ನಿನ್ನ ಸಾಹಸ-ಶೌರ್ಯಗಳಿದ್ದರೆ ಪುನಃಪ್ರಯೋಗಿಸು ನೀನಾರು. ಪಾಂಡುಶಿಬಿರದಲ್ಲಿ ಕೆಲಸವೇನು. ಅಲ್ಲಿ ನಿಮ್ಮ ಸ್ವಾಮಿಕಾರ್ಯವೇನಿದೆ.

ಅಶ್ವತ್ಥಾಮ— ಕೃತವರ್ಮ ಭೂತಗಣದ ಈ ಸ್ವರವನ್ನು ಕೇಳಿದೆಯಾ! ರುದ್ರ ಕಿಂಕರರೇ! ನಾನು ಆಚಾರ್ಯ ದ್ರೋಣ ಪುತ್ರನಿದ್ದೇನೆ. ಮೃತ್ಯುಶಯ್ಯೆಯಲ್ಲಿರುವ ನಮ್ಮ ಕುರುರಾಜನ ಕೊನೆಯಾಸೆ ತೀರಿಸಲು

ಪಾಂಡುಪುತ್ರರ ರುಂಡ ಬೇಕಾಗಿದೆ. ಅದೇ ನಮ್ಮ ಸ್ವಾಮಿಕಾರ್ಯ. ಅದಕ್ಕಾಗಿ ಮಾರ್ಗದರ್ಶನ ಮಾಡಿರಿ.

ತೆರೆಯಲ್ಲಿ— ಹ....ಹ್ಹ...ಹ್ಹ....ಹ್ಹ....ಹ. ಪಾಂಡವರ ರುಂಡವೇ! ಹೋಗಿರಿ ಸುಮ್ಮನೆ. ಅದು ಸರ್ವಥಾ ಅಸಾಧ್ಯ. ಕ್ಷೇಮದಿಂದ ತೊಲಗಿರಿ.

ಅಶ್ವತ್ಥಾಮ—ನಿಮಗೆ ನನ್ನ ಸಹಸ್ರಾರು ನಮಸ್ಕಾರ. ಕರ್ತವ್ಯವು ಪ್ರತಿಯೊಬ್ಬನಿಗೂ ಹೆಚ್ಚಿನದು. ಅದಕ್ಕಾಗಿ ದಾರಿಬಿಡಿರಿ.

ತೆರೆಯಲ್ಲಿ—ದಾರಿ ಬಿಟ್ಟರೂ ನಿಮ್ಮಿಂದ ,ಅದು ಅಸಾಧ್ಯಕೆಲಸ. ನೀವು ಏನನ್ನೂ ಸಾಧಿಸಲಾರಿರಿ.

ಅಶ್ವತ್ಥಾಮ—ಮುಂದೆ ಏನೇ ಬಂದರೂ ಎದುರಿಸುವ—ಕಾರ್ಯಪೂರ್ತಿಮಾಡುವ—ದೃಢವಿಶ್ವಾಸವು ನಮಗಿದೆ.

ತೆರೆಯಲ್ಲಿ— ಮಾರ್ಗ ಬಿಡುವದು ಸ್ವಪ್ನದ ಮಾತು. ಶಿಬರ ರಕ್ಷಣೆಗಾಗಿ ನಮಗೆ ಅಪ್ಪಣೆಯಿದೆ ಹೊರತು ಹಿಂಸಕರಾದ ನಿಮಗೆ ದಾರಿ ತೋರಿಸಲು ಆಜ್ಞೆಯಿಲ್ಲ

ಅಶ್ವತ್ಥಾಮ—ಹಾಗಾದರೆ ಪಾಂಡು ಪುತ್ರರ ಹಿತೈಷಿಗಳಿಗಾದರೂ ಪ್ರವೇಶ ಕೊಡಲು ಆಜ್ಞೆಯಿದೆಯೇ!

ತೆರೆಯಲ್ಲಿ—ಇಲ್ಲ ರಾತ್ರಿವೇಳೆಯಲ್ಲಿ ಪ್ರತ್ಯಕ್ಷ ಪಾಂಡವರ ಹೊರತು ಇನ್ನಾರ ಪ್ರವೇಶಕ್ಕೂ ಆಜ್ಞೆಯಿಲ್ಲ

ಅಶ್ವತ್ಥಾಮ - ಅಷ್ಟು ಕಠೋರವಾದ ಆಜ್ಞೆಯಾರದು?

ತೆರೆಯಲ್ಲಿ—ಆ ರುದ್ರದೇವನ ಹೊರತು. ನಮಗೆ ಮತ್ತಾರು ಆಜ್ಞೆ ಮಾಡುವವರು

ಅಶ್ವತ್ಥಾಮ—ರುದ್ರಗಣಗಳೇ! ನಾನೂ ರುದ್ರದೇವನ ಆರಾಧಕನು. ಹಾಗಲ್ಲದೆ ಈ ಮಧ್ಯರಾತ್ರಿಯಲ್ಲಿ ನಿಮ್ಮೊಡದೆ ಧೈರ್ಯಮಾಡಿ ಸೆಣಸುವದು ಮತ್ತಾರಿಗೆ ಸಾಧ್ಯ

ತೆರೆಯಲ್ಲಿ— ನೀನು ಯಾರ ಆರಾಧಕನಾಗಿದ್ದರೂ ಒಂದು ಹೆಜ್ಜೆ ಮುಂದಿರಿಸಲು ಆಜ್ಞೆಯಿಲ್ಲ

ಅಶ್ವತ್ಥಾಮ—ಹಾಗಾದರೆ ನನ್ನ ತರ್ಕವು ಪೂರೈಸುವ ಬಗೆಯಾವದು ಎಂಬದನ್ನು ನೀವೇ ಅನುಗ್ರಹಿಸಿ ಹೇಳಿರಿ

ತೆರೆಯಲ್ಲಿ—ಅದಾವದೂ ನಮಗೆ ಸಂಬಧಿಂಸಿಲ್ಲ. ರುದ್ರದೇವನ ಅಪ್ಪಣೆಯಾದರೆ ಮಾತ್ರ ನಿಮಗೆ ಪ್ರವೇಶ

ಅಶ್ವತ್ಥಾಮ—ಆ ಪ್ರಳಯಕಾರೀ ದೇವನ ಅಪ್ಪಣೆಗೆ ಮಾಡುವದೇನು? ಅವಕಾಶವೆಲ್ಲಿದೆ?

ತೆರೆಯಲ್ಲಿ—ಅದು ರುದ್ರೋಪಾಸಕನೆಂದು ಹೇಳಿಕೊಂಡ ನಿನಗೇ ಗೊತ್ತು

ಅಶ್ವತ್ಥಾಮ—ಕೃತವರ್ಮ ಮಾಡುವದೇನು ಆತಂಕ ಪರದೆಗಳು ಒಂದರಿದೊಂದು ಬಲಿಷ್ಟವಾಗಿಯೇ ಬರುತ್ತಿವೆ

ಕೃತವರ್ಮ—ಯಾವುದೂ ಅಸಾಧ್ಯವೇ ಸರಿ. ಬಂದದಾರಿಯಿಂದ ಹಿಂತಿರುಗುವದಲ್ಲದೆ ಮತ್ತೇನೂ ವಿಚಾರ ಹೊಳೆಯದು

ಅಶ್ವತ್ಥಾಮ—(ಕೊಂಚ ವಿಚಾರಿಸಿ) ಮರಣೋನ್ಮುಖ ಕುರುರಾಜನಿಗೆ ಭರವಸೆಯಿತ್ತು ಬಂದು ಈಗ ಹಿಂತಿರುಗುವದೆಂದರೇನು? ಛೀ ನನ್ನ ಜನ್ಮಕ್ಕೆ ಧಿಕ್ಕಾರ, ಹೀಗೆಯೇ ಹಳಿದುಕೊಳ್ಳುವದು ಹೇಡಿತನ. ಏನೇ ಆಗಲಿ ರುದ್ರದೇವನನ್ನು ಮೆಚ್ಚಿಸಿಯೇ ತೀರಬೇಕು

ಕೃತವರ್ಮ—ಯಾವ ವಿಧಾನದಿಂದ ರುದ್ರನನ್ನು ಸಂತೋಷಗೊಳಿಸುವೆ

ಅಶ್ವತ್ಥಾಮ—ತೀವ್ರ ಪರಿಣಾಮಕರವಾದ ಶರೀರ ಯಜ್ಞದಿಂದ ಸಾಧ್ಯವಾಗುವದು ಕೃತವರ್ಮ! ಪುಟ್ಟ ಅಗ್ನಿಕುಂಡವನ್ನು ನಿರ್ಮಿಸು. ಇನ್ನೊಂದು ತಾಸಿನಲ್ಲಿ ರುದ್ರದೇವನ ಪ್ರತ್ಯಕ್ಷರೂಪ ಅಥವಾ ಅಶ್ವತ್ಥಾಮನ ಮರಣ-ಇವುಗಳಲ್ಲಿ ಒಂದನ್ನು ನೋಡಬಹುದು

(ಪುಟ್ಟ ಕುಂಡದಲ್ಲಿ ಅಗ್ನಿಯು ಜ್ವಲಿಸುವದು)

ಅಶ್ವತ್ಥಾಮ—(ಅಗ್ನಿಯನ್ನು ಪೂಜಿಸಿ) ಶರೀರದ ಅಂಗಾಂಗಳನ್ನು ತುಂಡುಮಾಡಿ ಹೋಮಿಸುವನು. ಆದರೂ ರುದ್ರನು ಪ್ರತ್ಯಕ್ಷನಾಗಲಿಲ್ಲ. ಕೈಜೋಡಿಸಿ–ರುದ್ರದೇವ! ನಿನ್ನ ಪ್ರೀತಿಗಾಗಿ ಶರೀರದ ಅಂಗಾಂಗಗಳನ್ನು ಹೋಮಿಸಿದೆ. ಇನ್ನು ಶರೀರಯಜ್ಞದ ಪೂರ್ಣಾಹುತಿಗೆ ರುಂಡವೊಂದುಳಿದಿದೆ, ಅದೂ ಈಗ ಯಜ್ಞಕುಂಡದಲ್ಲಿ ನಿನಗಾಗಿ ಸಮರ್ಪಿಸ

ಲ್ಪಡುವದು. ಎಂದು ಕುತ್ತಿಗೆಗೆ ಖಡ್ಗವನ್ನು ಆನಿಸಿ ದೇವಾ! ಇದೋ ನಿನ್ನ ಪ್ರೀತಿಗಾಗಿ ಅಶ್ವತ್ಥಾಮ ರುಂಡದ ಪೂರ್ಣಾಹುತಿ! ಕತ್ತರಿಸಲಣಿಯಾಗುವನು. ಅಷ್ಟಕ್ಕೆ ರುದ್ರದೇವನು ಪ್ರತ್ಯಕ್ಷನಾಗಿ—ಇದೇನು ಅನಾಹುತ ಅಶ್ವತ್ಥಾಮ ನಿನ್ನಿಚ್ಛೆ ತಿಳಿಯಿತು- ನನ್ನ ಗಣಸಮೂಹದಿಂದ ನಿನಗೆ ತೊಂದರೆಯಾಗುವದಿಲ್ಲ. ನಿನ್ನ ಅಂಗಗಳು ಪೂರ್ವದಂತಾಗಲಿ. ಸಾಕುಮಾಡು ಶರೀರ ಯಜ್ಞವನ್ನು! ಎಂದು ಅದೃಶ್ಯನಾಗುವನು)

ಅಶ್ವತ್ಥಾಮ—ಕೃತವರ್ಮ: ಈಗ ನಿಜವಾಗಿಯೂ ವಿಜಯಿಗಳಾದೆವು. ನೀನು ಇಲ್ಲಿ ಖಡ್ಗಹಿಡಿದು ನಿಲ್ಲು. ನಾನು ಜಾಗ್ರತೆಯಾಗಿ ಪಂಚ ರುಂಡಗಳನ್ನು ತರುವೆನು. ನನಗೆ ಇನ್ನಾರ ಭೀತಿಯೂ ಇಲ್ಲದಾಯಿತು. ಎಲೇ! ರುದ್ರಗಣಗಳೇ ಈಗಲಾದರೂ ನಿಮ್ಮಿಂದ ಮಾರ್ಗದರ್ಶನವಾಗಬಲ್ಲದೇ!

ತೆರೆಯಲ್ಲಿ—ಆಗುವದು ಈಗ ನಮ್ಮ ಆತಂಕವಿಲ್ಲ. ಆದರೆ ಪತಿವ್ರತೆಯಾದ ಪಾಂಚಾಲಿಯನ್ನು ಮುಟ್ಟಿದರೆ ಮಾತ್ರ ಜೋಕೆ.

ಅಶ್ವತ್ಥಾಮ—ಪಾಂಚಾಲಿಯನ್ನು ಹಿಂಸಿಸುವ ಕಾರಣವೇ ನನಗಿಲ್ಲ. ಈ ರುದ್ರೋಪಾಸಕನಿಗೆ ಬೇಕಾದುದು ಆಕೆಯ ಅಣ್ಣನ ಎದೆರಕ್ತ. ಹಾಂ ಇನ್ನು ಪ್ರತ್ಯಕ್ಷ ಪ್ರಳಯಭೈರವನೇ ನಾನು. ಇದೇ ಶಿಬಿರ ಇದೇ ಕಾವಲುಗಾರರು.

ಕಾವಲುಗಾರ—ಅದಾರು ಸುಮ್ಮನೇ ಎಲ್ಲಿಗೆ ಹೋಗುವಿ? ನಿಲ್ಲು ನಿಲ್ಲು

ಅಶ್ವತ್ಥಾಮ:—ಹೋಗುವ ಮೃತ್ಯುವನ್ನು ಅಹ್ವಾನಿಸುವಿಯಾ ಮೂರ್ಖಾ! ನಾನು ಪಾಂಡುಶಿಬಿರದ ಪ್ರತ್ಯಕ್ಷ ಮೃತ್ಯುವು ನೋಡು (ಎಂದು ಭರದಿಂದುರುಳಿಸುವನು) ಇದಾರದೋ ಭವ್ಯ ಶಿಬಿರ. ದೀವಿಗೆಗಳು ಇನ್ನೂ ಜ್ವಲಿಸುತ್ತಿವೆ. ಯಾರದಾಗಿರಬಹುದು. ಮೊದಲಿನ ಆಹುತಿಯೇ ನನ್ನ ವೈರಿ-ಪಿತೃ ಹಂತಕ ಆದುರುಳ ಧೃಷ್ಟದ್ಯುಮ್ನನದು. ಹೌದು ಇದು ಸೇನಾಪತಿಯ ಶಿಬಿರವೆಂದು ಇದರ ವೈಭವವೇ ಹೇಳುವದು. ಗುರುಪುತ್ರನ ಹಸಿದ ರಣದೀಕ್ಷೆ ತುಂಬಿಬಂದಂತಾಯಿತು ಇದೊ

ಒಳನುಗ್ಗುವೆನು ಇಲ್ಲಿಯೇ ಹಂಸತಲ್ಪದಲ್ಲಿ ನಿದ್ರಿಸುತ್ತಿದ್ದಾನೆ ಏಳು ಪರಮಘಾತಕಿ! ಏಳು (ಚಂಡಿಕೆ ಹಿಡಿದು ಜಗ್ಗಿನಿಲ್ಲಿಸಿ) ನನ್ನ ತಂದೆಯು ನಿನ್ನನ್ನು ಕರೆಯುತ್ತಿರುವನು. ಇಲ್ಲ-ಇಲ್ಲ. ಆ ಪುಣ್ಯಲೋಕವು ನಿನ್ನಂಥ ದ್ರೋಹಿಗಳಿಗೆ ಸಿಗಲಾರದು. ಕೌರವನರಕ

ದೃಷ್ಟದ್ಯುಮ್ನ—(ಭಯದಿಂದ) ಗುರುಪುತ್ರ! ಇದೇನು ಭೀಕರ ಅಂಧಕಾರದಲ್ಲಿ ಗಾಢ ನಿದ್ದೆಯಲ್ಲಿ ಯುದ್ಧ. ಅಲ್ಲ ಕೊಲೆಗೆ ಯತ್ನಿಸುವದು ಯಾವ ನ್ಯಾಯ.

ಅಶ್ವತ್ಥಾಮ - ದುಷ್ಟಾ! ಸಮಾಧಿಸ್ಥನಾದ ನನ್ನತಂದೆಯ ಪವಿತ್ರಶರೀರವನ್ನು ತುಂಡು ತುಂಡಾಗಿಸಿದೆ. ಆ ನಿನ್ನ ನ್ಯಾಯದಿಂದಲೇ ಈ ಕೊಲೆ. ಅಂಧಕಾರದಲ್ಲಿಯೂ ಈ ಪ್ರತಿಸೇಡು. ಜ್ವಲಿಸುತ್ತಿದೆ ಪ್ರತಿಜ್ಞೆ ಪ್ರೇರಿಸುತ್ತದೆ. ಪರಮ ಘಾತಕಿ! ಕೇವಲ ಅನ್ಯಾಯದ ಪ್ರತಿಬಿಂಬವೆನಿಸಿದ ನಿನಗೆ ನ್ಯಾಯ ಅನ್ಯಾಯಗಳೆಲ್ಲವೂ ಘೋರ ನರಕದಲ್ಲಿ ತಾನಾಗಿ ತಿಳಿಯುವವು. ಅದಕ್ಕಾಗಿ ಅಂಧಕಾರದಲ್ಲಿಯೂ ಈ ಖಡ್ಗವು ಸಿದ್ಧವಾಗಿ ನಿಂತಿದೆ. (ಚಂಡಿಕೆಹಿಡಿದು ಜಗ್ಗಾಡುವನು)

ದೃಷ್ಟದ್ಯುಮ್ನ—(ವೇದನೆಯಿಂದ) ಗುರುಪುತ್ರ! ಭಾರತ ಯುದ್ಧದ ನ್ಯಾಯಾನ್ಯಾಯಗಳೆಲ್ಲವೂ ನಿನಗೀಗ ಕಾಣುವವು. ಅದಿರಲಿ ಚಂಡಿಕೆಬಿಡು. ನಿನಗೆ ಯುದ್ಧೋತ್ಸಾಹವಿದ್ದರೆ ಅವಶ್ಯವಾಗಿ ಪೂರೈಸುವೆ. ನನ್ನ ಶಯ್ಯಾಗೃಹದಲ್ಲಿಯ ಖಡ್ಗವನ್ನು ತಂದುಕೊಳ್ಳುವೆ. ಬಿಡು

ಅಶ್ವತ್ಥಾಮ—ಬಿಡುವದೇ. ಎಂದಿಗೂ ಅಸಾಧ್ಯ. ಅದಕ್ಕಾಗಿ ಬಂದಿಲ್ಲ, ನಿನ್ನ ರಕ್ತವು ಕೋಡಿಗಟ್ಟಿ ಪ್ರವಹಿಸುವದನ್ನು ನೋಡಿ ನನ್ನ ಯುದ್ಧೋನ್ಮಾದತಣಿಯುವದು. ಇದೇ ಖಡ್ಗದಿಂದ ಛಿನ್ನಭಿನ್ನವಾಗಿ ವಿಕೃತರೂಪದಿಂದ ನಿನ್ನ ಶರೀರವು ನರಳಿ ನರಳಿ ಪ್ರಾಣಬಿಡುವದನ್ನು ನೋಡಿದಾಗಲೇ ಗುರುಪುತ್ರನಿಗೆ ನಿಜವಾದ ಶಾಂತಿ. ಹೀಗಿರುವಾಗ ಬಿಡುದೆಲ್ಲಿ (ಪುನಃ ಜಗ್ಗುತ್ತಿರುವನು)

ದೃಷ್ಟದ್ಯುಮ್ನ—ಇದು ಅನೀತಿಯ ಚರಮಸೀಮೆ. ಗುರುಪುತ್ರ! ಕೋಪಾಂಧನಿಗೆ ವಿವೇಕ ವಿಚಾರವೆಲ್ಲಿ (ಕೈಯ್ಯಿಂದಲೇ ತಿವಿಯುವನು)

ಅಶ್ವತ್ಥಾಮ—(ಕ್ರೋಧದಿಂದ) ಛೀ. ಜೀವಗಳ್ಳ ಮುಷ್ಟಿಯಿಂದ ತಿವಿಯುತ್ತಿರುವೆ. ಈ ಪ್ರಳಯ ರುದ್ರನನ್ನು ಕೆಣಕಿ ಬದುಕಬಲ್ಲೆಯಾ! ಇದೋ ನನ್ನ ಖಡ್ಗವನ್ನೂ ಬಿಸಾಡುವೆ ನಿನ್ನಂತೆ ನಿರಾಯುಧ. (ಎಂದು ಧೃಷ್ಟದ್ಯುಮ್ನನನ್ನು ನೆಲಕ್ಕೆ ಕೆಡವಿ ಎದೆಯ ಮೇಲೆ ಗುದ್ದತೊಡಗುವನು)

ಧೃಷ್ಟದ್ಯುಮ್ನ—(ವೇದನೆಯಿಂದ) ಹಾಯ್ ಗುರುಪುತ್ರ! ಇದೆಂಥ ಅಮಾನುಷರೀತಿ. ಕೊಲ್ಲುವದಾದರೂ ನ್ಯಾಯವಾಗಿ ಕೊಲ್ಲು. ಕ್ಷತ್ರಿಯೋಚಿತವಾದ ಆಯುಧದಿಂದ ಸಂಹರಿಸು. ಗುದ್ದಿಗುದ್ದಿ ನರಕಯಾತನೆಯಲ್ಲಿ ಹಾಕಬೇಡ.

ಅಶ್ವತ್ಥಾಮ—ಗುರುಹಂತಕನಿಗೆ ನರಕವಲ್ಲದೆ ಮತ್ತಾವ ಸ್ವರ್ಗ. ಮೂರ್ಖ! ನಿನಗೆ ಜನ್ಮಸಿದ್ಧವಾದುದೇ ನರಕ. ಅದಕ್ಕಾಗಿ ಖಡ್ಗವನ್ನು ಬಿಸಾಕಿ ಮುಷ್ಟಿ ಪ್ರಯೋಗ ಮಾಡುತ್ತಿರುವೆನು

ಧೃಷ್ಟದ್ಯುಮ್ನ—(ಅಂಗಲಾಚಿ) ಗುರುಪುತ್ರ. ಹೇಗಾದರೂ ನಿನ್ನ ಕೈಲಿ ನನ್ನ ಮರಣ ಸಿದ್ಧವಾಯಿತು. ಶೂರಕ್ಷತ್ರಿಯನಿಗೆ ಉಚಿತವಾದ ಖಡ್ಗದಿಂದ ಸಂಹರಿಸು. ವೀರಸ್ವರ್ಗ ನನ್ನ ಕೊನೆಯಾಸೆಯನ್ನು ಪೂರೈಸಲು ಕೊಂಚನಿದಾನಿಸು.

ಅಶ್ವತ್ಥಾಮ—ನೀನೂ ಶೂರಕ್ಷತ್ರಿಯನೇ! ಹಾಂ ಪರಮ ಘಾತಕಿ! ನಿನ್ನಂಥ ದುಷ್ಟಕ್ಷತ್ರಿಯನಿಗೆ ಯಾವ ನರಕ ಯೋಗ್ಯವೆಂಬದು ನನಗೆ ತಿಳಿದಿದೆ. ಅದಕ್ಕೆ ನಿನ್ನ ಉಪದೇಶದ ಅಗತ್ಯವಿಲ್ಲ. ನಿನ್ನ ಘೋರ ಕೃತ್ಯಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸು ನರಳಿ ನರಳಿ ಪ್ರಾಣ ಹೋಗಲಿ. ಗುರುಹಿರಿಯರನ್ನು ಅನ್ಯಾಯವಾಗಿ ಹಿಂಸಿಸುವವರು ನಿನ್ನ ಮರಣವನ್ನು ನೋಡಿ ಬುದ್ಧಿಗಲಿಯಲಿ (ಎಂದು ಬಲವಾಗಿ ಗುದ್ದುವನು;

ಧೃಷ್ಟದ್ಯುಮ್ನ—ಹಾಯ್, ಹಾಯ್, ಗುರುಪುತ್ರ ನೀನು ಬ್ರಾಹ್ಮಣನಲ್ಲ. ಚಾಂಡಾಲ. ಹಾ....ಯ್....(ಭೂಮಿಯಲ್ಲುರುಳುವನು)

ಅಶ್ವತ್ಥಾಮ—(ಖಡ್ಗಧರಿಸಿ) ಎಲೈ ಖಡ್ಗವೇ! ಪಿತೃಹಂತಕನಾದ ಧೃಷ್ಟದ್ಯುಮ್ನನ ಮರಣದಿಂದ ಪ್ರತಿಜ್ಞೆಯ ಪ್ರಥಮಹಂತವು ಪೂರ್ತಿ

ಯಾಯಿತು ಇದೋ ಅವನ ರಕ್ತದ ಸವಿಯನ್ನು ನೋಡು (ಎಂದು ರಕ್ತಾಚ್ಛಾದಿತ ಖಡ್ಗವನ್ನು ಝಳಪಿಸಿ) ಖಡ್ಗವೇ! ನೋಡು ಶಿಖಂಡಿ ಬರುತ್ತಿರುವನು ತುಂಡರಿಸು. ನಿನ್ನ ರಕ್ತತೃಷ್ಣೆಯನ್ನು ಹಿಂಗಿಸಲು ಪಾಂಡು ಸೈನ್ಯವು ನಿದ್ದೆಗಣ್ಣಿನಲ್ಲಿಯೂ ಧಾವಿಸುತ್ತಿದೆ. ಈ ಪ್ರಳಯ ಭೈರವನ ವಿಲಾಸ ಭೂಮಿಯನ್ನಾಗಿಸುತ್ತಿದೆ ಹುಂ ತುಂಡರಿಸು ಪ್ರತ್ಯಕ್ಷ ರುದ್ರನ ಬೆಂಬಲವಿರುವಾಗ ಇನ್ನಾರ ಭೀತಿ ಆನೆ-ಕುದುರೆ-ಪದಾತಿ ಗಳೆಲ್ಲವೂ ನಿಶ್ಶೇಷವಾಗಲಿ. ಹ....ಹ್ಹ ನನ್ನನ್ನು ಕಂಡೊಡನೆ ವೀರರೂ ಓಡುತ್ತಿರುವರು. ಹಾಹಾಕಾರಿ ಬೀಳುವರು. ಎಲ್ಲರನ್ನೂ ನಿರ್ದಯದಿಂದ ತುಂಡರಿಸು. ಹಾಂ ನಿದಾನಿಸು ಇದೇ ಪಾಂಡು ನಂದರ ಬವ್ಯಶಿಬಿರ ಪರಮಪತಿವ್ರತೆ ಪಾಂಚಾಲಿಯು ಎಚ್ಚತ್ತರೆ ಎಲ್ಲ ಸಾಹಸವೂ ವ್ಯರ್ಥ ವಾಗುವದು. ಪ್ರತಿಜ್ಞಾಪೂರ್ತಿಯ ಪೂರ್ಣಸಾಮಗ್ರಿಯು ಇಲ್ಲಿ ನಿದ್ರಿಸು ತ್ತಿದೆ. (ನಿರೀಕ್ಷಿಸಿ) ಹೌದು. ಇವರೇ ಪಾಂಡುನಂದನರು. ನಿಶ್ಚಿಂತೆ ಯಿಂದ ನಿದ್ರಿಸುತ್ತಿದ್ದಾರೆ. ನಿಶ್ಶಬ್ದವಾಗಿ ತುಂಡರಿಸು. (ಕೈನಡುಗು ವದು) ಈ ಕಂಪನವೇಕೆ ಸ್ವಾಮಿಕಾರ್ಯಕ್ಕಾಗಿ— ಪ್ರತಿಜ್ಞೆಯ ಪೂರ್ತಿ ಗಾಗಿ ಭೀತಿಯೇಕೆ? ಹುಂ ತೀವ್ರವಾಗಿ ಪೂರೈಸು. ಗುರುಪುತ್ರನು ಅಷ್ಟು ಅಂಜುಬುರುಕನಲ್ಲ. (ಪಾಂಡುರುಂಡಗಳನ್ನು ಹಿಡಿದು ಕೃತವರ್ಮನೆಡೇಗೆ ಬರುವನು)

ಕೃತವರ್ಮ—ಆಚಾರ್ಯ ಪುತ್ರ! ವಿಜಯ ಶ್ರೀಯು ನಿನ್ನ ಕೊರಳನ್ನು ಅಲಂಕರಿಸಿದೆ ಇದೊ ನೋಡು ಹೆಣಗಳ ಮಹಾ ರಾಶಿ ಯನ್ನು ನಿನ್ನ ಉಗ್ರತೆಗೆ ಅಂಜಿ ದಿಕ್ಕೂತೋಚದೆ ಬರುತ್ತಿರುವವರನ್ನು ನಿನ್ನಾಜ್ಞೆಯಂತೆ ತುಂಡರಿಸಿದೆ. ಒಬ್ಬನು ಮಾತ್ರ ಈ ಅಂಧಕಾರದಲ್ಲಿ ಕಣ್ಣು ತಪ್ಪಿಸಿ ಪಲಾಯನ ಮಾಡಿದ್ದಾನೆ

ಅಶ್ವತ್ಥಾಮ—ಧನ್ಯ ಕೃತವರ್ಮ ನಮ್ಮ ಕುರುರಾಜನು ಪರಮ ಧನ್ಯನು. ಪಾಂಡವರಲ್ಲಿ ಪಾಂಚಾಲಿಯ ಹೊರತು ಉಳಿದವರೆಲ್ಲ ಅಶ್ವ ತ್ಥಾಮನ ವಿಕ್ರಮಾಗ್ನಿಯಲ್ಲಿ ಧ್ವಂಸವಾದರು. ಈ ವಿಜಯದುಂದುಂಭಿ ಬಿಯು ಕೌರವೇಂದ್ರನೆದುರು ಮೊಳಗಲಿ ದ್ವೈಪಾಯನ ಸರೋವರದೆಡೆಗೆ ತೀವ್ರವಾಗಿ ತೆರಳೋಣ

ಕೃತವರ್ಮ—ಅಶ್ವತ್ಥಾಮ! ಪಂಚರುಂಡಗಳನ್ನು ಹಿಡಿದು-ಆ ರಕ್ತಶರೀರಿಯಾದ ನಿನ್ನನ್ನು ನೋಡಿದರೆ ಪ್ರತ್ಯಕ್ಷ ಕಾಲಭೈರವನಂತೆ ಕಾಣುವದು. ಶರೀರತತ್ತರಿಸುವದು. ಎಂಥವನೂ ಅಂಜಿ ಕಾಲ್ದೆಗೆಯ ಬೇಕು ಜಯಾಪಜಯುಗಳ ಕ್ಷಣಿಕತೆಗೆ ನಿನ್ನಂಥವರ ವಿಲಕ್ಷಣ ಶೌರ್ಯ ವೇ ಕಾರಣ. ಅಲ್ಪ·ವೇಳೆಯ ಹಿಂದೆ ಪಾಂಡವರನ್ನು ಅಲಂಕರಿಸಿದ್ದ ವಿಜಯ ಮಾಲೆಯು. ಇದೀಗ ಕೌರವೇಂದ್ರನ ಕಂಠಾಭರಣವಾಯಿತು ಹಠ—ಅಭಿಮಾನಗಳಿಂದ ಯಾವದೂ ಅಸಾಧ್ಯವಲ್ಲವೆನ್ನಲು ನೀನೇ ಸಿದ್ಧಾಂತ. ಇದೊ ದ್ವೈಪಾಯನ ಸರೋವರವು ಸಮಿಾಪಿಸಿತು.

ಅಶ್ವತ್ಥಾಮ—ಕೌರವೇಂದ್ರನ ಸ್ಥಿತಿ ಹೇಗಿದೆ ಮಾವಾ! ವಿಜಯ ಶ್ರೀಯ ಕಿರಣಪ್ರಭೆಯು ಕುರುರಾಜನೆಡೆಗೆ ಧಾವಿಸುತ್ತಿದೆ.

ಕೃಪ—(ಆಶ್ಚರ್ಯದಿಂದ) ಏನು ವಿಜಯಶ್ರೀಯು ನಿಜವೇ ವತ್ಸ

ಅಶ್ವತ್ಥಾ—ನಿಜವೋ ಅಸತ್ಯವೋ ಎನ್ನುವದನ್ನು ಈ ಪಂಚ ರುಂಡಗಳಿಂದ ನೀನೇ ನಿರ್ಣಯಿಸು.

ಕೃಪ—ಹೌದು ಎಂಥ ಅದ್ಭುತ ವಿಜಯಗಳಿಸಿದೆ. ಅಶ್ವತ್ಥಾಮ. ನಿನ್ನ ಸಾಹಸ ವಿಕ್ರಮಗಳಿಗೆ ಎಣೆಯಿಲ್ಲ. ಇನ್ನು ಕುರುರಾಜನು ಚೇತರಿಸುವನು.

ಕೌರವ—ಮಲಗಿದಲ್ಲಿಯೇ ಚಕಿತ(ಮುದ್ರೆಯಿಂದ) ಆಂ ಏನು· ಆಕಾಶದಲ್ಲಿ ಪುಷ್ಪವರಳಿದಂತೆ-ಘೋರ ಅಂಧಕಾರದಲ್ಲಿ ಉಜ್ವಲ ಪ್ರಕಾಶವು ಬೆಳಗಿದಂತೆ ವಿಜಯಮಾಲೆಯ ದ್ಯೋತಕವಾದ ಪಾಂಡವರ ರುಂಡವನ್ನು ತಂದಿರುವೆಯಾ! ಗುರುಪುತ್ರ! ಎಂಥ ಅಕಲ್ಪಿತ-ಅಸಾಧ್ಯ ವಿಚಾರವನ್ನು ಏಕಾಂಗಿಯಾಗಿ ಸಾಧಿಸಿದೆಯಾ!

ಅಶ್ವತ್ಥಾಮ—ರಾಜೇಂದ್ರ! ನಿನ್ನಂಥ ಉಜ್ವಲ ಕ್ಷಾತ್ರಪಿಂಡದ ಮುಂದೆ ಆಡಿದ ಮಾತು ಸುಳ್ಳಾಗುವದೇ! ಅಸಾಧ್ಯ ಇದೋ ನಿನ್ನ ವಿಜಯಾಕಾಶದ ರುಂಡಮಾಲಿಕೆ. ಇನ್ನು ನಿರ್ವೈರವಾದ ಜಗತ್ತಿನ ಮಹಾ ಸಿಂಹಾಸನವು ನಿನ್ನದು. (ಎಂದು ರುಂಡಗಳನ್ನು ಕೌರವನ ಕೈಗೆ ಕೊಡುವನು)

ಕೌರವ—(ಉತ್ತೇಜಿತನಾಗಿ) ಜನ್ಮವೈರಿಗಳು ಹತರಾದರೇ! ಗುರು ಪುತ್ರ! ಇಲ್ಲಿ ತಾ. ಆ ದುಷ್ಟ ಭೀಮನ ರುಂಡವನ್ನು ಮೊದಲು ಕೊಡು. ಹಾರುತ್ತಿರುವ ಜೀವವು ಪುನಃ ಬದುಕಿ ನಿಲ್ಲುವದು. (ಎಂದು ಚೆನ್ನಾಗಿ ರುಂಡಗಳನ್ನು ನಿರೀಕ್ಷಿಸಿ ನಿರಾಶೆಯಿಂದ) ಹಾಳುಮಾಡಿದೆ ಭರತ ವಂಶ ವನ್ನೇ ನಿರ್ಮೂಲವಾಗಿಸಿದೆ. ಗುರುಪುತ್ರ. ಪಾಂಡವರ ಶಿರಸ್ಸು ಶ್ರೀಕೃಷ್ಣ ನ ವಜ್ರ ಪಂಜರದ ರಕ್ಷಣೆಯಲ್ಲಿ ಈಗಲೂ ಭದ್ರವಾಗಿದೆ. ಇವು ದ್ರೌಪ ದಿಯ ಪಂಚಮಕ್ಕಳ ಶಿರಸ್ಸುಗಳು- ಗುರುಪುತ್ರ ಪಾಂಡುವಂಶವೇಕೆ ಭರತಕುಲವೇ ನಿರ್ಮೂಲ. ಅಲ್ಲದೆ ನಿನಗೆ ಶಿಶುಹತ್ಯದ ಮಹಾ ಪಾತಕ........ಹಾಯ್.......ಹಿಂಸೆಯ ಈ ಘೋರ ದೃಶ್ಯವನ್ನು ಇನ್ನೂ ನೋಡಲಾರೆ-.....ನಾನಿನ್ನು.......ಹೋಗುವೆ ....ಎಲ್ಲವೂ.........ದೈವ ....ಲೀಲೆ (ಕೌರವನ ಪ್ರಾಣವು ಹೋಗುವದು. ಅಶ್ವತ್ಥಾಮ ಅತ್ಯಂತ ಖಿನ್ನಮುದ್ರೆಯಿಂದಿರುವನು) (ಪರದೆ)

(ಕುರು ಶಿಬಿರದ ಪ್ರದೇಶ ಪಾಂಡವರು)

ಧರ್ಮಜ—ಕೃಷ್ಣಾ ಸೂರ್ಯ ಕಿರಣವು ಗಗನ ಮಂಡಲವನ್ನು ಪ್ರಕಾಶಿಸುತ್ತಿದೆ. ಸುಂದರ ಪ್ರಭಾತದ ತಂಗಾಳಿಯು ಬೀಸುತ್ತಿದೆ. ಜಡ ಪ್ರಕೃತಿಯೂ ಮುಖವರಳಿಸಿ ಕುಲುಕುಲು ನಗುವಂತಿದೆ ಆದರೂ ಮನ ಸ್ಸಿಗೇ ಶಾಂತಿಯಿಲ್ಲ ಹೃದಯಾಂತರಾಳದಲ್ಲಿ ತೀವ್ರ ವೇದನೆಯೊಂದು ತೀಕ್ಷ್ಣ ಶಲ್ಯದಂತೆ ಇರಿಯುತ್ತಿದೆ ವಿಜಯೋನ್ಮಾದದಿಂದ ಸುಸಂಭ್ರ ಮದಿಂದ ಬೆಳಗಬೇಕಾದ ಇಂದಿನ ಪ್ರಭಾತವು ಹೀಗೇಕೆ?

ಕೃಷ್ಣ—ಯಮನಂದನ! ಯುದ್ಧದ ಜಯಾಪಜಯಗಳ ಕುರಿತು ಮನಸ್ಸು ಇಷ್ಟುದಿನವೂ ಭಯಭೀತಿಯಿಂದ ವ್ಯಾಕುಲವಾಗಿತ್ತು. ಈಗ ಅಂಥ ಮನೋಗ್ರಸ್ತ ಚಿಂತೆಯ ಅಂತಿಮಕಾಲವೂ- ಸುಸಂಭ್ರಮದ ಪ್ರಾರಂಭಕಾಲವೂ ಆಗಿದೆ. ಈ ಸಂಧಿಸಮಯದ ಹೊಯ್ದಾಟವು ಸ್ವಭಾವಿಕ.

ಅರ್ಜುನ—ಕೃಷ್ಣ! ಅಂಥ ಸ್ವಾಭಾವಿಕ ಹೊಯ್ದಾಟವಲ್ಲ. ವಿಶೇಷ ರೀತಿಯ ಅನಾಹುತ ಸೂಚಕವಾಗಿದೆ. ಇಲ್ಲವಾದರೆ ಈ ದಾರುಣ

ವಾದ ಅಂತರಿಕ ವೇದನೆ-ಹೃದಯ ಕಂಪನಗಳಿಂದ ಭೂಮಿಯೇ ತತ್ತರಿಸಿದಂತಾಗಲು ಕಾರಣವಿಲ್ಲ.

ಕೃಷ್ಣ—ಹಾಗಾದರೆ ನಮ್ಮ ಶಿಬಿರದಲ್ಲಿ ಏನಾದರೂ ಗಂಡಾಂತರವೊದಗಿರಬೇಕು. ಏಳಿರಿ ಜಾಗ್ರತೆಯಾಗಿ ಶಿಬಿರದೆಡೆಗೆ ಹೋಗೋಣ (ನಿರೀಕ್ಷಿಸಿ) ಅದಾರೋ ಬರುವಂತಿದೆ. ಹೌದು ಬೇಟಿಯ ಸೇವಕ.

ಸೇವಕ—(ಕಂಪಿಸುತ್ತ) ಧರ್ಮನಂದನ, ಮಹಾರಾಜರಿಗೆ ಜಯವಾಗಲಿ.

ಭೀಮ—ಅದೇನು ಕಂಪಿಸುತ್ತಿರುವೆ ಶಿಬಿರದಲ್ಲಿ ಕ್ಷೇಮವೇ?

ಸೇವಕ—(ದುಃಖದಿಂದ) ಇಲ್ಲ ಸ್ವಾಮೀ. ಶಿಬಿರದಲ್ಲಿ ಯಾರೂ ಇಲ್ಲ.

ಕೃಷ್ಣ—ಏನು ದುಃಖಿಸುವೆ. ಶಿಬಿರದಲ್ಲಿ ಯಾರೂ ಇಲ್ಲವೇ ಏನಾಯಿತು?

ಸೇವಕ—ಎಲ್ಲರೂ ನಿನ್ನೆ ರಾತ್ರಿಯಲ್ಲಿ ಹತರಾದರು. (ಎಲ್ಲರೂ ದುಃಖ ಮುದ್ರೆಯಿಂದ)

ಅರ್ಜುನ—ಹೇಗೆ ಯಾರಿಂದ ಹತರಾದರು. ಪಾಂಚಾಲಿ ಯೇನಾದಳು?

ಸೇವಕ—ಮಹಾ ರಾಣಿಯವರ ಹೊರತಾಗಿ ಶಿಬಿರದಲ್ಲಿ ಜೀವಂತ ವಸ್ತುವೊಂದೂ ಉಳಿದಿಲ್ಲ. ಎಲ್ಲವೂ ಅಶ್ವತ್ಥಾಮನಿಂದ ಧ್ವಂಸವಾಯಿತು.

ಧರ್ಮಜ—ರಾತ್ರಿಯಲ್ಲಿ! ನಿದ್ರಿಸುವ ವೇಳೆಯಲ್ಲಿ! ದಾಳಿ ಮಾಡಿದನೇ ಗುರುಪುತ್ರ? ಎಂಥ ಅನ್ಯಾಯ! ಅನಾಹುತ!.

ನಕುಲ—ಉಪ ಪಾಂಡವರು ಪಾಂಡುವಂಶ ಆಧಾರ ಭೂತರು ಏನಾದರು?.

ಸೇವಕ—ಗಾಢ ನಿದ್ದೆಯಲ್ಲಿರುವಾಗ ಐವರು ಪುತ್ರರ ರುಂಡಗಳನ್ನೂ ಕತ್ತರಿಸಿ ಕೈಲಿ ಧರಿಸಿಕೊಂಡು ದ್ವೈಪಾಯನ ತೀರಾಭಿಮುಖವಾಗಿ ಹೋಗಿದ್ದಾನೆ.

ಸಹದೇವ—ಹಾಯ್! ಪರಮ ಘಾತಕೀ ಆಚಾರ್ಯ ಪುತ್ರ. ನೀನು ಬ್ರಾಹ್ಮಣನೇ! ಧಿಕ್ಕಾರ !ನಿನಗೆ ಧಿಕ್ಕಾರ!

ಸೇವಕ—ಶಿಬಿರದಲ್ಲಿ ಮಹಾ ರಾಣಿಯವರು ಶೋಕಜ್ವಾಲೆಯಿಂದ ಪ್ರಜ್ಞಾರಹಿತರಾಗಿ ಬಿದ್ದಿರುವರು.

ಕೃಷ್ಣ—ಎಂಥ ಅನಿರೀಕ್ಷಿತ ಅನಾಹುತವಿದು. ಪಾಂಡು ಪುತ್ರರೇ ರಥವನ್ನು ವೇಗದಿಂದ ಸಾಗಿಸಿರಿ. ಸೇವಕ-ನೀನೋರ್ವನು ಜೀವದಿಂದ ಬಂದದ್ದು ಹೆಚ್ಚಿನದು ಇಲ್ಲವಾದರೆ ನಾವು ಬರಲು ಎಷ್ಟು ವೇಳೆಯೂ ಗುತ್ತಿತ್ತೋ ಏನೂ?

ಸೇವಕ—ಶಿಬಿರ ದ್ವಾರದಲ್ಲಿ ನಿಂತ ಕೃತವರ್ಮನ ಕಣ್ಣು ತಪ್ಪಿಸಿ ಪ್ರಳಯ ರುದ್ರನಂತೆ ಕಾಣುವ ಅಶ್ವತ್ಥಾಮನಿಗೆ ತಿಳಿಯದಂತೆ ಪಶ್ಚಿಮ ದ್ವಾರದಿಂದ ಹೊರಟು ತಮ್ಮ ಬಳಿಗೆ ಬರಲು ಸಾಕುಬೇಕಾಯಿತು. ತಮ್ಮ ಅನುಗ್ರಹ.

(ಎಲ್ಲರೂ ಚಿಂತಾ ಮುಖರಾಗಿ ಸಾಗುವರು.)

ಪಾಂಡು ಶಿಬಿರದಲ್ಲಿ ಮೂರ್ಚಿತಳಾದ ಪಾಂಚಾಲಿಯನ್ನು ಪಾಂಡವರು ಉಪಚರಿಸುವರು. ನಂತರ ಎಚ್ಚುತ್ತ ಕೃಷ್ಣನಿಗೆ ವಂದಿಸುವಳು)

ಪಾಂಚಾಲಿ—ಕೃಷ್ಣಾ ಕುಲವೃಕ್ಷವನ್ನೇ ಛೇದಿಸುತ್ತಿರುವ ಪ್ರಪಂಚವನ್ನೇ ಶೂನ್ಯವಾಗಿಸಿದ ಇಂಥ ಭೀಕರ ಯುದ್ಧವು ಹಿಂದೆಂದೂ ಆಗಿದೆಯೇ! ಹಾಯ್ ದೇವಾ ಪಾಂಡುವಂಶಲತೆಯು ಪೀಳಿಗೆಯ ಆಧಾರವಿಲ್ಲದೆ ಒಣಗುವಂತಾಯಿತು.

ಕೃಷ್ಣ—ಪಾಂಚಾಲೀ ದುಃಖಿಸುವಿಯೇಕೆ. ಸೃಷ್ಟಿಸಂಹಾರಗಳು ವಿಧಿವಿಲಾಸದ ಅವ್ಯಾಹತಕಾರ್ಯಗಳು. ಈಗ ನಿನ್ನ ಅನುಬಂಧುಗಳು-ಮಕ್ಕಳು-ಮುಂತಾದವರ ಮರಣದೊಂದಿಗೆ ವಿಜಯವೂ ಸೃಷ್ಟಿಗೊಂಡಿದೆ. ವಿಧಿಯು ತಂದೊಡ್ಡುವದು ಎಂಥದಿದ್ದರೂ ಎದೆಗೊಡುವದು ನಿನ್ನಂಥ ವೀರರಮಣಿಯರ ಕರ್ತವ್ಯ. ಸ್ವತಂತ್ರ ಸಾಮ್ರಾಜ್ಯಕ್ಕಾಗಿಯೇ ನಿನ್ನೆಲ್ಲ ಬಾಂಧವರು ಪ್ರಾಣವನ್ನೇ ಅರ್ಪಿಸಿದರು- ಅಮರಕೀರ್ತಿಯನ್ನು ಸಂಪಾದಿಸಿದರು. ಈ ಹೆಮ್ಮೆಯಿಂದ ಮುಂದೆನಿಂತಿರುವ ವಿಜಯದ ಪ್ರಕಾಶವನ್ನು ನೋಡಿ ಶಾಂತಳಾಗು.

ಪಾಂಚಾಲಿ—(ದುಃಖದಿಂದ) ಅದು ಸುಲಭವೇ! ಅಣ್ಣಾ! ಮಲಗಿದ ಮುದ್ದುಮಕ್ಕಳನ್ನು ಸದ್ದಿಲ್ಲದೆ ಕೊಲೆಮಾಡಿದ ಆದುಷ್ಟ ಬ್ರಾಹಣನ ಕೃತ್ಯವನ್ನು ಮರೆಯಲು ಸಾಧ್ಯವೇ! ಕ್ಷೋಭೆಗೊಂಡ ಸಮುದ್ರದಲ್ಲಿ ಉಕ್ಕೇರುವ ತೆರೆಗಳಂತೆ ಒಂದರಮೇಲೊಂದು ದುಃಖಪರಂಪರೆಗಳು ಶೀರ್ಣ ಹೃದಯುದಮೇಲೆ ಅಪ್ಪಳಿಸುತ್ತಿರುವಾಗ ಸಮಾಧಾನವು ಹೇಗೆ. ಅಣ್ಣಾ! ಅದರಮೇಲೂ ಪುತ್ರಶೋಕದ ವಜ್ರಾಘಾತವು ಪಾಂಚಾಲಿಯ ರೋಮರೋಮಗಳನ್ನೂ ಚೂರಾಗಿಸಿದೆ

ಕೃಷ್ಣ—ಧೀರಳಾಗು! ಪಾಂಚಾಲೀ ಶಿಶುಹತ್ಯೆಯ ಘೋರಪಾತಕವು ಅಶ್ವತ್ಥಾಮನ ಬೆನ್ನುಹತ್ತಿರುವದು. ಶೂರ ಪತಿಗಳು ನಿನ್ನ ತಪ್ತ ಹೃದಯವನ್ನು ಶಾಂತವಾಗಿಸಲು ಸದಾ ಸಿದ್ಧರಿರುವರು ಅಶ್ವತ್ಥಾಮನನ್ನು ಬಿಗಿದುತಂದು ನಿನ್ನೆದುರು ಚೆಲ್ಲುವರು. ತಕ್ಕ ಶಿಕ್ಷೆಯನ್ನು ವಿಧಿಸೋಣ. ದುಃಖದ ನೋವನ್ನು ಪ್ರತಿಸೇಡಿನಿಂದ ತೀರಿಸಿಕೊಳ್ಳುವದು ಕ್ಷತ್ರಿಯನ ಕರ್ತವ್ಯ. ಆದನ್ನು ಬಿಟ್ಟು ದುಃಖಿಸುತ್ತ ಕೂಡ್ರುವದು ಲಜ್ಜಾಸ್ಪದ ಪಾಂಚಾಲಿ ಸುಮ್ಮನೆ ದುಃಖಿಸಬೇಡ.

ಪಾಂಚಾಲಿ—ಕೃಷ್ಣಾ! ಯುದ್ಧದಲ್ಲಿ ಮಡಿದ ಶೂರರಿಗಾಗಿ ದುಃಖವಿಲ್ಲ. ಪಾಂಡುಕುಲ ನಿರ್ಮೂಲವಾಯಿತೆಂಬುದೇ ದಾರುಣವಾದ ಚಿಂತೆ ದೇವಾ!

ಕೃಷ್ಣ—ಭಾರತ ಮಹಿಳೆಯು ವಂಶಕ್ಕಾಗಿ ಹಳಹಳಿಸುವದು. ಸ್ವಾಭಾವಿಕ. ಇದು ನಿನ್ನಂಥವರ ಉಚ್ಚಾದರ್ಶದ ದ್ಯೋತಕ. ಪಾಂಚಾಲಿ! ಇದಕ್ಕಾಗಿ ಚಿಂತಿಸಬೇಡ ನಿನ್ನ ಚಂದ್ರವಂಶದ ಉಜ್ವಲ ಕಿರಣವು ಉತ್ತರೆಯ ಗರ್ಭದಲ್ಲಿ ಪ್ರಕಾಶಿಸುತ್ತಿದೆ. ಈ ವಿಚಾರದಿಂದ ನಾವೆಲ್ಲರ ಸಮಾಧಾನಗೊಳ್ಳಬೇಕಾಗಿದೆ.

ಪಾಂಚಾಲಿ—ದೇವಾ ಎಲ್ಲವೂ ನಿನ್ನ ಅಧೀನವಾಗಿದೆ ನಿನ್ನ ಅನುಗ್ರಹವಿದ್ದಂತಾಗಲಿ. ಪಾಂಡವರ ಪ್ರಾಣನಾಡಿಯೇ ನೀನಾಗಿರುವಾಗ ಹೆಚ್ಚಿಗೆ ಹೇಳುವದೇನು? ನಿದ್ರಿಸುವ ಮಕ್ಕಳ ಕೊಲೆಯಿಂದ ಇಷ್ಟರೊಳಗೆ ಪಾಂಚಾಲಿಯು ಹೆಸರು ಅಡಗುತ್ತಿತ್ತು. ನಿನ್ನ ಸ್ನೇಹಮಯ ಅಮೃತವಾಣಿಯಿಂದ ಹೇಗೋ ಬದುಕಿರುವೆ ದೇವಾ! ನಾನು ಎಚ್ಚ

ತ್ತಿದ್ದರೆ ಈ ದಾರುಣಘಟನೆ ಅಸಂಭವ. ಕೆರಳಿದ ಸಿಂಹಿಣಿಯಂತೆ ನನ್ನ ಪರಾಕ್ರಮವನ್ನು ಆ ವಂಚಕ ಅಶ್ವತ್ಥಾಮನಿಗೆ ತೋರಿಸುತ್ತಿದ್ದೆ. ಏನುಮಾಡಲಿ? ಗುರುಪುತ್ರನು ಮೋಸಗೊಳಿಸಿದನು.

ಭೀಮ—ಏನು. ಮೋಸ! ನಿನಗೆ ಆ ಮುಂಗೋಪಿಯು ಮೋಸ ಮಾಡಿದನೇ! ಪಾಂಚಾಲಿ. ಶಾಂತಳಾಗು. ಕುರುಕ್ಷೇತ್ರದ ಸಮರಾಗ್ನಿಯು ತಣಿಯುತ್ತಿದ್ದಂತೆ ನೂತನ ಜ್ವಾಲೆಗಳು ಏಳುತ್ತಿವೆ. ವಿಶಾಲ ರಣಭೂಮಿಯಲ್ಲಿ ನಾರುತ್ತಿರುವ ಅಸಂಖ್ಯ ಮೃತದೇಹಗಳೂ ಪ್ರತಿ ಸೇಡಿನ ಪ್ರತೀಕಗಳಾಗಿವೆ. ಅನೇಕ ಸೇಡುಗಳು ರಕ್ತದ ಹೊಳೆಯಾಗಿ ಅಡಗಿದವು. ಗುರುಪುತ್ರನದು ನೂತನ ಕೊನೆಯ ಸೇಡು ಇದೀಗ ಭೀಮನ ಗದೆಯನ್ನು ಅಹ್ವಾನಿಸಿದೆ ಪಾಂಚಾಲಿ! ಕುಮಾರರ ಐದು ರುಂಡಗಳಿಗೆ ಪ್ರತಿಯಾಗಿ ಅಶ್ವತ್ಥಾಮನ ಒಂದು ರುಂಡವನ್ನು ತಂದರೆ ಶಾಂತಳಾಗುವಿಯಾ! ಹೇಳು ನಿನ್ನ ಪ್ರತಿಯೊಂದು ಶ್ವಾಸವೂ ಈ ಭೀಮನಿಂದ ಸಫಲವಾಗುವದು.

ಪಾಂಚಾಲಿ—ಏನು. ಅಶ್ವತ್ಥಾಮನ ರುಂಡವೇ! ಹಾಂ ನಿದಾನಿಸು ಭೀಮಾ! ಗುರುಪುತ್ರನ ವಧೆಯೇ! ಸಣ್ಣ ತಪ್ಪಿಗಾಗಿ ದೊಡ್ಡ ತಪ್ಪೇ? ಅವನ ಭ್ರೂಣ ಹತ್ಯೆಯನ್ನು ನಾವು ಬ್ರಹ್ಮ ಹತ್ಯೆಯಿಂದ ಅಡಗಿಸಿದಂತಾಗುವುದು. ಬೇಡ ಕಲಿಭೀಮ ಅಶ್ವತ್ಥಾಮನು ಎಷ್ಟಾದರೂ ಬ್ರಹ್ಮ ಪುತ್ರನಿರುವನು. ಅವನ ಹಣೆಯಲ್ಲಿ ವಿರಾಜಿಸುವ ಮಣಿಯನ್ನು ತಂದರೆ ಸಾಕು ಇಷ್ಟರಿಂದಲೇ ಅವನಿಗೆ ಸಾಕಷ್ಟು ಅಪಮಾನ ಪಡಿಸಿದಂತಾಗುವುದು ಮೇರೆ ಮೀರಿದ ಅವನ ಗರ್ವವನ್ನೂ ಭಂಗಿಸಿದಂತಾಗುವುದು ಅದೇ ನನಗೆ ಸಮಾಧಾನ

ಭೀಮ—ನಿನ್ನಿಚ್ಛೆಯಿದ್ದಂತಾಗಲಿ. ಇನ್ನೊಂದು ಕ್ಷಣದಲ್ಲಿಯೇ ಅಮೂಲ್ಯವಾದ ಮಣಿಯು ನಿನ್ನ ಹಸ್ತವನ್ನಲಂಕರಿಸುವದು. (ಎಂದು ಹೋಗುವನು ಪರದೆ)

(ದ್ವೈಪಾಯನ ತೀರದ ಕಾಡುಪ್ರದೇಶ)

ಅಶ್ವತ್ಥಾಮ— (ಕ್ರೋಧ ಮುದ್ರೆಯಿಂದ) ಮೋಸ ಗುರುಪುತ್ರನ ಮುಂದೆ ಪಾಂಡವರ ಮೋಸ- ಮೋಸದಿಂದ ಕೊನೆಗೂ ಬದುಕಿದರು.

ಸ್ವಾಮಿಯೆದುರು ಮಾಡಿದ ಪ್ರತಿಜ್ಞೆಯನ್ನು ಭಂಗಿಸಿದರು ಪ್ರಪಂಚವು ನಿರ್ಜನವಾದರೂ ಪಾಂಡವರು ಸಾಯಲಾರರೇ? ತೋರಿಸುವೆ ಈ ಅಶ್ವತ್ಥಾಮನ ಪರಮ ವಿಕ್ರಮವನ್ನು ಪಾಂಡು ವಂಶವನ್ನು ನಿರ್ಮೂಲ ಮಾಡಿದ ಹೊರತು ಮನಸ್ಸಿಗೆ ಶಾಂತಿಯಿಲ್ಲ ಕುರುರಾಜನನ್ನೂ ಮೋಸದಿಂದಲೇ ಕೊಂದರು. ಅದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸಲಿ ಉತ್ತರೆಯ ಗರ್ಭವೊಂದು ಪಾತವಾದರೆ ನನ್ನಿಚ್ಛೆ ಕೆಲಮಟ್ಟಿಗಾದರೂ ಪೂರ್ತಿಯಾಗುವದು. ಅದಕ್ಕಾಗಿ ಉತ್ತರೆಯ ಗರ್ಭದ ಮೇಲೆ ಇದೊಂದು ಗುಪ್ತ ಮಂತ್ರಾಸ್ತ್ರವನ್ನು ಪ್ರಯೋಗಿಸುವೆನು. (ಎಂದು ಅಭಿಮಂತ್ರಿಸಿ ಬಿಡುವನು ವಿಚಾರಿಸಿ) ಇದೇನು ಮಾಡಿದೆ. ಭ್ರೂಣಹತ್ಯೆಯಲ್ಲವೇ! ಸುಮ್ಮನೆ ದುಡುಕಿದೆ- (ದೂರನಿರೀಕ್ಷಿಸಿ) ಆದಾರೋ ಧಾವಿಸುತ್ತಿರುವಗು ಹೌದು ಕ್ರೋಧಭರಿತನಾದ ಭೀಮನು ಗದಾಪಾಣಿಯಾಗಿ ಈ ಕಡೆಗೇ ಧಾವಿಸುತ್ತಿರುವನು. ಪಾಂಡವರ ವೈರಭಾವನೆಯು ಇನ್ನೂ ನಶಿಸಿಲ್ಲ. ಚೆನ್ನಾಯಿತು ನನ್ನ ಅಸ್ತ್ರಪ್ರಯೋಗವು ವೈರಿಕುಲ ನಿರ್ಮೂಲನಮಾಡಿದಂತಾಯಿತು- ಹುಂ ಬರಲಿ ಭೀಮ

(ಧನುರ್ಧಾರಿಯಾಗಿ ನಿಲ್ಲುವನು) (ಪರದೆ)

(ಪಾಂಡು ಶಿಬಿರದ ಅಂತಃಪುರ)

ಉತ್ತರೆ—ಹಾಯ್ ಸತ್ತೆ. ಉದರದಲ್ಲಿ ಶೂಲದಂತೆ ತಿವಿತ. ಕೃಷ್ಣಾ ರಕ್ಷಿಸು ರಕ್ಷಿಸು. (ಮೂರ್ಛಿತಳಾಗುವಳು)

ಪಾಂಚಾಲಿ—ಅಣ್ಣಾ ಕೃಷ್ಣ! ಅನಾಹುತದ ಬಿರುಗಾಳಿಯಿನ್ನೂ ನಿಂತಿಲ್ಲವೇ? ಉತ್ತರೆಯು ಗರ್ಭವೇದನೆಯಿಂದ ನರಳಿ ಮೂರ್ಛಿತಳಾದಳು (ಉಪಚರಿಸುವಳು)

ಕೃಷ್ಣ —(ವಿಸ್ಮಯದಿಂದ) ಅಂಜಿಕೆ ಬೇಡ ತಂಗೀ! ಅಶ್ವತ್ಥಾಮನ ಕಾರ್ಯವು ಮೇರೆಮಿಾರಿತು. ನಿಮ್ಮ ವೈರಪೂರ್ತಿಗಾಗಿ ಉತ್ತರೆಯ ಗರ್ಭಭೇದಿಸಲು ಗುಪ್ತವಾದ ಮಂತ್ರಾಸ್ತ್ರವನ್ನು ಪ್ರಯೋಗಿಸಿದ್ದಾನೆ ಅದು ಉತ್ತರೆಯ ಕೋಮಲ ಗರ್ಭವನ್ನು ಹಿಂಸಿಸುತ್ತಿದೆ

ಪಾಂಡವರು—ಕೃಷ್ಣಾ! ನಮ್ಮ ಏಕಮಾತ್ರ ಆಶಾಜ್ಯೋತಿಯಾದ ಹತಭಾಗಿನಿ ಉತ್ತರೆಯನ್ನು ಗರ್ಭದೊಂದಿಗೆ ರಕ್ಷಿಸು. ರಕ್ಷಿಸು

ಕೃಷ್ಣ—ಪಾಂಡು ಪುತ್ರರೆ! ಚಿಂತಿಸ ಬೇಡಿರಿ ನಿಮ್ಮ ಸುಖದುಃಖ ಗಳಲ್ಲಿ ನಾವೂ ಪಾಲುಗಾರನು ಅಶ್ವತ್ಥಾಮನ ಕ್ರೂರ ಮಂತ್ರಾಸ್ತ್ರ ವನ್ನು ನಾಶಿಸಿ ಉತ್ತರೆಯ ಗರ್ಭವನ್ನು ಸದೋಜಿತವೂ ರಕ್ಷಿಸುವಂತೆ ನನ್ನ ಸುದರ್ಶನ ಚಕ್ರವನ್ನು ಆಜ್ಞಾಪಿಸುತ್ತೇನೆ! ಎಲೈ ಸುದರ್ಶನವೇ! ಗರ್ಭಹಿಂಸಕವಾದ ಮಾರಕಾಸ್ತ್ರವನ್ನು ಸಂಹರಿಸಿ-ಉತ್ತರೆಯ ಕೂದಲೂ ಕೊಂಕದಂತೆ ಸದಾರಕ್ಷಿಸುತ್ತಿರು. (ಎಂದು ಚಕ್ರ ಪ್ರಯೋಗ ಮಾಡು ವನು)

ಉತ್ತರೆ—(ಚೇತರಿಸಿ) ದೇವಾ ಈ ಹತಭಾಗಿನಿಯು ನಿನ್ನ ದಿವ್ಯಾ ನುಗ್ರಹದಿಂದ ಬದುಕಿದಳು. ಭವಿಷ್ಯದ ಕನಸಿನ ನಿರೀಕ್ಷಣೆಯಲ್ಲಿ ಅಪಾರ ದುಃಖವನ್ನು ಕೊಂಚಕೊಂಚವಾಗಿ ಮರೆಯುತ್ತಿದ್ದೇನೆ. ಅಂತೂ ನನ್ನಾಶೆ ಜೀವದಿಂದಿದೆ. ದೇವಾ! ನಿನಗೆ ಅನಂತ ನಮಸ್ಕಾರ.

ಪಾಂಡವರು—ದೇವಾ! ಅಕಲ್ಪಿತವಾದ-ಅಸಾಧ್ಯವಾದ ಅಶ್ವತ್ಥಾ ಮನ ಅಸ್ತ್ರಪ್ರಯೋಗವನ್ನು ತಡೆದು ನಮ್ಮ ವಂಶಲತೆಯನ್ನು ಬದುಕಿ ಸಿದೆ. ನಿನಗೆ ಸಹಸ್ರಾರು ವಂದನೆ

ಕೃಷ್ಣ—ಉಜ್ವಲ-ಹಾಗೂ ಪವಿತ್ರ ದೀವಿಗೆಯು ನಶಿಸಲಾಗದು. ಹಾಗಾದರೆ ಅನಂತ ವಿಶ್ವವೂ ಸೂರ್ಯ ಪ್ರಕಾಶವಿಲ್ಲದಂತೆ ಶೂನ್ಯವಾಗಿ ತೋರುವದು. ಅದಕ್ಕಾಗಿ ಉತ್ತರೆಯ ಗರ್ಭರಕ್ಷಿಸುವದು ಕರ್ತವ್ಯವೆನಿ ಸಿತು. ಅದನ್ನು ಪೂರ್ತಿಮಾಡಿದೆನು. ಹೊರತು ಹೆಚ್ಚಿನದೇನೂ ಇದರಲ್ಲಿ ನಿಮ್ಮ ಸತ್ಯಂಕಲ್ಪದ ಪ್ರತಿಫಲವಲ್ಲದೆ ನನ್ನದೇನೂ ಇಲ್ಲ. ಪಾಂಡು ಪುತ್ರರೇ! ಇನ್ನು ನಿಲ್ಲಲು ಅವಕಾಶವಿಲ್ಲ ತಾಳ್ಮೆಯಿಲ್ಲದ ಕೇವಲ ಕ್ರೋಧ ಮತ್ತನಾದ ಅಶ್ವತ್ಥಾಮನ ಬಳಿಗೆ ಭೀಮನೊಬ್ಬನೇ ತೆರಳಿದ್ದು ಅಪಾ ಯಕರವಾದ್ದರಿಂದ ಅವನ ಸಹಾಯಕ್ಕಾಗಿ ನಾನು ಅರ್ಜುನನೊಂದಿಗೆ ಹೋಗಿ ತೀವ್ರಬರುತ್ತೇನೆ. ನೀವಿಲ್ಲಿಯೇ ವಿಶ್ರಮಿಸಿರಿ. (ಹೋಗುವರು ಪರದೆ)

(ಭೀಮ ಅಶ್ವತ್ಥಾಮರು ಸಂಧಿಸಿದ ಪ್ರದೇಶ)

ಭೀಮ—ನಿಲ್ಲು ಕೊಲೆ ಪಾತಕಿ ಅಶ್ವತ್ಥಾಮ ಮಲಗಿ ನಿದ್ರಿಸುವ ಮಕ್ಕಳನ್ನು ಕೊಂದ ನಿನ್ನ ಪೌರುಷಕ್ಕೆ! ನಿನ್ನ ಬ್ರಾಹ್ಮಣತ್ವಕ್ಕೆ ಧಿಕ್ಕಾರ! ಪರಮ ಘಾತಕಿ--ಎಲ್ಲಿ ಅಡಗಿರುವೆ?

ಅಶ್ವತ್ಥಾಮ—ಹುಂಭೀಮಾ! ನಿನಗೇನುಗೊತ್ತು. ನಿಮ್ಮ ವಂಶೋಚ್ಛಾಟನೆಗೆ ಬದ್ಧ ಕಂಕಣನಾದ ಈ ಅಶ್ವತ್ಥಾಮನೆದುರು ನೀನಾಗಿ ಬಂದು ಉಪಕಾರ ಮಾಡಿದೆ. ಇದೋ ನಿಮ್ಮ ಪೂರ್ಣನಾಶಕ್ಕಾಗಿ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸುವೆನು. ಪಾಂಡವಾನಾಂ ವಿನಾಶಾಯ. (ಎಂದುಚ್ಚರಿಸಿ ಬಿಡುವನು ಅಷ್ಟಕ್ಕೆ ಕೃಷ್ಣಾರ್ಜುನರ ಪ್ರವೇಶ.)

ಕೃಷ್ಣ—ಅರ್ಜುನ. ವಿಲಂಬಿಸಬೇಡ. ಬ್ರಹ್ಮಾಸ್ತ್ರವು ಗರ್ಜಿಸುತ್ತ ಧಾವಿಸುತ್ತಿದೆ. ಅಶ್ವತ್ಥಾಮನು ನಿಮ್ಮ ಪೂರ್ಣನಾಶಕ್ಕಾಗಿ ಪ್ರಯೋಗಿಸಿದ್ದಾನೆ ಪ್ರತಿ ಬ್ರಹ್ಮಾಸ್ತ್ರವನ್ನು ತೀವ್ರವಾಗಿ ಅಭಿಮಂತ್ರಿಸು.

ಅರ್ಜುನ—ಅಶ್ವತ್ಥಾಮಾ! ನಿನ್ನ ಔದ್ಧಾತ್ಯವು ಮೇರೆ ಮೀರಿತು ಅದನ್ನು ಅಡಗಿಸಿದ ಹೊರತು ಕ್ಷೇಮವಿಲ್ಲ. ನೋಡು ಪ್ರತ್ಯಸ್ತ್ರದ ಪ್ರಭಾವವನ್ನು. ಪಾಂಡವಾನಾಂ ಪ್ರಾಣರಕ್ಷಣಾಯ (ಎಂದು ಪ್ರಯೋಗಿಸುವನು)

ಕೃಷ್ಣ—ನೋಡು ಅರ್ಜುನ. ಎರಡೂ ಅಸ್ತ್ರಗಳು ಭೂಮಿ ನಡುಗುವಂತೆ ಗರ್ಜಿಸುತ್ತಿವೆ. ಒಂದಕ್ಕೊಂದು ಘರ್ಷಣೆಯಾಗಿ ಗಗನ ಮಂಡಲವನ್ನು ಜ್ವಾಲಾಮಯವಾಗಿಸಿದವು.

ಅರ್ಜುನ—ಕೃಷ್ಣ!ಇದು ಪ್ರಳಯಕಾಲದ ಸೂಚನೆಯೇ! ನೋಡು ಅಂಧಕಾರವು ಕವಿಯುತ್ತಿದೆ ಕೆಂಡಗಳು ಹಾರಿಹಾರಿ ಸುಡುತ್ತಲಿವೆ.

ತೆರೆಯಲ್ಲಿ ಬ್ರಹ್ಮ—ಎಲೈ ಅರ್ಜುನ ನನ್ನಿಂದ ದತ್ತವಾದ ಈ ಮಹಾಸ್ತ್ರವನ್ನು ತೀವ್ರವಾಗಿ ಉಪಸಂಹಾರ ಮಾಡು. ಇಲ್ಲವಾದರೆ ಪ್ರಪಂಚ ನಾಶ.

ಕೃಷ್ಣ—ಅರ್ಜುನ ಜಗತ್ ಪಿತಾಮಹನಾದ ಬ್ರಹ್ಮನ ವಾಣಿ ಕೇಳಿಸಿತೇ?

ಅರ್ಜುನ—ಅಸ್ತ್ರಾಭಿಮಾನೀ ದೇವತೆಯೇ ಲೋಕಕ್ಷೇಮಕ್ಕಾಗಿ ಶಾಂತಗೊಂಡು ನನ್ನ ಬತ್ತಳಿಕೆಯಲ್ಲಿ ವಿಶ್ರಮಿಸು.

(ಬಂದು ಬತ್ತಳಿಕೆಯಲ್ಲಿ ಸೇರುವದು. ಮತ್ತೊಂದು ಹಾಗೆಯೇ ಗರ್ಜಿಸುತ್ತಿರುವದು)

ಕೃಷ್ಣ—ಅರ್ಜುನ, ಅಶ್ವತ್ಥಾಮನಿಗೆ ಉಪಸಂಹಾರದ ಕ್ರಮ ತಿಳಿದಿಲ್ಲ. ಅವನ ಅಸ್ತ್ರವನ್ನೂ ಉಪಸಂಹರಿಸು

ಅರ್ಜುನ--ಹಾಗೆಯೇ ಆಗಲಿ (ಸಿಟ್ಟಿನಿಂದ)ಅಶ್ವತ್ಥಾಮ! ನಿನ್ನಂಥ ವಿವೇಕ ಹೀನರ ಕೈಗೆ ಮಹಾಮಂತ್ರಾಸ್ತ್ರಗಳು ದೊರೆತದ್ದು ಅನ್ಯಾಯ ಅನಾಹುತಕ್ಕೆ ಮೂಲವಾಯಿತು. ಇನ್ನು ನಿನ್ನಾಟ ಸಾಗುವದಿಲ್ಲ. ಈ ವರುಣ ದತ್ತವಾದ ಪಾಶದಿಂದ ನಿನ್ನನ್ನು ಬಿಗಿದು ನಮ್ಮ ಶಿಬಿರಕ್ಕೆ ಕೊಂಡೊಯ್ಯುವೆವು. ಉತ್ತರೆಯ ಗರ್ಭವನ್ನೂ ನಾಶ ಮಾಡುತ್ತಿದ್ದ ನಿನಗೆ ಘೋರ ಪ್ರಾಯಶ್ಚಿತ್ತವಿದೆ. ಕೊಲೆಪಾತಕಿ (ವರುಣ ಪಾಶವನ್ನು ಬಿಡುವನು. ಅಶ್ವತ್ಥಾಮನು ಪಾಶದಿಂದ ಸುತ್ತುಹಾಕಿ ಬೀಳುವನು)

ಭೀಮ –(ಕೋಪ) ಏನು ಉತ್ತರೆಯ ಗರ್ಭದ ಮೇಲೂ ಇವನ ಕಾಕ ದೃಷ್ಟಿಯೇ. ನೀನು ಪೂಜ್ಯರಾದ ದ್ರೋಣರ ಪುತ್ರನಾಗಿ ಹುಟ್ಟ ಬಾರದಿತ್ತು ರಾಕ್ಷಸ ಕುಲದವನಾಗಿ ಜನ್ಮಿಸಿದ್ದರೆ ನಿನ್ನ ದುಷ್ಕೃತ್ಯವೂ ಚನ್ನಾಗಿ ಒಪ್ಪುತಿತ್ತು. ಬಾ ನಿನಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕಾಗಿದೆ. (ಎಂದು ಅರ್ಜುನನ ರಥವೇಲೆಹೇರುವನು)

(ಪಾಂಡು ಶಿಬಿರದಲ್ಲಿ)

ಕೃಷ್ಣ—ಗುರುಪುತ್ರ, ನಿನಗೆ ಪಾಂಡು ವಂಶದಮೇಲೆ ಇಷ್ಟೊಂದು ಛಲವೇಕೆ? ನಿನ್ನ ತಂದೆಗೆ ಕೌರವರಿಗಿಂತ ಪಾಂಡವರೇ ಮೇಲಾದ ಪ್ರೀತಿಯ ಶಿಷ್ಯರು. ಯುಕ್ತಾ ಯುಕ್ತ ವಿಚಾರವಿಲ್ಲದೆ ಮಹಾ ಮಹಾಸ್ತ್ರಗಳನ್ನು ವ್ಯರ್ಥಮಾಡಿದೆ. ಲೋಕವನ್ನೇ ಹಾಳುಮಾಡುವ ನಿನ್ನಂಥವನಿಗೆ ಅಮೂಲ್ಯ ವಿದ್ಯೋಪದೇಶವು ಅಪರಾಧವಾಗುವದು. ಅದಕ್ಕಾಗಿಯೇ ದ್ರೋಣರು ಅದ್ಭುತ ಪ್ರಯೋಗಗಳನ್ನು ಉಪದೇಶಿಸಿಲ್ಲ ನಿನ್ನಂಥ ಕ್ರೂರ ಕರ್ಮಿಗಳಿಗೆ ಆಗಾಗ ದಂಡಿಸುತ್ತಿರುವದೇ ಯೋಗ್ಯ.

ಭೀಮ—ಕೃಷ್ಣಾ! ಈ ಕೊಲೆ ಪಾತಕಿಯನ್ನು ಕೊಲ್ಲುವದೇ ಸರಿಯಾದ ಪ್ರಾಯಶ್ಚಿತ್ತ. ಇಲ್ಲವಾದರೂ ಮನಸ್ಸು ಶಾಂತವಾಗುವುದಿಲ್ಲ. ಮಲಗಿ ನಿದ್ರಿಸುವ ಹಸುಮಕ್ಕಳನ್ನು ಎಂಥ ಅಧಮ ಚಂಡಾಲನೂ ಕೊಲ್ಲುತ್ತಿದ್ದಿಲ್ಲ. ಪವಿತ್ರವಾದ ಬ್ರಹ್ಮತ್ವಕ್ಕೆ ಕಲಂಕ ಹಚ್ಚಲು ಇಂಥವರು ಹುಟ್ಟಲಾಗದು ಬದುಕಲೂ ಬಾರದು.

ಧರ್ಮ—ಎಷ್ಟಾದರೂ ಗುರುಪುತ್ರನಿದ್ದಾನೆ ಭೀಮಾ! ನಿಧಾನಿಸು.

ಅರ್ಜುನ—ಕ್ಷತ್ರಿಯನಾಗಿದ್ದರೆ ಇಷ್ಟರೊಳಗೆ ಮರಣ ದಂಡನೆಯಾಗುತ್ತಿತ್ತು. ಆದಕ್ಕೆ ಸಮಾನವಾದ ಪ್ರಯಃಶ್ಚಿತ್ತವನ್ನು ವಿಧಿಸುವದೇ ನೀತಿ.

ಸಹದೇವ—ಬ್ರಾಹ್ಮಣನಿಗೆ ಅಪಮಾನ ಪಡಿಸುವದು ಮರಣಕ್ಕೆ ಸಮಾನ. ಆದ್ದರಿಂದ ಅಶ್ವತ್ಥಾಮನಿಗೆ ತಕ್ಕ ಅಪಮಾನದ ಪ್ರಾಯಶ್ಚಿತ್ತ ವಿಧಿಸೋಣ

ಭೀಮ—ಹಾಗಾದರೆ ಅವನ ತಲೆಯನ್ನು ಚನ್ನಾಗಿ ಬೋಳಿಸಿ ಮುಖಕ್ಕೆ ಮಸಿಯನ್ನು ಬಳಿದು ಸಂಕ್ರಾಂತಿ ಪುರುಷನಂತೆ ದಕ್ಷಿಣಾಭಿಮುಖವಾಗಿ ಅಟ್ಟಬಿಡೋಣ: ಹೇಗೆ ಪಾಂಚಾಲಿ?ಇದು ತಕ್ಕ ಉಪಾಯವಲ್ಲವೇ?

ಪಾಂಚಾಲಿ—(ಸಮಾಧಾನದಿಂದ) ಯೋಗ್ಯ ಉಪಾಯ. ಅವನ ಫಣೆಯಲ್ಲಿ ಲಕ ಲಕ ಹೊಳೆಯುವ ಆ ಮಣಿಯನ್ನು ಕಿತ್ತುಕೊಳ್ಳುವದರಿಂದಲೂ ಯೋಗ್ಯ ಪ್ರಾಯಶ್ಚಿತ್ತ ವಿಧಿಸಿದಂತಾಗುವುದು

ಭೀಮ—(ಮಣಿಗೆ ಕೈಹಾಕುವನು ಅಶ್ವತ್ಥಾಮ ಉರುಳಿ ತಪ್ಪಿಸಿಕೊಳ್ಳುವನು.)

ಭೀಮ (ಸಿಟ್ಟನಿಂದ ಮೈಮೇಲೆ ಕುಳಿತು) ನಿನ್ನಾಟ ನನ್ನ ಮುಂದೆ ಸಾಗಬಲ್ಲದೇ? ಮಧ್ಯರಾತ್ರಿಯಲ್ಲಿ ಅನಾಥ ಶಿಬಿರವನ್ನು ಪ್ರವೇಶಿಸಿ ನಿದ್ರಿಸುವವರನ್ನು ತುಂಡರಿಸಿದ ನಿನ್ನ ಮಹಾ ಪೌರುಷವೆಲ್ಲ ಈಗೆಲ್ಲಿ ಮಾಯವಾಯಿತು? ಇದೋ ನಿನ್ನ ಫಣೆಯಮಣಿ ಇದನ್ನು ಧರಿಸುವ ಯೋಗ್ಯತೆ ನಿನಗಿಲ್ಲ. ಇದು ವೀರರಮಣಿಯರಿಗೆ ಮಾತ್ರ. ಪಾಂಚಾಲಿ! ಸ್ವೀಕರಿಸು ಮಹಾ ಮಣಿಯು ನಿನ್ನನ್ನಲಂಕರಿಸು.

ಪಾಂಚಾಲಿ—ಈ ಮಣಿಯು ಎಷ್ಟು ಉದ್ದೀಪ್ತವಾಗಿದೆ. ಹಿಂಸಾಚಾರಿಯಾದ ಅಶ್ವತ್ಥಾಮನಿಗೆ ಇದು ಹೇಗೂ ಭೂಷಣವಲ್ಲ.

ಭೀಮ—ಕೃಷ್ಣ! ಅಶ್ವತ್ಥಾಮನಿಗೆ ಅಪಮಾನದ ಸಂಸ್ಕಾರವು ಸಿದ್ಧವಾಯಿತು. ಇನ್ನು ಅವನನ್ನು ಬಿಡೋಣವೇ! ಇಲ್ಲಿಯೇ ಬಂಧಿಸೋಣವೇ!

ಅಶ್ವತ್ಥಾಮನ ವಿರೂಪ ನೋಡಿ ಎಲ್ಲರೂ ನಗತೊಡಗುವರು.

ಕೃಷ್ಣ--ಅರ್ಜುನ! ನಿನ್ನ ಪಾಶ ಬಂಧನವನ್ನು ಸಡಲಿಸು. ಈ ವಿರೂಪವನ್ನು ನೋಡಿ ರಣಭೂಮಿಯ ಮೃತದೇಹಗಳೂ ನಗಲಿ.

ಅರ್ಜುನ—ಕೃಷ್ಣ ವರುಣ ಪಾಶವು ಬಿಡಿಸಲು ಬರುವಂತಿಲ್ಲ. ಒಳ್ಳೇ ಬಿರುಸಿನಿಂದ ಬಿಗಿದಿದೆ.

ಭೀಮ—(ಯತ್ನಿಸಿ) ಇಲ್ಲ. ಇಲ್ಲ ಯಾರಿಂದಲೂ ಇದು ಅಸಾಧ್ಯ ಅಶ್ವತ್ಥಾಮನು ಹೀಗೆಯೇ ಇರಲಿ. ತಪ್ಪೇನು.

ಸಹದೇವ—ಘೋರಕೃತ್ಯಕ್ಕೆ ದೀರ್ಘಶಿಕ್ಷೆಯು ನ್ಯಾಯ. ಬ್ರಾಹ್ಮಣನಿಗೆ ಮರಣ ದಂಡನೆಯಿಲ್ಲವಾದ್ದರಿಂದ ಈ ಶಿಕ್ಷೆ ಶೋಭಿಸುತ್ತದೆ.

ಧರ್ಮಜ.—ಗುರುಪುತ್ರನನ್ನು ಹೀಗೆ ಬಂಧನದಲ್ಲಿರಿಸಿಕೊಳ್ಳುವದು ಧರ್ಮವಲ್ಲ. ಕೃಷ್ಣ! ಬಂಧನ ಬಿಚ್ಚುವ ಯುಕ್ತಿಯನ್ನು ಸೂಚಿಸು. ಅಶ್ವತ್ಥಾಮನು ಅಪಮಾನ ಭರಿತನಾಗಿ ಹೋಗಲಿ

ಕೃಷ್ಣ—ಅಶ್ವತ್ಥಾಮ ನಿನ್ನ ಪಾಪ ಕಾರ್ಯದಷ್ಟೆ ಈ ಪಾಶವು ಬಲವಾಗಿ ಬಿಗಿದುಕೊಂಡಿದೆ. ಎಂಥ ವೀರರಿಂದಲೂ ಇದನ್ನು ಬಿಡಿಸುವದು ಅಸಾಧ್ಯ ಪತಿವ್ರತೆಯ ಎಡಗಾಲಿನ ಸ್ಪರ್ಶಮಾತ್ರದಿಂದ ತಾನಾಗಿ ಬಿಚ್ಚುವದು ಹೇಗೆ ನಿನ್ನ ಅಭಿಪ್ರಾಯ?

ಅರ್ಜುನ—(ನಕ್ಕು) ಹೇಗೆ ಗುರುಪುತ್ರ! ನಿನ್ನ ವೀರತನಕ್ಕೊಪ್ಪುವ ಉಪಚಾರ ಸಾಕೇನು?

ಕೃಷ್ಣ—ಪಾಂಚಾಲೀ! ಪಾಪ ಆಚಾರ್ಯ ಪುತ್ರನನ್ನು ಬೇಗ ಬೀಳ್ಕೊಡು.

ಪಾಂಚಾಲಿ—(ನಗುತ್ತ) ಗುರುಪುತ್ರ! ನಿನ್ನಿನ ರಾತ್ರಿ ತುಂಬ ನಿದ್ದೆಯಿಲ್ಲದೆ ತೂಕಡಿಸುತ್ತಿರುವೆ ನೇಲಾಗಿ ಮಲಗಿದವರನ್ನು ಕಡಿದು ದಣುವಾಗಿದೆ. ಹೋಗು. ನಿನ್ನಿಚ್ಛೆ ಬಂದೆಡೆಗೆ. ಯಥೇಚ್ಛವಾಗಿ ವಿಶ್ರಮಿಸು. ಈಗಿನ ನಿನ್ನ ರೂಪವನ್ನು ಮಕ್ಕಳಿಗೆ ಮಾತ್ರ ತೋರಿಸಬೇಡ. (ಎಂದು ಮೆಲ್ಲನೆ ಎಡಗಾಲಿನಿಂದ ಯಮಪಾಶವನ್ನು ಸ್ಪರ್ಶಿಸುವಳು. ಕಟ್ಟುಗಳೆಲ್ಲ ಬಿಚ್ಚುವವು ಅಶ್ವತ್ಥಾಮ ಖಿನ್ನಮನಸ್ಕನಾಗಿ ಹೊರಡಲನುವಾಗುವನು.

ಕೃಷ್ಣ - ಗುರುಪುತ್ರ! ಇನ್ನು ಇಂಥ ದುಷ್ಕೃತಿಗಳನ್ನು ಮಾಡಬೇಡ.

ಈಗ ಪರಮಾವಧಿ ಪ್ರಾಯಶ್ಚಿತ್ತ ವಿಧಿಸಿದಂತಾಯಿತು. ಇದರಿಂದ ನಿನ್ನ ಹೃದಯಪರಿವರ್ತನೆಯಾಗಲಿ ಆಚಾರ್ಯ ದ್ರೋಣ--ಭೀಷ್ಮರಂತೆ ವಿದ್ಯೆ-ಸಾಹಸ ಶಕ್ತಿಗಳನ್ನು ಲೋಕಕಾರ್ಯಕ್ಕಾಗಿ ವ್ಯಯಿಸು- ಕ್ಷುದ್ರ ವಾದ ಈರ್ಷ್ಯೆ--ಅಸೂಯೆಗಳಿಗೆ ಬಲಿಬಿದ್ದು ಎಂಥ ಅಮೂಲ್ಯ ವಸ್ತು ಗಳನ್ನು ಕಳಕೊಂಡೆ. ಇನ್ನು ರಾಷ್ಟ್ರ ಕಲ್ಯಾಣಕ್ಕಾಗಿ-ಅಥವಾ ಆತ್ಮ ಕಲ್ಯಾಣಕ್ಕಾಗಿ ನೀನು ಯತ್ನಿಸಿದರೆ ಗೌರವಹಾನಿಯನ್ನು ತುಂಬಿಕೊಂ ಡಂತಾಗುವದು.

ಅಶ್ವತ್ಥಾಮ — ಕೃಷ್ಣ! ನನಗೀಗ ಜ್ಞಾನೋದಯವಾಯಿತು. ದಹಿ ಸುತ್ತಿರುವ ಪಾಪದ ಕ್ಷಾಲನೆಗಾಗಿ ತಪೋವನ ಸೇರುವೆನು. ನಿನ್ನ ದಿವ್ಯಾನುಗ್ರಹವು ಪೂರ್ತಿಯಾಗಿರಲಿ- (ಹೋಗುವನು)

ಭೀಮ——ಕಷ್ಣ! ಅಶ್ವತ್ಥಾಮನಲ್ಲಿ ವೈರಭಾವವು ಪೂರ್ಣ ನಾಶ ವಾದಂತಾಯಿತೇ? ಇಲ್ಲವಾದರೆ ಅವನಿಂದ ಬರುವ ವಿಪತ್ತುಗಳು ತಪ್ಪ ಲಾರವು

ಕೃಷ್ಣ—ಗುರುಪುತ್ರನಿನ್ನು ಹಲ್ಲು ಕಿತ್ತ ಹಾವಿನಂತಾದನು ಮಣಿಯ ಪ್ರಭಾವದಿಂದ ಉತ್ತೇಜಿತನಾಗಿ-ಯುಕ್ತಾಯುಕ್ತ ವಿಚಾರ ವಿಲ್ಲದೆ ಹೀನಕೃತ್ಯಗಳನ್ನು ಮಾಡಿ ಈಪರಿ ತಪಿಸುತ್ತ ಹೋದನು. ಇಂಥ ವಿಲಕ್ಷಣ ಸ್ವಭಾವದವರಿಂದಾಗುವ, ಅಪಾಯ-ಪ್ರಯೋಜನ ಗಳು ಅನಿಶ್ಚಿತ. ಆದರೆ ಈಗ ಅಶ್ವತ್ಥಾಮನು ಪೂರ್ಣ ವೈರಾಗ್ಯಪರ ನಾಗಿದ್ದಾನೆ. ಅವನಿಂದ ಇನ್ನು ಬಾಧೆತಟ್ಟಲಾರದು-ನಿಶ್ಚಿತ. ಏಳಿರಿ! ಇನ್ನು ಹಸ್ತಿನಾನಗರಿಯಲ್ಲಿ ವಿಜಯೋತ್ಸವವನ್ನು ನಿಶ್ಚಿಂತೆಯಿಂದ ಮಾಡೋಣ. (ಶೋಕಸ್ವರವು ಕೇಳಿಬರುವದು)

ಅರ್ಜುನ—(ಆಲಿಸಿ) ಇದೇನು ಕೃಷ್ಣಾ ಕರ್ಣಕಠೋರ ಶೋಕ ಸ್ವರವು ಗಗನಮಂಡಲವನ್ನು ಭೇದಿಸುತ್ತಿದೆ. ರಣಭೂಮಿಯ ಕಗ್ಗಲ್ಲು ಗಳೂ ಕರಗುವಂತೆ ಆರ್ತಪ್ರಲಾಪ. ದೇವಾ! ನೋಡು ರಣಭೂಮಿ ಯಲ್ಲಿ ವಿಧವಾಸ್ತ್ರೀಯರ ಸಮೂಹವು ಸಮುದ್ರ ತೆರೆಗಳಂತೆ ಮೇಲಿಂದ ಮೇಲೆ ಬರುತ್ತಿವೆ. ತಮ್ಮ ಅಪ್ಪರು--ಪತಿ--ಪುತ್ರರು ಮುಂತಾದವರ ಮೃತದೇಹವನ್ನು ನಾರುತ್ತಿದ್ದರೂ ಹೊರಳಿಸಿ-ಮುದ್ದಿಸಿ-ಚುಂಬಿಸಿ-- ಪ್ರಲಾಪಿಸುತ್ತಿದ್ದಾರೆ. ಹಾಯ್- ಇಂಥ ಯುದ್ಧವೇಕೆ. ಇದರಿಂದ

ದೊರೆಯುವ ಸುಖಸಾಮ್ರಾಜ್ಯವಾದರೂ ಯಾವದು? ಕೃಷ್ಣಾ ಕೆದರಿದ ಕೂದಲಿನ-ಮಾಂಗಲ್ಯರಹಿತವಾದ ಈ ಅನಾಥಸಮೂಹವನ್ನು ನೋಡಿದರೆ, ಜಗತ್ತೇ ಶೂನ್ಯವಾದಂತೆ ಕಾಣುವದು ಅದೋ ಅಲ್ಲಿ ನೋಡು. ಕುಂತಿಯು ತನ್ನ ಅಜ್ಞಾತಪುತ್ರನೆಂದು ಕರ್ಣನ ಕೊಳೆತ ಶರೀರವನ್ನು ಕಣ್ಣೀರಿನಿಂದ ತೊಳೆಯುತ್ತಿದ್ದಾಳೆ. ಗಾಂಧಾರಿಯು ತೊಂಬತ್ತೊಂಭತ್ತು ಮಂದಿ ಪುತ್ರರಕಳೇವರವನ್ನು ಕಲೆಹಾಕುತ್ತಿದ್ದಂತೆ ಅವರವರ ಪತ್ನಿಯರು ಪತಿಗಳ ಮೃತದೇಹವನ್ನು ಸೆಳದು ಶೋಕಿಸುತ್ತಿದ್ದಾರೆ. ಕುಂತಿ ಮಾತೆಯು ಅಭಿಮನ್ಯುವಿನ ಮೃತದೇಹವನ್ನು ಆಲಂಗಿಸಿ ಮಿಡುಕುತ್ತಿದ್ದಾಳೆ-ಹಾಯ್ ದೇವಾ ಕಣ್ಣುಕೊರೆಯುವ ಈ ಭೀಕರ ದೃಶವನ್ನು ನೋಡಲಾರೆ (ದುಃಖದಿಂದ)

ಗಾಂಧಾರಿ—ಕೃಷ್ಣಾ ಏನಿದು ಅನಾಹುತ. ಈ ಘೋರದೃಶ್ಯವನ್ನು ಕಣ್ತೆರೆದು ನೋಡು. ಪ್ರಪಂಚವೇ ಯುದ್ಧಜ್ವಾಲೆಯಿಂದ ಶೋಕಾಕುಲವಾದರೂ ನೀನು ಚಂದ್ರಮಂಡಲದಂತೆ ನಗುತ್ತ ನಿಂತಿರುವೆ. ನಿನ್ನ ಸಂಕಲ್ಪ ಸೂತ್ರಗಳು ಈಗಲಾದರೂ ಪೂರ್ತಿಯಾದವೇ! ಕುರುಕುಲದ ಅಷ್ಟೇಕೆ ಕ್ಷಾತ್ರಕುಲದ ವೈಧವ್ಯವು ನಿನಗೆ ಇಷ್ಟವಾಯಿತೇ! ಇದೊಂದು ನಿನಗೆ ಚಮತ್ಕಾರ. ಅಲ್ಲವೇ ಕೃಷ್ಣಾ! ಪುತ್ರಶೋಕದ ಶತಜ್ವಾಲೆಯು ನೋವನ್ನು ನನ್ನಂಥ ಅಬಲೆಯು ಹೇಗೆ ಸಹಿಸುವಳು ಆಗಲಿ. ಹೆತ್ತೊಡಲಿನ ಕರುಳ ವೇದನೆಯರಿವು ನಿನಗಾಗುವಂತಿಲ್ಲ. ಈಗ ಅಳುವ ಪಾಳಿ ನಮ್ಮದು ಇನ್ನೊಂದು ದಿನ ಯಾದವಕುಲವೂ ಇದೇರೀತಿಯ ವೈಧವ್ಯದಿಂದ ಶೋಕಿಸುತ್ತಿರುವಾಗ ಕಂಡೀತು. ನಿನಗೆ ನಿಮ್ಮ ಆ ಪಾಳಿ ಬರಲಿದೆ. ಇದು ನನ್ನ ಅಭಿಶಾಪ.

ಕೃಷ್ಣ—ಗಾಂಧಾರಿ. ಪತಿವ್ರತೆಯಾದ ನಿನ್ನ ಅಭಿಶಾಪವು ನನಗೆ ಶಿರಸಾಮಾನ್ಯ. ದೇವೀ! ಈ ಅನಾಹುತವು ನನ್ನ ಸಂಕಲ್ಪಸೂತ್ರಗಳಾಗಿಲ್ಲ. ಇದನ್ನು ಮೊದಲೆ ತಿಳಿದು ಸಂಧಾನಕ್ಕಾಗಿ ಹೆಣಗಿದೆನು. ನಿನ್ನ ಮಗನಾದ ಕೌರವನ ಹಟತ್ಕಾರದಿಂದ ನನ್ನ ಯತ್ನ ಸಫಲವಾಗಲಿಲ್ಲ. ಯುದ್ಧವನ್ನು ತಾನೇ ಗಂಟೆಕ್ಕಿಕೊಂಡು ಬಂಧುಸಮೂಹದೊಡನೆ.ತಾನೂ ಮೃತನಾದನು. ಅದಕ್ಕೆ ನಾನೇನುಮಾಡಲಿ ತಾಯೀ! ಪ್ರಾಜ್ಞರಾದ ನಿನ್ನಂಥವರೂ ಸ್ತ್ರೀ ಸಹಜವಾದ ನೋವಿನ ಮಾತುಗಳನ್ನು ಆಡಲಾಗದು ತಾಯೀ ಶಾಂತಳಾಗು.

ಗಾಂಧಾರಿ— ಕೃಷ್ಣಾ! ಪುತ್ರಶೋಕದಿಂದ ವಿವೇಕಭ್ರಷ್ಟಳಾಗಿ ಹೇಳಿದ ನನ್ನ ಮಾತನ್ನು ಕ್ಷಮಿಸು ದೇವಾ! ನಿನ್ನ ಅಮೃತವಾಣಿಯಿಂದ ಶೋಕಪೂರಿತವಾದ ಸ್ತ್ರೀಸಮೂಹವನ್ನು ಸಾಂತ್ವನಗೊಳಿಸು-

ಕೃಷ್ಣ—(ಕೈಗಳನ್ನು ಮೇಲೆತ್ತಿ) ವೀರ ರಮಣಿಯರೇ! ಪ್ರಾಣಿಮಾತ್ರಕ್ಕೆ ಸಾವು ನಿಶ್ಚಿತ. ನಿಮ್ಮ ಪತಿಗಳು ಕ್ಷತ್ರಿಯೋಚಿತ ಯುದ್ಧದಲ್ಲಿ ಮಡಿದು ವೀರ ಸ್ವರ್ಗವನ್ನು ಅಲಂಕರಿಸಿದ್ದಾರೆ. ಇಚ್ಛೆಯಿದ್ದವರು ಪತಿಗಳೊಂದಿಗೆ ಸಹಗಮನ ಮಾಡಲು ನಿರಾತಂಕ! ಬೇಕಾದ ಸಿದ್ಧತೆಯನ್ನು ತಯಾರಿಸಿಕೊಡುವೆನು.

ತೆರೆಯಲ್ಲಿ ಕೃಷ್ಣಾ ನಿನ್ನ ಅನುಗ್ರಹದಿಂದ ನಮ್ಮ ಪತಿಗಳ ಪಾದವನ್ನು ಆನಂದದಿಂದ ಸೇರುವೆವು (ಎಂದು ಸಹಗಮನದ ಗದ್ದಲವಾಗುವದು).

ಕೃಷ್ಣ—ಅರ್ಜುನ ಸೃಷ್ಟಿಕ್ರಮವೇ ಹೀಗಿರುವಾಗ ನೀನೇಕೆ ಚಿಂತಿಸುವೆ? ಕುಂತಿ ಗಾಂಧಾರಿ ಮುಂತಾದ ಸ್ತ್ರೀಯರೊಂದಿಗೆ ಹಸ್ತಿನಾನಗರಿಯನ್ನು ಪ್ರವೇಶಿಸೋಣ ಇನ್ನು ವಿಲಂಬಿಸಲಾಗದು. ಪಾಂಡುಪುತ್ರರೇ ಏಳಿರಿ. (ಎಲ್ಲರೂ ಹೊರಡುವರು) (ಪರದೆ)

ಹಸ್ತಿನಾ ನಗರಿಯಲ್ಲಿ ಪಾಂಡವರ ವಿಜಯೋತ್ಸವದ ಕೋಲಾಹಲ-ಧೃತರಾಷ್ಟ್ರನ ಅರಮನೆ-ಪಾಂಡವರ ಪ್ರವೇಶ.

ಧರ್ಮಜ—ರಾಜೇಂದ್ರ! ಹತಭಾಗ್ಯರಾದ ಪಾಂಡವರು ನಿನಗೆ ನಮಸ್ಕರಿಸುವರು. ನಿನ್ನ ಮಕ್ಕಳು–ಸಮಸ್ತ ಬಂಧುಗಳನ್ನು ನಾಶಮಾಡಿದ ಈ ಪಾಂಡವರ ಶತಾಪರಾಧವನ್ನು ಕ್ಷಮಿಸಿ ಆಶೀರ್ವದಿಸು. ನಿಮ್ಮೆಲ್ಲರ ಆಶೀರ್ವಾದ-ಅನುಗ್ರಹಗಳಿದ್ದರೆ ಮಾತ್ರ ಪಾಂಡವರು ಸಿಂಹಾಸನವನ್ನಲಂಕರಿಸುವರು. ಪುತ್ರಶೋಕವನ್ನು ಮರೆತು ಜನ್ಮದಿಂದಲೂ ಅನಾಥರಾದ ನಮ್ಮನ್ನು ನೋಡಿಕೊಳ್ಳುವ ಭಾರ ನಿಮ್ಮದು.

ಧೃತರಾಷ್ಟ್ರ—(ಗದ್ಗದ ವಾಣಿಯಿಂದ) ಯಮನಂದನ! ನಿಮ್ಮದೇನೂ ದೋಷವಿಲ್ಲ ನನ್ನ ಪುತ್ರನ ಹಟಮಾರಿತನವೇ ವಿನಾಶಕ್ಕೆ ಮೂಲವಾಯಿತು. ನೀವು ನಿಜವಾಗಿ ಸತ್ಯಸಂಧರು ಪರಮ ಭಾಗ್ಯವಂತರು. ಸಕಲ ಪ್ರಜೆಗಳ ಹೃದಯವೂ ನಿಮ್ಮ ಆದರ್ಶ ರಾಜ್ಯವನ್ನೇ ಬಯಸುತ್ತಿತ್ತು ನೀವು ನಿಶ್ಚಿಂತೆಯಿಂದ ರಾಜ್ಯವಾಳಿರಿ.

ನಿನುಗೆ ಮಂಗಲವಾಗಿಲಿ. ದೇವಕೀ ನಂದನ! ಪಟ್ಟಾಭಿಷೇಕ ಮುಹೂರ್ತವು ಶೀಘ್ರವಾಗಿ ನಿಶ್ಚಿತವಾಗಲಿ, ಎಲ್ಲವೂ ನಿನ್ನ ಅಗಾದ ಲೀಲೆ.

ಕೃಷ್ಣ—ಧೃತರಾಷ್ಟ್ರ! ಅನಾಥರಾದ ಪಾಂಡವರಿಗೆ ನೀನು ತಂದೆಯು. ಪುತ್ರಹೀನನಾದ ನಿನಗೆ ಪಾಂಡವರು ಮಕ್ಕಳು ಈ ಪರಸ್ಪರ ಭಾವನೆಯಿಂದ ಕುರುಸಿಂಹಾಸನವು ಪುನಃ ವಿಶ್ವಾದರ್ಶವಾಗಿ ಬೆಳಗುವಂತಾಗಲಿ ಪಾಂಡು ಪುತ್ರರೇ! ಪೂಜ್ಯನಾದ ಧೃತರಾಷ್ಟ್ರನಿಗೆ ಒಬ್ಬೊಬ್ಬರಾಗಿ ನಮಸ್ಕರಿಸಿರಿ. (ಧರ್ಮಜನು ವಂದಿಸುವನು. ಬೀಡಿನ ಭೀಮನ ಪ್ರತಿಮೆಯನ್ನು ಕೃಷ್ಣನು ಧೃತರಾಷ್ಟ್ರನಮುಂದೆ ನಿಲ್ಲಿಸುವನು.

ಧೃತರಾಷ್ಟ್ರ—ಬಾ ಭೀಮ. ಕುರುಕ್ಷೇತ್ರದ ಮಹಾಯುದ್ಧದಲ್ಲಿ ದಣಿದ ನಿನ್ನನ್ನು ಒಮ್ಮೆ ಆಲಂಗಿಸುವೆನು (ಎಂದ. ಬೀಡಿನ ಪ್ರತಿಮೆಯನ್ನು ಅಪ್ಪಿಕೊಳ್ಳುವನು ಅದು ಪುಡಿಯಾಗಿಬೀಳುವದು ಲಜ್ಜೆಯ ಸ್ವರದಿಂದ–)ಕೃಷ್ಣಾ ಇದೇನು ಅನರ್ಥ.

ಕೃಷ್ಣ—ಅನರ್ಥವಾಗಿಲ್ಲ ರಾಜೇಂದ್ರ. ಕೌರವನು ಗದಾಯುದ್ಧವನ್ನು ಕಲಿಯುವಾಗ ಪ್ರತಿಸ್ಪರ್ಧೆಯಾಗಿ ಭೀಮನ ಪ್ರತಿಮೆಯನ್ನು ಬೀಡಿನಿಂದ ನಿರ್ಮಿಸಿಕೊಂಡಿದ್ದನು. ಅದೀಗ ನಿನ್ನ ಪುತ್ರಶೋಕದ ಜ್ವಾಲೆಯಿಂದ ಭಿನ್ನ ಭಿನ್ನವಾಗಿ ಸಿಡಿಯಿತು. ಭೀಮನು ಜೀವಂತನಿದ್ದಾನೆ ಇದೋ ನಿನ್ನ ಮುಂದೆ ನಮಸ್ಕರಿಸಿರುವನು ಆಶೀರ್ವದಿಸು.

(ಎಲ್ಲರೂ ನಮಸ್ಕರಿಸುವರು)

ಧೃತರಾಷ್ಟ್ರ ಮಂಗಲವಾಗಲಿ (ಎಂದು ಆಶೀರ್ವದಿಸುವನು).

(ಏಕಾಂತದಲ್ಲಿ)

ಧರ್ಮಜ—ಕೃಷ್ಣಾ! ಯುದ್ಧದಿಂದ ರಾಜ್ಯವು ನಿಶ್ಚೇತನವಾಗಿ ಕಾಣುತ್ತಿದೆ. ಬುದ್ಧಿವಂತರು--ಶೂರರೂ-ಮಹಾಶಾಸ್ತ್ರ ಪಂಡಿತರು, ಅನುಭವಿಗಳು, ರಾಜಕಾರಣ ಪಟುಗಳು- ಮುಂತಾಗಿ ರಾಜ್ಯದ ಆಧಾರ ಸ್ತಂಭಗಳೆಲ್ಲ ನಾಶವಾದವು. ಬರಿಯ ಅನಾಥರು-ದೀನರು-ದುಃಖಿಗಳು–ಮಕ್ಕಳು–ಮುಂತಾದವರಿಂದ ಪೂರಿತರಾಜ್ಯವನ್ನು ಹೇಗೆ ಆಳಲಿ.

ಕೃಷ್ಣ—ವೈರಿಯು ರಾಜ್ಯವನ್ನು ಬಿಟ್ಟುಕೊಡುವಾಗ ಸಾಕಷ್ಟು ವಿರೂಪಗೊಳಿಸಿ–ನಿಸ್ಸಾರವಾಗಿಸಿಯೇ ಕೊಡುವನು. ಹೊರತು ಸಕಲ

ಸಂಪತ್ತುಗಳನ್ನು ತುಂಬಿ ಒಪ್ಪಿಸುವದಿಲ್ಲ. ಯದುನಂದನ ಇಂಥ ರಾಜ್ಯವನ್ನು ತಾಳ್ಮೆಯಿಂದ ಬೆಳೆಸಿ ಬೆಳಗಿಸಿಕೊಳ್ಳುವದು ರಾಜನ ಕರ್ತವ್ಯ ಚಾಣಾಕ್ಷತನ.

ಧರ್ಮಜ--ಕೃಷ್ಣಾ! ಆಪ್ತರು-ಸಲಹೆಗಾರರು-ಹಿರಿಯರು ಯಾರೂ ಇಲ್ಲದ ಈ ರಾಜ್ಯವನ್ನು ಬೆಳಗಿಸುವದಿರಲಿ. ವಿಚಾರ ಮಾತ್ರದಿಂದಲೇ ತೀವ್ರ ವೈರಾಗ್ಯವುಂಟಾಗುವದು. ಪ್ರಶಾಂತ ತಪೋಕ್ಷೇತ್ರವುಳ್ಳ ವನ ವಾಸವೇ ಯೋಗ್ಯವೆಂದೆನಿಸುವದು.

ಕೃಷ್ಣ -ಹಾಗಲ್ಲ ಯದುನಂದನ! ರಾಷ್ಟ್ರದ ಅಭಿವೃದ್ಧಿಗೆ ಸಮ ರ್ಥನಾದ ಒಬ್ಬನೇ ನಾಯಕನಿದ್ದರೂ ಸಾಕು. ಸಮೃದ್ಧವಾಗಿಸಲು ಸಾಧ್ಯವಿದೆ ವನವಾಸ ವೈರಾಗ್ಯಗಳು ಋಷಿಕುಲದ ಕರ್ತವ್ಯ. ಆದರೆ ಇಂಥ ಸಾರರಹಿತ ರಾಜ್ಯವನ್ನು ಸಮೃದ್ಧವಾಗಿ ಸಲಹುವದು ಕ್ಷತ್ರಿಯ ನಾದ ನಿನ್ನ ಕರ್ತವ್ಯ-

ಧರ್ಮಜ—ಕ್ಷತ್ರಿಯನು ವನವಾಸ ವೈರಾಗ್ಯಗಳಿಗೆ ಯೋಗ್ಯ ನಲ್ಲವೇ! ಕೃಷ್ಣ.

ಕೃಷ್ಣ—ಆ ಯೋಗ್ಯತೆ ಕ್ಷತ್ರಿಯನಿಗೂ ಇದೆ. ಆದರೆ ಅದ ಕ್ಕೊಂದು ನಿಯಮವಿರುವದು. ರಾಜಕೀಯ ಕರ್ತವ್ಯಗಳನ್ನು ಮುಗಿಸಿ ರಾಜ್ಯವನ್ನು ಆನಂದಭರಿತವನ್ನಾಗಿಸಿ, ಜೀವನದ ಕೊನೆಯ ಶಾಂತಿ ಗಾಗಿ ವನವಾಸವು ಯೋಗ್ಯ- ಹೊರತು ಇಂಥ ಅನಾಥ ರಾಜ್ಯವನ್ನು ತ್ಯಜಿಸಿ ಹೋಗುವುದು ಕ್ಷತ್ರಿಯನ ಮಹಾಪರಾಧ. ಕರ್ತವ್ಯಚ್ಯುತಿ— ವಿಚಾರಿಸು ಧರ್ಮನಂದನ.

ಧರ್ಮಜ—ಯದುನಂದನ ನಿನ್ನ ಹೇಳಿಕೆಗಳೆಲ್ಲ ಸತ್ಯಪೂರ್ಣ ವಾದರೂ ನನ್ನ ಹೃದಯಕ್ಕೆ ಸಮಾಧಾನವಾಗುವದಿಲ್ಲ. ಕೃಷ್ಣ ಈ ರಾಜ್ಯಕ್ಕಾಗಿ ಇಷ್ಟೊಂದು ಬಲವಂತವೇಕೆ?

ಕೃಷ್ಣ—ಯದುನಂದನ! ಹಾಗಾದರೆ ಏಳು ಶರತಲ್ಪದಲ್ಲಿರುವ ಪಿತಾಮಹ ಭೀಷ್ಮನ ವಿಚಾರವನ್ನು ತಿಳಿಯಬಹುದು. ರಾಜನೀತಿ— ಮುಂತಾದ ಸಕಲ ಶಾಸ್ತ್ರಗಳಲ್ಲಿ ದೀರ್ಘ ಅನುಭವದ ಮಹಾ

ಪಾಂಡಿತ್ಯವುಳ್ಳ ಭೀಷ್ಮನಲ್ಲದೆ ಇನ್ನಾರೂ ಈ ಯುಗದಲ್ಲಿ ಮಾರ್ಗದರ್ಶಕರಿಲ್ಲ. ಆದ್ದರಿಂದ ಶೀಘ್ರವೇ ಕುರುಕ್ಷೇತ್ರಕ್ಕೆ ತೆರಳೋಣ

ಧರ್ಮಜ—ನಿನ್ನಿಚ್ಛೆಯಂತಾಗಲಿ. (ಹೋಗುವರು) ಪರದೆ.

(ಕುರುಕ್ಷೇತ್ರದ ಶರತಲ್ಪದಲ್ಲಿ ನಿರ್ಭೀತವಾಗಿ ಬಿದ್ದಿರುವ ಭೀಷ್ಮ).

ಧರ್ಮಜ—ಕೃಷ್ಣ ಇದೇನು! ಪಿತಾಮಹನು ಮೃತನಾದನೆ! ಶರೀರ ಚಲನೆಯು ನಿಂತುಹೋಗಿದೆ. ನಮ್ಮ ಆಗಮನದ ಪ್ರಜ್ಞೆಯೇ ಇಲ್ಲ.

ಕೃಷ್ಣ—ಯಮುನಂದನ! ಇಚ್ಛಾಮರಣಿಯಾದ ಪಿತಾಮಹನು ಉತ್ತರಾಯಣವನ್ನು ನಿರೀಕ್ಷಿಸುತ್ತಿರುವನು. ಅಷ್ಟರೊಳಗೆ ಅವನ ಪ್ರಾಣಪಕ್ಷಿಯು ಹಾರಲಾರದು. ಸಮಾಧಿಸ್ಥನಾದ್ದರಿಂದ ಬಾಹ್ಯ ಪ್ರಪಂಚದರಿವು ಮಂದವಾಗಿದೆ. ಇದೊ ನನ್ನ ಕರಸ್ಪರ್ಶದಿಂದ ಚೈತನ್ಯ ಕಳೆಯು ಮಿನುಗುವದು (ಎಂದು ಭೀಷ್ಮನ ಮೇಲೆ ಕೈಯಾಡಿಸುವನು ಭೀಷ್ಮನು ಎಚ್ಚರಗೊಂಡು ವಂದಿಸುವನು)

ಭೀಷ್ಮ—ಇದೇನು ವಿಚಿತ್ರ ಕೃಷ್ಣಾ! ತಣಿದ ಈ ರಣಕುಂಡದಲ್ಲಿ ಪುನಃ ನಿನ್ನಾಗಮನ. ಯಮುನಂದನ! ನೀನೂ ಬಂದಿರುವೆಯಾ, ಎಲ್ಲರಿಗೂ ಕ್ಷೇಮವೇ!

ಧರ್ಮಜ—(ವಂದಿಸಿ) ಪಿತಾಮಹ! ನಮಗೆ ಆಜ್ಞಾಪಿಸು ಈ ಶೋಕಪೂರಿತ ರಾಜ್ಯದಿಂದೇನು ಪ್ರಜೋಜನ. ಅರಣ್ಯಸೇರಿ ಭಗವಧ್ಯಾನ ಮಾಡುವದರಿಂದಲೇ ನಿಜವಾದ ಮನಃಶಾಂತಿ ದೊರಕುವದು.

ಕೃಷ್ಣ—ಭೀಷ್ಮ! ಈತನ ಹುಚ್ಚುತನವನ್ನು ನೋಡು ವೈರಿಗಳನ್ನು ಸೋಲಿಸಿ ವಿಜಯದಿಂದ ಪಡೆದ ಸಾಮ್ರಾಜ್ಯವನ್ನು ತಿರಸ್ಕರಿಸುವನು. ನಾಲ್ಕು ಸಮಾಧಾನದ ಮಾತುಗಳನ್ನು ನಿನ್ನಿಂದ ಹೇಳಿಸಲು ಕರತಂದಿರುವೆನು.

ಭೀಷ್ಮ—ಧರ್ಮಜ! ಅನಾಥ ರಾಜ್ಯವನ್ನು ರಕ್ಷಿಸುವದು ಪರಮ ಶ್ರೇಯಸ್ಕರವು. ನಿನ್ನಂಥ ಕೋಟಿಕೊಟಿ ಪ್ರಜೆಗಳನ್ನು ಉದ್ಧರಿಸುವ ವಿಚಾರಬಿಟ್ಟು, ಅರಣ್ಯದಲ್ಲಿ ಕುಳಿತು ನಿನ್ನೊಬ್ಬನ ಹಿತಸಾಧಿಸುವದು ರಾಷ್ಟ್ರದ್ರೋಹವಾಗುವದು. ಇದರಲ್ಲಿ ಅನಂತಶ್ರೇಯಸ್ಸಿದೆ. ಸೊರಗಿದ

ನಿನ್ನ ಮಾತೃಭೂಮಿಯನ್ನು ಸೇವಿಸಿ ಬಲಿಷ್ಠವಾಗಿಸುವದಕ್ಕಿಂತ ಹೆಚ್ಚಿನ ಕಾರ್ಯವಾವುದು? ನಿನ್ನಂಥವನಿಂದಲೇ ತಿರಸ್ಕೃತವಾದರೆ, ಮಾತೃ ಭೂಮಿಯು ಮೃತಭೂಮಿಯಾಗದೆ? ಆ ಪಾತಕವನ್ನು ಪಡೆಯ ಲಿಚ್ಛಿಸುವಿಯಾ.

ಧರ್ಮಜ--ಇಲ್ಲ. ಪಿತಾಮಹ, ನನಗೆ ಬೇಕಾದದ್ದು ಸಮಾಧಾನ. ಅದು ನಿನ್ನ ಅನುಭವವಾಣಿಯಿಂದ ದೊರೆಯಿತು ನಿನ್ನಾಜ್ಞೆಯಂತೆ ನಡದುಕೊಳ್ಳಲು ಸದಾಸಿದ್ಧನಿರುವೆನು.

ಭೀಷ್ಮ--ಹಾಗಾದರೆ ಒಂದು ಸುಮೂಹರ್ತದಲ್ಲಿ ಸಿಂಹಾಸನವನ್ನಲಂಕರಿಸು. ನಮ್ಮ ಮಾತೃಭೂಮಿಯು ಬಂಜೆಯಲ್ಲ. ವೀರಮಾತೆಯೇ ಆಗಿರುವಳು. ನಿನ್ನ ರಾಜ್ಯಪಾಲನೆಯ ಪ್ರಭಾವದಿಂದ ಪುನಃ ಶೂರರು-ಪಂಡಿತರು-ಮೇಧಾವಿಗಳು ಜನ್ಮಿಸುವರು. ಪರಮಾತ್ಮನ ದಿವ್ಯಾನುಗ್ರಹದಿಂದ ಸಕಲ ಸಂಪತ್ತೂ ನಿಮ್ಮ ರಾಜ್ಯದಲ್ಲಿ ಪ್ರಭಾತದ ರವಿಕಿರಣದಂತೆ ಕಂಗೊಳಿಸುವದು-ನಿಶ್ಚಿಂತನಾಗಿ ರಾಜ್ಯಭಾರವಹಿಸು

ಧರ್ಮಜ--ಪಿತಾಮಹ ನಿನ್ನಂಥ ಹಿತೇಚ್ಛುಗಳನ್ನು--ಪರಮ ಪೂಜ್ಯರನ್ನು ಈ ನರಕಯಾತನೆಯಲ್ಲಿರಿಸಿದ ನಮಗಿಂತ ದ್ರೋಹಿಗಳಾರು? ನಮ್ಮಪರಾಧವನ್ನು ಕ್ಷಮಿಸು. ನಿನ್ನಾಜ್ಞೆಯು ಶಿರಸಾವಮಾನ್ಯವಿದೆ.

ಭೀಷ್ಮ—ಯುಧಿಷ್ಠಿರ! ಇದು ಯಾರಿಂದಲೂ ಆದ ಕೃತ್ಯವಲ್ಲ ನಿಮ್ಮ ಅಪರಾಧವೇನೂ ಇಲ್ಲ. ಅವರವರ ಪೂರ್ವಾರ್ಜಿತಗಳಿಗೆ ತಕ್ಕ ಪ್ರಾಯಶ್ಚಿತ್ತ ವಿಧಿಸುವ ವಿಧಿಯ ಲೀಲೆಯಿದು. ನೀವು ಯಾವಾಗಲೂ ನಿಷ್ಕಲಂಕರು. ಕುರು ಸಿಂಹಾಸನಕ್ಕೆ ನಿಜವಾದ ಯೋಗ್ಯತೆಯುಳ್ಳ ನಿಮ್ಮಿಂದ ಭರತ ವಂಶವು ಪವಿತ್ರವಾಯಿತು ಧನ್ಯವಾಯಿತು, ಇನ್ನು ಪಟ್ಟಾಭಿಷೇಕ ಮಹೋತ್ಸವವು ತೀವ್ರವಾಗಿ ನೆರವೇರಲಿ.

(ಪಾಂಡವರು ನಮಸ್ಕರಿಸಿ ಹೋಗುವರು ಪರದೆ)

(ಹಸ್ತಿನಾ ನಗರಿಯಲ್ಲಿ ಪಾಂಡವರ ಪಟ್ಟಾಭಿಷೇಕ ಮಹೋತ್ಸವ)

ಕೃಷ್ಣ—(ಎದ್ದು ನಿಂತು) ಮಾನ್ಯ ಹಿರಿಯರೇ! ಕುರುಸಿಂಹಾಸನದಲ್ಲಿ ಪಾಂಡವರು ಇಂದು ವಿಧಿಪೂರ್ವಕವಾಗಿ ಪ್ರಕಾಶಿಸುವರು ಆದರ್ಶ ಧರ್ಮರಾಜ್ಯದ ಪ್ರಸ್ಥಾಪನೆಯ ಸುದಿನ. ಆದ್ದರಿಂದ ನಿಮ್ಮ ಆಶೀರ್ವಾದವು ಪಾಂಡವರಿಗೆ ಅನುಗ್ರಹಿಸಲ್ಪಡಲಿ

ಧೃತರಾಷ್ಟ್ರ—ಅಣ್ಣನಾದ ಪಾಂಡುಚಕ್ರವರ್ತಿಯು ಕುರು ಸಿಂಹಾಸನವನ್ನು ವಿಧಿಪೂರ್ವಕವಾಗಿ ಅಲಂಕರಿಸಿದ್ದನು. ಇಷ್ಟೆ ಅಲ್ಲ ಸಮ್ರಾಟನಾಗಿ ಮೆರೆದನು. ಅದೇ ಸಿಂಹಾಸನವನ್ನು ನನ್ನ ಮಕ್ಕಳಂತಿ ರುವ ಅಣ್ಣನ ಕುಮಾರರು ಅಲಂಕರಿಸುವದೆಂದರೆ ಯಥಾಯೋಗ್ಯ. ಪಾಂಡುಪುತ್ರರಿಗೆ ಚಿರಮಂಗಲವಾಗಲಿ.

ಗಾಂಧಾರಿ—ನನ್ನ ಮಕ್ಕಳಿಗಿಂತಲೂ ಸತ್ಯಸಂಧರು-ಶೂರರು-ಜನ ಪ್ರಿಯರಾದ ಪಾಂಡವರು ಆದರ್ಶ ರಾಜ್ಯವನ್ನು ಬೆಳಗಿಸಲಿ.

ಕುಂತಿ—ನನ್ನ ಬಹುದಿನದ ಕನಸು ನೆನಸಾಯಿತು ಕುಂತೀ ಪುತ್ರರಿಗೆ ವನವಾಸವೆನ್ನುವದು ಬದಲಾಗಿ ಇಂದು ಸಿಂಹಾಸನವೆನ್ನುವದು ಸ್ಥಿರವಾಯಿತು. ಇನ್ನು ನಾನು ಧನ್ಯಳು. ಹಸ್ತಿನಾನಗರಿಯಲ್ಲಿ ಎಂದೂ ಇಲ್ಲದ ಆನಂದೋತ್ಸಾಹವು ತುಂಬಿ ತುಳುಕುತ್ತಿದೆ. ನಂದನರೆ! ನಿಮ್ಮ ರಾಜ್ಯವು ಅಮರರಾಜ್ಯವಾಗಿ ಬಾಳಲಿ.

ವಿದುರ—ಇಂದು ಭಾರತದ ಮೂಲೆಮೂಲೆಯಲ್ಲಿಯೂ ಆನಂ ದೋತ್ಸಾಹವು ಪ್ರತಿಧ್ವನಿಸುತ್ತಿದೆ. ಪ್ರತಿಯೊಬ್ಬನ ಮುಖವೂ ಕಳೆ ಗೊಂಡು ಸಂತೋಷವು ನಲಿಯುತ್ತಿದೆ. ಇಷ್ಟೊಂದು ಪ್ರಜಾಪ್ರಿಯ ರಾದ ಪಾಂಡವರು ರಾಜ್ಯದ ಅಧಿಕಾರ ಸ್ವೀಕರಿಸುವದು ಮಾನವಕುಲಕ್ಕೇ ಭೂಷಣಪ್ರಾಯ. ನಿಮ್ಮ ರಾಜ್ಯವು ವಿಶ್ವಾದರ್ಶವಾಗಿ ಜ್ವಲಿಸಲಿ.

ಕೃಷ್ಣ—ಪುರೋಹಿತರೇ! ಇನ್ನು ಪಟ್ಟಾಭಿಷೇಕ ಮಹೊತ್ಸವವು ಸಾಗಲಿ. ಸಭಿಕರೇ, ಪಾಂಡವರ ಪಟ್ಟಾಭಿಷೇಕಕ್ಕೆಲ್ಲರ ಸಮ್ಮತಿಯಷ್ಟೇ!

ಸಭಿಕರು—ಹೌದು ಪಾಂಡವರಂಥಹ ರಾಜರು ನಮಗೆಂದಿಗೂ ದೊರಕಲಾರರು. ಪಾಂಡವರನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸು ವೆವು (ಕರತಾಡನದೊಂದಿಗೆ ಸಭೆಯು ಗದ್ದಲವಾಗಿ ಶಾಂತವಾಗುವದು)

ಭಿಕ್ಷುಕ—ಇಲ್ಲ. ಇಲ್ಲ. ಪಾಂಡವರು ಕುರು ಸಿಂಹಾಸನಕ್ಕೆ ಯೋಗ್ಯರಲ್ಲ. ಧರ್ಮಜ! ಸಿಂಹಾಸನದಿಂದ ಇಳಿದು ಬಾ.

ಋಷಿಸಮೂಹ—ಏನು ನಿನಗೆ ಬುದ್ಧಿ ಭ್ರಂಶವಾಗಿದೆಯೇ! ವಿಚಾ ರಿಸಿ ಹೇಳು ಮೂರ್ಖಾ! ಶಿವಪೂಜೆಯಲ್ಲಿ ಬಂದ ಕರಡಿಯಾಗಬೇಡ

ಭಿಕ್ಷುಕ—ಚೆನ್ನಾಗಿಯೇ ವಿಚಾರಿಸಿದ್ದೇನೆ. ಬುದ್ಧಿ ಭ್ರಂಶವು

ನಿಮಗೆ-ನನಗಲ್ಲ ಈ ಕುರು ಸಿಂಹಾಸನದಲ್ಲಿ ಪಾಂಡವರಿಗೆ ಹಕ್ಕು ದೊರೆಯಲಾರದು ಎಚ್ಚರಿಕೆಯಿಂದ ಮಾತನಾಡಿರಿ

ಧರ್ಮಜ—ಹಾಗಿದ್ದರೆ ಈ ಸಿಂಹಾಸನವು ನಮಗೇಕೆ. ಕೃಷ್ಣಾ. ಪ್ರಜೆಗಳ ಒಪ್ಪಿಗೆಯಿಲ್ಲದೆ ರಾಜ್ಯಾಧಿಕಾರವೇಕೆ?

ಋಷಿಸಮೂಹ—(ಸಿಟ್ಟಿನಿಂದ) ಹುಂ ಭ್ರಷ್ಟಾ! ಕೇಳು ಮತ್ತೇನು ಹೇಳು, ಶ್ವಾನ ಒದರಿದರೆ ಇಂದ್ರ ಸಿಂಹಾಸನ ಉರುಳು ವದೇ? ಇದೇ ನಿನಗೆ ಕೊನೆಯ ಕಾಲ! (ಕಿಡಿಗಣ್ಣಿನಿಂದ ನೋಡಲಾಗಿ ಜ್ವಾಲೆಯೆದ್ದು ಅವನನ್ನು ಭಸ್ಮ ಮಾಡುವದು, ಸಭಿಕರು ಸ್ತಂಭಿತ ರಾಗುವರು)

ಧರ್ಮಜ—(ವ್ಯಸನದಿಂದ) ಇದೇನು ಸಿಂಹಾಸನಾರೋಹಣಕ್ಕೆ ಅಪಶಕುನ. ಶುಮುಹೂರ್ತದಲ್ಲಿ ಭಿಕ್ಷುಕನ ಮರಣ ಈ ವಿಘ್ನ ಪರಂಪರೆಗಳ ಆಘಾತದಿಂದ ಹೃದಯ ಜರ್ಜರವಾಗುತ್ತಿದೆ.

ಕೃಷ್ಣ—ಇದು ಅಪಶಕುನವಲ್ಲ ಧರ್ಮನಂದನ! ನಿನ್ನನ್ನು ಸಮಾ ಧಾನಪಡಿಸುವದೂ ಒಂದು ಕಷ್ಟಕರವಾದ ಕೆಲಸವೇ ಆಗಿದೆ ಆಗಲಿ ಆ ಮೂರ್ಖನು ಭಿಕ್ಷುಕನಲ್ಲ. ಸಂಶಪ್ತಕ ಗಣದಲ್ಲಿಯ ಪ್ರಮುಖ ನೊಬ್ಬನು. ಪಾಂಡವರ ಸಿಂಹಾಸನಾರೋಹಣಕ್ಕೆ ಭಂಗ ತರುವೆನೆಂದು ಕೌರವನಿಗೆ ಭಾಷೆ ಕೊಟ್ಟು ಭಾರತ ಯುದ್ಧಾನಂತರ ತಲೆಮರೆಸಿ ಕೊಂಡು ಈ ಸಮಯ ಕಾಯುತ್ತಿದ್ದನು. ಅವನ ದುಷ್ಟ ಹೇತುವನ್ನ ರಿತ ಋಷಿ ಸಮೂಹವು ಹುಂಕರಿಸಿತು. ತಪಸ್ವಿಗಳ ಹುಂಕಾರದಿಂದ ಓರ್ವ ದುಷ್ಟನಿಗೆ ತಕ್ಕಶಾಸನವಾಯಿತು ರಾಜ್ಯಸೂತ್ರ ನಿರ್ಮಲ ವಾಗಿ—ಶಾಂತಿ ನೆಲಸಬೇಕಾದರೆ ಇಂಥ ದುರಾತ್ಮರ ಶಾಸ್ತಿಯಾಗುವಮ ಯಥಾಯೋಗ್ಯ ಇದು ಶುಭ ಸೂಚನೆ ಹೊರತು ಅಪಶಕುನವಲ್ಲ

(ಅಷ್ಟಕ್ಕೆ ಯುಯುತ್ಸುವು ವೃಷಕೇತುವಿನೊಂದಿಗೆ ಪ್ರವೇಶಿಸುವನು)

ಯುಯುತ್ಸು—ಅಣ್ಣಾ! ಧರ್ಮನಂದನ ಇದೋ ನಿಮ್ಮೆಲ್ಲರಿಗೂ ಜ್ಯೇಷ್ಠನಾದ ಕರ್ಣನ ಪುತ್ರ ವೃಷಕೇತು ತಬ್ಬಲಿಯಾಗಿ ಬಂದಿದ್ದಾನೆ.

ಧರ್ಮಜ—ವೃಷಕೇತು ಬಾ ಮಗನೆ- ನೀನೊಬ್ಬನಾದರೂ ಪಾಂ ಡುವಂಶದಲ್ಲಿ ನಮ್ಮೆಲ್ಲರ ನೆಮ್ಮದಿಗೆ ಆಶ್ರಯವಾಗಿ ಬದುಕಿದೆಯಾ! ಬಾ ವೃಷಕೇತು (ಆಲಂಗಿಸಿ) ನಿನಗೆ ತಂದೆಯಿಲ್ಲ ನಮಗೆ ಮಕ್ಕಳಿಲ್ಲ ಇಂದಿ

ನಿಂದ ನಾವು ತಂದೆ ಮಕ್ಕಳು! ಕೃಷ್ಣಾ! ನನ್ನ ಪಟ್ಟಾಭಿಷೇಕಕೆ ಮುಂಚಿತವಾಗಿ ಈ ವೃಷಕೇತುವಿಗೆ ಯುವರಾಜ ಪಟ್ಟಾಭಿಷೇಕವಾಗಲಿ (ಕರತಾಡನವಾಗುವದು ವೃಷಕೇತುವಿನ ಪಟ್ಟಾಭಿಷೇಕವಾಗುವದು.)

ವೃಷಕೇತು—(ಎದ್ದುನಿಂತು) ಪೂಜ್ಯ ಹಿರಿಯರೆ, ಅಜ್ಞನಾದ ನನಗೆ ಪುತ್ರಭಾವನೆಯಿಂದ ಅಂತಃಕರಣ ಪೂರ್ವಕವಾಗಿ ಯುವರಾಜ್ಯಪಟ್ಟ ವನ್ನು ಒಪ್ಪಿಸಿದ ನಿಮಗೆ ನಾನು ಕೃತಜ್ಞನು. ನೀವೇ ನನ್ನ ಸರ್ವಸ್ವ. ನಿಮ್ಮ ಆಶ್ರಯವೇ ನನಗೆ ಸುಖದ ಸಾಮ್ರಾಜ್ಯ ನಿಮ್ಮ ಆಶೀರ್ವಾದವು ಸದಾ ನನ್ನನ್ನು ರಕ್ಷಿಸಲಿ.

ಕೃಷ್ಣ—ವೃಷಕೇತು! ನಿನಗೆ ಮಂಗಲವಾಗಲಿ.

ಧರ್ಮಜ—ಯುಯುತ್ಸು! ನಿನ್ನ ನ್ಯಾಯನಿಷ್ಠುರತೆಯು ಆದರ್ಶ ವಾದದ್ದು. ಅನುಪಮವಾದದ್ದು. ಎಲ್ಲಕ್ಕೂ ನಿನ್ನ ತ್ಯಾಗ ಮತ್ತೂ ಹೆಚ್ಚಿನದು- ನಾವು ಆರುಮಂದಿ ಬಂಧುಗಳಾಗಿ ಜನಿಸಿದ್ದೆವು- ಅಜ್ಞಾತನಾಗಿ ಕರ್ಣನು ಮೃತನಾದನು- ನ್ಯಾಯದೇವತೆಯು ನಿನ್ನನ್ನುಳಿಸಿತು. ಇನ್ನು ಆರು ಮಂದಿ ಬಂಧುಗಳಾಗಿಯೇ ಬಾಳೋಣ

ಯುಯುತ್ಸು—ಯಮನಂದನ! ನಿನ್ನಿಚ್ಛೆಯಿದ್ದಂತಾಗಲಿ.

ಧರ್ಮಜ— ಪೂಜ್ಯರೇ, ಹಿರಿಯರೇ, ತಪಸ್ವಿಗಳೇ ಪಟ್ಟಾಭೀಷೇಕಕ್ಕೆ ತಮ್ಮೆಲ್ಲರ ಅಪ್ಪಣೆಯನ್ನು ಅಪೇಕ್ಷಿಸುತ್ತೇನೆ. ಆಶೀರ್ವದಿಸಿರಿ.

ಕೃಷ್ಣ—ಬಾಲ ರವಿಯ ಕಿರಣ ರಶ್ಮಿಯು ಅಂಧಕಾರದ ಸತ್ತೆಯನ್ನು ಹೊಡೆದೋಡಿಸಿ - ವಿಶ್ವದಮೂಲೆ ಮೂಲೆಯನ್ನೂ ವ್ಯಾಪಿಸಿ-ಪ್ರಾಣಿ ಮಾತ್ರಕ್ಕೂ ಚೈತನ್ಯದ ಕಳೆಯನ್ನು ತುಂಬಿ ಮತ್ತೂ ಉಜ್ವಲವಾಗಿ ಪ್ರಕಾಶಿಸುತ್ತಿವೆ. ಇದರಂತೆ ನೀವು ದಾಸ್ಯ ತ್ಯಾಗ-ಬಲಿದಾನ-ಮುಂತಾಗಿ ಅಪಾರ ಕಷ್ಟಗಳಿಂದ ಸ್ಥಾಪಿಸಿದ ಸ್ವತಂತ್ರ ಸ್ವರಾಜ್ಯವು ವಿಶ್ವಪೀಠದಲ್ಲಿ ಚಿರಂತನವೂ ವಿರಾಜಿಸಲಿ. ನಿಮ್ಮ ಪ್ರಭುತ್ವವು ಪ್ರತಿಯೊಬ್ಬ ಪ್ರಜೆಯ ಪ್ರೇಮಮಂದಿರದ ಆರಾಧ್ಯ ದೇವತೆಯಾಗಲಿ.

(ಋಷಿಗಳು ವೇದಘೋಷದಿಂದ ಪಾಂಡವರಿಗೆ ಪಟ್ಟಾಭಿಷೇಕ ಮಾಡುವರು ಪಾಂಡವರು ಕೃಷ್ಣನನ್ನು ಸ್ತುತಿಸುತ್ತಿರುವಾಗ ಪರದೆ ಬೀಳುವದು)

ನವಯುಗ ಪ್ರೆಸ್, ಉಡುಪಿ.

-: ಸಂಗ್ರಾಹ್ಯ ಪ್ರಕಟಣೆಗಳು :-

1 ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ ರೂ. 1-50

(ಮೂಲ: ಜೇಮ್ಸ್ ಬಿ. ಕೊನೇಂಟ್

ಅನು: ಉಡುಪಿ ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.)

ವಿಜ್ಞಾನದ ಪ್ರಗತಿ, ವಿಜ್ಞಾನಿಯ ಸ್ಥಾನಮಾನ, ಧ್ಯೇಯ ಸಾಧನೆಗಳನ್ನು ಪ್ರಸ್ತಾಪಿಸಿ, ಇಂದು ವಿಚಾರ ಪ್ರಪಂಚದಲ್ಲಿ ಎಂತಹ ಕ್ರಾಂತಿ ಉದ್ಭವಿಸಿದೆ ಎಂಬುದನ್ನು ಮಾರ್ಮಿಕವಾಗಿ ಪ್ರತಿಪಾದಿಸುವ ವಿಚಾರದ ನವೀನತೆಯ ಗ್ರಂಥ.

2 ನಡುಹಗಲಿನ ಕಗ್ಗತ್ತಲೆ (ಆರ್ಥರ್ ಕೊಸ್ಲರ್) ರೂ. 2-50

ಅನು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಹೃದಯ ವಿದ್ರಾವಕ ಸನ್ನಿವೇಶಗಳಿಂದಲೂ, ರೋಮಾಂಚಕ ದೃಶ್ಯಗಳಿಂದಲೂ ತರ್ಕದ ಪ್ರಖರತೆಯಿಂದಲೂ ಕೂಡಿರುವ ರಾಜಕೀಯ ಕಾದಂಬರಿ.

3 ಶಿಕ್ಷಣದ ಧ್ಯೇಯಗಳು ರೂ. 2.25

(ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್) ಅನು: ಕೆ. ಬಿ. ರಾಮಕೃಷ್ಣ ರಾವ್ & ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.

ವಿದ್ಯಾರ್ಥಿಗಳ ಆಸೆ ಕುತೂಹಲಗಳನ್ನು ಪ್ರಚೋದಿಸಿ, ಎಲ್ಲರ ಉದ್ಧಾರವನ್ನೆಸಗುವುದು ಶಿಕ್ಷಣದ ಗುರಿಯೆಂದೂ ಪ್ರತಿ ವಿದ್ಯಾರ್ಥಿಯೂ ತನ್ನ ಆತ್ಮೋದ್ಧಾರವನ್ನೆಸಗುವಂತೆ ಶಿಕ್ಷಕರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕೆಂಬುದನ್ನೂ, ವಿವರಿಸುವ ಅಧ್ಯಯನ ಅಧ್ಯಾಪನ ಕ್ರಮಗಳಿಗೆ ಸಂಬಂಧಿಸಿದ ಬೌದ್ಧಿಕ ವಿಚಾರಗಳ ಗ್ರಂಥ.

4 ಸ್ವಾತಂತ್ರ್ಯ ಮತ್ತು ಸಂಸ್ಕೃತಿ ರೂ. 2-50

(ಜಾನ್ ಡ್ಯೂಯಿ) ಅನು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಜಾತಂತ್ರದ ಹೊಸಲಲ್ಲಿ ಇದೀಗ ಕಾಲಿಟ್ಟಿರುವ ಭಾರತೀಯರಿಗೆ ಮಾರ್ಗಸೂಚಕವಾದ ಓದಲೇ ಬೇಕಾದ ಉದ್ಗ್ರಂಥ.

5 ಹಿರೋಶಿಮಾದಿಂದ ಜಿನೇವ ರೂ. 1-50

(ಯು. ರಾಘವೇಂದ್ರಾಚಾರ್ಯ)

ವಿಜ್ಞಾನದ ಪ್ರತಿಯೊಂದು ವಿಷಯವನ್ನೂ ಅದರ ಮೂಲ ಭೂತಾಂಶಗಳ ತಳಹದಿಯ ಮೇಲೆ ತಿಳಿಸಿ ಹೇಳುವ ಅತ್ಯಪೂರ್ವ ಅತ್ಯುಪಯುಕ್ತ ಗ್ರಂಥ.

6 ಮೋಹದ ಮಹಾಜಾಲ ರೂ. 1·75

(ವೀರಪ್ಪ ಯಗಟಿ, ಬಿ. ಎ., ಎಲ್ಎಲ್. ಬಿ.)

ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಮತ್ತು ಸತ್ಯವರ್ತನೆಯಿಂದ ಪರಿಹಾರವಾಗುವುವು ಎಂಬುದನ್ನು ವಿವರಿಸುವ ಮನೋರಂಜಕ ಕಾದಂಬರಿ.

7 ಭಾರತೀಯ ಮಹಾ ಪುರುಷರು ರೂ. 1·50

(ಎಸ್. ಗೋಪೀಚಂದ ರಾವ್)

ಭಾರತದ ಹನ್ನೆರಡು ಮಹಾಪುರುಷರ ಜೀವನ ಚರಿತ್ರೆ, ಅವರು ಲೋಕಕ್ಕೆ ಸಾರಿದ ನೀತಿಸಾರ, ಮಾಡಿದ ಮಾರ್ಗದರ್ಶನಗಳನ್ನು ವಿವರಿಸುವ ಪುಸ್ತಕ.

8 ಕಥಾ ಕೌಮುದಿ (ಎಸ್. ಗೋಪೀಚಂದ ರಾವ್) ರೂ. 1-50

ಪ್ರಣಯ ಕಥೆಗಳಿಂದ ವಿಭಿನ್ನವಾಗಿದ್ದು ನೀತಿಬೋಧಕ ಹಾಗೂ ಸಮಾಜದ ಸಮಸ್ಯಾ ನಿರೂಪಣೆ ಮಾಡುವ ಕಥೆಗಳ ಸಂಗ್ರಹ

9 ಅದೃಷ್ಟಶಾಲಿ ರಾಷ್ಟ್ರ ನಾಯಕ ಜಾರ್ಜ್ ವಾಶಿಂಗ್‌ಟನ್

(ಜಿನೇ ಇಯೇಟನ್) ರೂ. 1-25

ಅನು: ಉಡುಪಿ ಲಕ್ಷ್ಮೀನಾರಾಯಣಾಚಾರ್ಯ,

ಎಂ. ಎ., ಎಲ್. ಟಿ.

ಜಾರ್ಜ್‌ವಾಶಿಂಗ್‌ಟನ್ನನ ಬಾಲ್ಯ, ಯವ್ವನದ ಸಾಹಸಮಯ ಜೀವನ ಚಿತ್ರಿಸಿ ಈತ ಅಮೇರಿಕದ ಸ್ವಾತಂತ್ರ್ಯ ಸ್ಥಾಪಿಸುವುದಕ್ಕಾಗಿ ಹೆಣಗಿದನು ಎಂಬುದನ್ನು ವಿವರಿಸುವ ಜೀವನ ಚರಿತ್ರೆ.

10 ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್ಟ, ಎಂ. ಎಂ.)
ರೂ. 2-00

ಆಗ್ನೇಯ ಮತ್ತು ದಕ್ಷಿಣ ಏಶಿಯೊದ ರಾಷ್ಟ್ರಗಳ ರಾಜಕೀಯ ಪ್ರಭಾವಗಳನ್ನೂ ಆರ್ಥಿಕ ಚಿತ್ರಗಳನ್ನೂ ವಿವರಿಸುವ ವಿಚಾರಪೂರ್ಣ ಗ್ರಂಥ.

11 ಭಾವಾರ್ಜನೆ (ನಚಿಕೇತ) ರೂ. 1-25

ಸರಳವೂ ಮನೋಹರವೂ ಆದ ಭಾವನಾಪೂರ್ಣ ಕಾದಂಬರಿ.

12 ಅಮೇರಿಕದ ಆರು ಕಥೆಗಳು ರೂ. 1—75

(ಅನು: ಕು. ಶಿ. ಹರಿದಾಸ ಭಟ್ಟ, ಎಂ. ಎ.)

ಅಮೆರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾ ಸಂಕಲನ. ಅಮೇರಿಕದ ಗ್ರಾಮ ಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವ ವೈಶಿಷ್ಟ್ಯಪೂರ್ಣ ಕಥಾ ಸಂಕಲನ.

13 ಋಣ ಯಾತ್ರೆ (ನಚಿಕೇತ) ರೂ. 1-50

ಅಪೂರ್ವ ಸನ್ನಿವೇಶಗಳಿಂದ ರೂಪುಗೊಂಡಿರುವ ಮನೋಹರ ಕಾದಂಬರಿ.

14 ಚಿತ್ರಾಂಗದೆ (ಡಾ| ರವೀಂದ್ರನಾಥ ಟಾಗೂರ್) ರೂ. 0-60

ಅನು: ಕೆ. ಕೆ. ಸೆಟ್ಟಿ, ಎಂ. ಎಲ್. ಸಿ.

ಕವೀಂದ್ರ ರವೀಂದ್ರನಾಥ ಠಾಗೋರರ 'ಚಿತ್ರ' ನಾಟಕದ ಅನುವಾದ.

15 ರವೀಂದ್ರರ ಕಿರುಗತೆಗಳು (ಹನುಮಂತ್ರಾವ್ ಮಾಂಜ್ರೇಕರ)
ರೂ. 0-90

ರವೀಂದ್ರನಾಥ ಠಾಗೋರರ, ಸೌಂದರ್ಯದಲ್ಲಿ, ಹೃದಯ ಸ್ಪರ್ಶತೆಯಲ್ಲಿ ಭಾವಸ್ಪಂದನದಲ್ಲಿ ಅತ್ಯುಚ್ಚವಿರುವ ಕಿರುಗತೆಗಳ ಸಂಗ್ರಹ

16 ಹಸುರು ಹಂಸ (ನಚಿಕೇತ) ರೂ. 2-00

ಬದುಕಿನ ಆದರ್ಶ ಗುಣಗಳನ್ನು ಮನಗಾಣಿಸುವ ನವೀನ ಕಾದಂಬರಿ.

17 ಬಿರಿದ ಮುಗುಳು (ಎಸ್. ಗೋಪೀಚಂದರಾವ್) ರೂ. 1-50

ವಿವಿಧ ಸಂದರ್ಭ-ಸನ್ನಿವೇಶಗಳಿಂದ ಕೂಡಿದ ಹನ್ನೆರಡು ಕತೆಗಳ ಉತ್ತಮ ಸಂಕಲನ

18 ಭಾರತದ ವೀರಾಂಗನೆಯರು ರೂ

ಕೆ. ಎನ್. ಭಟ್ ಶಿರಾಡಿಪಾಲ್

ಭಾರತೀಯ ವೀರ ರಮಣಿಯರ ಸಾಹಸಮಯ ಜೀವನ ಘ
ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ನಾರೀಶಕ್ತಿಯನ್ನು ಪ್ರ
ವೀರಾಂಗನೆಯರ ಐತಿಹಾಸಿಕ ಗ್ರಂಥ! ತ್ರಿವರ್ಣ ರಕ್ಷಾಕವಚ

19 ಮೇರಿ ಕೊಟ್ಟ ಬೆಂಡೋಲೆ (ಅಚ್ಚಿನಲ್ಲಿದೆ)

ಎಸ್. ಸದಾಶಿವ ರಾವ್

ಜೀವನದ ವಿವಿಧ ಘಟನೆಗಳನ್ನು ಚಿತ್ರಿಸುವ ಕಥಾ ಸಂಕ

20 ಭಾರತದ ಅಂಗ ಕಾಶ್ಮೀರ ರೂ

(ಎಂ. ರಘುನಂದನ ರಾವ್)

ಕಾಶ್ಮೀರವು ಭಾರತದ ಅವಿಭಾಜ್ಯ ಭೂಮಿ ಎಂಬುದನ್ನೂ
ಧೋರಣೆಯನ್ನೂ ವಿವರಿಸುವ ಚಿಕ್ಕ ಪುಸ್ತಕ.

21 ಗೋವಿಜಯ (ಮುಖ್ಯಪ್ರಾಣ ಉಪಾಧ್ಯಾಯ) ರೂ

ಯಕ್ಷಗಾನ ರೂಪದಲ್ಲಿ ಬರೆಯಲಾದ ಗೋವಿನ ಕಥೆ.

22 ಹರಿಭಕ್ತಿಸಾರ (ಕನಕದಾಸ) ರೂ

ಪರಮಾತ್ಮನ ಗುಣಕಥನವನ್ನೂ ಮಹಿಮೆ ವರ್ಣ
ಮಾಡಿ, ಸತ್ಕಾರ್ಯಗಳಲ್ಲಿ ತತ್ಪರರಾಗುವಂತೆ ಮಾಡುವ ಕಾವ್ಯ

23 ವೈಯ್ಯಕ್ತಿಕ ಆರೋಗ್ಯ

(ವಿನಾಯಕರಾವ್ ಬಾಪಟ) ರೂ

ಆರೋಗ್ಯ ರಕ್ಷಣೆಯ ಶಾಸ್ತ್ರೀಯ ಪುಸ್ತಕ.

24 Letter Writting Made Easy ರೂ

(ಸುಲಭದಲ್ಲಿ ಪತ್ರಲೇಖನ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

25 ಗೀತೆಯ ಕೈಗನ್ನಡಿ ರೂ

ದಿ। ಹೊಸಕೆರೆ ಚಿದಂಬರಯ್ಯನವರ ಗೀತೆಯ
ಭಾಷಾಂತರ.

ಪ್ರತಿಗಳು ಸಿಗುವ ಸ್ಥಳಗಳು— ನವಯುಗ ಪ್ರೆಸ್,

2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಪರಾಮರ್ಶೆಗಾಗಿ